ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ದಾವಣಗೆರೆ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಸಹನಾ ಚೇತನ್**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**DAVANAGERE**: An Introducing Book on the Places in Karnataka that Played a Major Role in the Freedom Struggle, Written by Sahana Chetan, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಸಹನಾ ಚೇತನ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯ ಯಾರಿಗೆ ತಾನೆ ಪ್ರಿಯವಲ್ಲ? ರೆಕ್ಕೆ ಬಿಚ್ಚಿ ಹಾರುವ ಹಕ್ಕಿ, ತಾಯಿಯ ಗರ್ಭದಿಂದ ಹೊರಬಂದ ನವಜಾತ ಶಿಶು, ಮೊಗ್ಗಿನಿಂದ ಅರಳುವ ಹೂವು, ಬೀಜದಿಂದ ಮೊಳೆಯುವ ಮೊಳಕೆ ಎಲ್ಲವೂ ಸ್ವಾತಂತ್ರ್ಯಕ್ಕಾಗಿಯೇ ಹಾತೊರೆಯುವುದು. ಸ್ವಾತಂತ್ರ್ಯವಿಲ್ಲದೆ ಯಾವ ಜೀವಿಯೂ ಕೂಡ ಬದುಕಲಾರದು. ಅಂತಹದರಲ್ಲಿ ಒಂದು ದೇಶವನ್ನೇ ಮತ್ತೊಂದು ದೇಶ ಆಳುವುದೆಂದರೆ ಅದಕ್ಕಿಂತ ಅಮಾನವೀಯ, ಮೌಲ್ಯರಹಿತ ಭಾವ ಮತ್ತೊಂದಿಲ್ಲ. ಉಸಿರುಗಟ್ಟಿದ ವಾತಾವರಣದಲ್ಲಿ, ನಮ್ಮವರಲ್ಲದ ಆಳುವ ಜನರೊಡನೆ, ನಮ್ಮತನವನ್ನು ಮರೆವ ವಿಕೃತ ವಾಸ್ತವದಲ್ಲಿ ಬದುಕುವುದು ಎಂಥವನನ್ನೂ ದಿಗ್ಭ್ರಮೆಗೊಳಿಸುತ್ತದೆ.

ಅಂತಹ ಹಲವು ದುರಂತದ ಇತಿಹಾಸವನ್ನು ನಾವು ಈಗಾಗಲೇ ನಮ್ಮ ಕಣ್ಣಾರೆ ನೋಡಿಲ್ಲವಾದರೂ ಕಿವಿಯಾರೆ ಕೇಳಿದ್ದೇವೆ. ಇಂತಹ ಕ್ರೌರ್ಯಮಯ ಇತಿಹಾಸ ಕೊನೆಗೊಂಡಿದ್ದಕ್ಕೆ ಈಗ ೭೫ರ ನೆನಪು. ನಮ್ಮ ಭಾರತದ ಇತಿಹಾಸವನ್ನೇ ನಾವು ನೋಡುವುದಾದರೆ ಸುಮಾರು ೨೦೦ ವರ್ಷಕ್ಕೂ ಅಧಿಕ ಕಾಲ ನಮ್ಮನ್ನಾಳಿದವರು ಆಂಗ್ಲರು. ನಮ್ಮ ಸರ್ವಸಂಪದ್ಭರಿತ ದೇಶದಲ್ಲಿ ವ್ಯಾಪಾರಕ್ಕೆಂದು ಬಂದು ತಮ್ಮ ವಸಾಹತನ್ನು ಸ್ಥಾಪನೆಗೊಳಿಸಿದರು. ದೇಶದ ಎಲ್ಲಾ ಸಂಪತ್ತನ್ನು ಲೂಟಿ ಮಾಡಿದರು. ಸಾಲದ್ದಕ್ಕೆ ತಮ್ಮ ರಂಗುರಂಗಿನ ಒನಪುವಯ್ಯಾರಗಳನ್ನು ತೋರ್ಪಡಿಸುತ್ತಾ, ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಯುವಜನರನ್ನು ಸೆಳೆದುಕೊಂಡದ್ದು ಇಂದಿಗೂ ಆ ದಾಸ್ಯ ಹಾಗೆಯೇ ಮುಂದುವರೆದಿದೆ.

ದೇಶದಾದ್ಯಂತ ಆಂಗ್ಲರ ದಾಸ್ಯದಿಂದ ಮುಕ್ತವಾಗಲು ಹಲವು ಸಂಗ್ರಾಮಗಳು, ಚಳುವಳಿಗಳು ಅವಿರತವಾಗಿ ನಡೆಯುತ್ತಲೇ ಇದ್ದವು. ಹಳ್ಳಿಯಿಂದ ದಿಲ್ಲಿಯವರೆಗೂ, ಮಹಾರಾಜರುಗಳಿಂದ ಸಾಮಾನ್ಯ ಹದಿಹರೆಯದ ಯುವಕನವರೆಗೂ ಸತ್ಯಾಗ್ರಹಕ್ಕೆ ಧುಮುಕಿ ತಮ್ಮ ಬಲಿದಾನಗೈದರು. ಈ ಸಂದರ್ಭದಲ್ಲಿ ಪ್ರಮುಖ ಸ್ಥಳಗಳ ಘಟಾನಾವಳಿಗಳು ದಾಖಲೆಗೊಂಡವೇ ಹೊರತು ಸಣ್ಣಪುಟ್ಟ ಹಳ್ಳಿ ಹಾಗೂ ಶಹರಗಳಲ್ಲಿ ನಡೆದ ಘಟನೆಗಳು ಆ ಊರಿಗೇ ಸೀಮಿತವಾದವು. ಈ ನಿಟ್ಟಿನಲ್ಲಿ ಹರಿಹರ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಕೆಲವು ಮುಖ್ಯ ಭಾಗಗಳು ಚಿರಪರಿಚಿತವಾದರೂ, ಪರಿಚಯವೇ ಇಲ್ಲದ ಅಧ್ಯಾಯಗಳು ಬಹಳಷ್ಟಿವೆ. ಅದನ್ನು ನಿಮ್ಮ ಮುಂದೆ ಪಾರದರ್ಶಕವಾಗಿ ತೆರೆದಿಡುವ ಪ್ರಯತ್ನ ಮಾಡಲಾಗಿದೆ.

ಈ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಹಲವು ಊರುಗಳು, ಜಿಲ್ಲಾವಾರು ತಾಲ್ಲೂಕುವಾರು ಕ್ಷೇತ್ರವಾಗಿ ವಿಂಗಡಣೆಯಾದಾಗ, ಅವುಗಳು ದಾವಣಗೆರೆ ಜಿಲ್ಲೆಗಳಲ್ಲಿ ಸೇರಿದವು. ಪ್ರಸ್ತುತ ಚಿತ್ರದುರ್ಗದ ಹಲವು ತಾಲ್ಲೂಕುಗಳು ದಾವಣಗೆರೆ ಜಿಲ್ಲೆಯ ಸುಪರ್ದಿಗೆ ಬರುತ್ತವೆ. ಈ ದೃಷ್ಟಿಯಿಂದ ಇಲ್ಲಿ ಚಿತ್ರದುರ್ಗ, ದಾವಣಗೆರೆ ಹಾಗೂ ಹರಿಹರದ ಜೊತೆಗೆ ಅದರಲ್ಲಿ ಅಡಗಿರುವ ಹಲವು ಹಳ್ಳಿಗಳ ಹಾಗೂ ಕ್ಷೇತ್ರದ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ಬೆಳಕಿಗೆ ತಂದಿರುತ್ತೇನೆ.

ಒಂದು ಹೆಮ್ಮರದ ಕಾಂಡದಿಂದ ಒರತೆಯಾಗುವ ಚಿಗುರು, ರೆಂಬೆ, ಕೊಂಬೆ, ಎಲೆ ಹೂವುಗಳು, ಬಿಳಲುಗಳನ್ನು, ಅವುಗಳ ನಿರ್ಮಾಣವನ್ನು, ಪದರ ಪದರವಾಗಿ ಯಥಾವತ್ತಾಗಿ ಕಥಾನಕದ ಮೂಲಕ ಪರಿಚಯಿಸುತ್ತಿರುವ ಸಣ್ಣ ಪ್ರಯತ್ನ ಇದು. ಮೆಚ್ಚುಗೆಯಾಗುವುದೋ ಇಲ್ಲವೋ ಗೊತ್ತಿಲ್ಲ; ಒಪ್ಪಿಗೆಯಾದರೆ ಅಷ್ಟೇ ಸಾಕು...

ಈ ಲೇಖನವನ್ನು ಸಂಪೂರ್ಣ ನಿಖರವಾದ ಮಾಹಿತಿಯಿಂದ ಹೊರತರಲು ಸಹಕರಿಸಿದ ಬಳಗದ ವಿಸ್ತಾರ ಊಹಿಲಸಾಧ್ಯ. ಆದರೂ ಹನಿಹನಿಗೂಡಿದರೆ ಹಳ್ಳ ಎಂಬಂತೆ ನನಗೆ ಫೋನಿನಲ್ಲೇ ಪೂರಕ ಮಾಹಿತಿ ನೀಡಿ ನನ್ನ ಸಂಪರ್ಕದ ವಿಸ್ತಾರವನ್ನು ಹೆಚ್ಚಿಸಿದ ಸಚಿವರಾದ ಮಾನ್ಯ ಕೆ. ಎಸ್. ಈಶ್ವರಪ್ಪನವರು, ವಿಧಾನಪರಿಷತ್ ಸದಸ್ಯರಾದ ಎಸ್.ರುದ್ರೇಗೌಡರು; ತಮ್ಮ ಅಮೂಲ್ಯ ಪುಸ್ತಕಗಳನ್ನು ನನ್ನ ಮೇಲೆ ನಂಬಿಕೆ ಇಟ್ಟು ಎರವಲು

ನೀಡಿದ ಮಾಜಿ ವಿಧಾನಪರಿಷತ್ ಸದಸ್ಯರಾದ ಆರ್.ಕೆ. ಸಿದ್ದರಾಮಣ್ಣ, ಮಿಥಿಕ್ ಸೊಸೈಟಿ ಬೆಂಗಳೂರು, ಶಿವಮೊಗ್ಗೆಯ ಸಾಹಿತಿಗಳಾದ ಎಂ.ಎನ್. ಸುಂದರರಾಜ್ ಹಾಗೂ ಆತ್ಮೀಯರಾದ ಮೋಹನ ಶಾಸ್ತ್ರಿ ಹೆಚ್.ಡಿ., ಎಸ್.ಎನ್. ಚನ್ನಬಸಪ್ಪ(ಚನ್ನಿ), ಬೆಂಗಳೂರಿನ ಪ್ರಮೋದ್ ನ.ಗೋ., ರಾಷ್ಟ್ರೋತ್ಥಾನ ಬೆಂಗಳೂರು; ತಮ್ಮ ನೆನಪಿನಾಳದಿಂದ ಹೊರಹೊಮ್ಮಿದ ಜನರ ಪರಿಚಯ ಮಾಡಿಕೊಟ್ಟು ಅಮೂಲ್ಯ ಮಾಹಿತಿ ಕಲೆಹಾಕುವಲ್ಲಿ ನನಗೆ ತ್ವರಿತ ನೆರವನ್ನು ನೀಡಿದ ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಮಹಾಸ್ವಾಮಿಗಳು, ದಾವಣಗೆರೆಯ ಕನ್ನಡ ಪ್ರಾಧ್ಯಾಪಕರಾದ ಡಾ.ಎಂ.ಜಿ.ಈಶ್ವರಪ್ಪ ಹಾಗೂ ಪ್ರಾಚಾರ್ಯರಾದ ಡಾ. ಕುಮಾರ್ ಬಿ.ಪಿ., ಹಾಗೆಯೇ ಹೊನ್ನಾಳಿಯ ಪಂಚಾಕ್ಷರಯ್ಯ ಜಿ. ಎಂ., ಹೆಚ್. ಮಹೇಂದ್ರಪ್ಪ ಹಾಗೂ ಈ ನನ್ನ ಕಾರ್ಯಕ್ಕೆ ನನ್ನಷ್ಟೇ ಉತ್ಸಾಹದಲ್ಲಿ ನನ್ನೊಡನೆ ತೊಡಗಿಕೊಂಡು ಸ್ಫೂರ್ತಿ ತುಂಬಿದ ನನ್ನ ಪತಿ ಎಸ್. ಚೇತನ್‌ರ ಸಹಕಾರಕ್ಕೆ ಚಿರಋಣಿಯಾಗಿದ್ದೇನೆ.

**– ಸಹನಾ ಚೇತನ್**

೧೬–೧೨–೨೦೨೧
ಶಿವಮೊಗ್ಗ

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ | ೧೫ |
| ಹರಿಹರದ ಇತಿಹಾಸ | ೧೭ |
| ಹರಿಹರ ತಾಲ್ಲೂಕಿನ ನಕಾಶೆ | ೧೮ |
| ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಹರ | ೨೧ |
| ಖಾದಿಯ ಪ್ರಚಾರ | ೨೫ |
| ಗಾಂಧೀಜಿಯವರು ದಾವಣಗೆರೆಗೆ | ೩೧ |
| ಅರಣ್ಯ ಸತ್ಯಾಗ್ರಹ | ೩೫ |
| ಬುಲೆಟಿನ್ ಹಾಗೂ ದಿನಪತ್ರಿಕೆಗಳು | ೫೨ |
| ಮಾಹಿತಿ ಆಕರಗಳು | ೫೮ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೬೦ |

# ದಾವಣಗೆರೆ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಜಯಜಯ ಪಾವನ ಚರಿತನೆ ।
ಜಯ ಭಾರತ ಭಾಗ್ಯೋದಯ ಗಾಂಧೀ ॥
ಮಕ್ಕಳ ಕಾಸನು ಕೊಳ್ವನು ಗಾಂಧೀ ।
ಮನೆಯಂಗಳದೊಳು ಬರುವನು ಗಾಂಧೀ ॥

ಎನ್ನುತ್ತಾ ಕಮಕೋಡು ನರಸಿಂಹ ಶಾಸ್ತ್ರಿಗಳವರು ಚಳುವಳಿಯ ಸಂದರ್ಭಕ್ಕೆಂದೇ ರಚಿಸಿದ್ದ ಪ್ರಾಸಬದ್ಧ ಲಯಬದ್ದ ಕವನವನ್ನ ಒಂದೇ ಕಂಠದಿಂದ ಹಾಡುತ್ತಾ ಬೆಳಗಿನ ಪ್ರಭಾತ್ ಫೇರಿಗೆ ಹೋಗುವುದೆಂದರೆ ಎಲ್ಲಿಲ್ಲದ ಸಂಭ್ರಮ ನನಗೆ. ಮಳೆ ಚಳಿ ಕತ್ತಲು ಎಂಬ ಪರಿವೆಯೇ ಇಲ್ಲದೆ ಹಿರಿಯರ ಸಂಗಡ ನಾನೂ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತಿದ್ದೆ.

ನಾನು ಭರತ್ ದೇಶಮುಖ್. ಆಗ ನನಗೆ ವಯಸ್ಸು ೧೨ ವರ್ಷ. ಊರು ಹರಿಹರ. ಮುಂಚೆ ಧಾರವಾಡದಲ್ಲಿ ನೆಲೆಸಿದ್ದೆ. ಹುಬ್ಬಳ್ಳಿ – ಧಾರವಾಡದಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ಸ್ವಾತಂತ್ರ್ಯ ಚಳುವಳಿಗಳ ಕಿಚ್ಚು, ಎಲ್ಲಿ ನನ್ನನ್ನು ಓದಿನಿಂದ ವಿಮುಖನನ್ನಾಗಿ ಮಾಡಿಬಿಡುವುದೋ ಎಂಬ ಭಯ ಅಮ್ಮ ಮತ್ತು ಅಜ್ಜಿಗೆ ಇತ್ತು. ಅಪ್ಪ ಆಗಲೇ ಚಳುವಳಿ ಎಂದು ೨ ಬಾರಿ ಜೈಲಿಗೆ ಹೋಗಿ ಬಂದಿದ್ದರು. ಅಪ್ಪನ ಹಾದಿಯನ್ನೇ ನಾನು ಹಿಡಿಯೋದು ಬೇಡ ಅಂತ ಅಮ್ಮ–ಅಜ್ಜಿ ಇಬ್ಬರೂ ಸೇರಿ ಹರಿಹರದಲ್ಲಿರುವ ನನ್ನ ಸೋದರ ಮಾವನ ಮನೆಗೆ ಕಳುಹಿಸಿದರು. ಊರು ಬೇರೆ ಆದರೇನು? ಇರುವುದು ಅದೇ ಭಾರತ ದೇಶದಲ್ಲೇ ಅಲ್ಲವೇ?!! ಇಲ್ಲಿ ನಡೆಯುವ ಚಟುವಟಿಕೆಗಳು ರಾಜ್ಯದ–ದಿನಪತ್ರಿಕೆಗಳ ಹೆಡ್‌ಲೈನ್ ಆಗದೇ ಹೋದರೂ, ಇಲ್ಲಿಯೂ ನಡೆಯುತ್ತಿರುವುದು ಅದೇ ಚಳುವಳಿ; ಆದರೆ ರೀತಿ ಬೇರೆ ಅಷ್ಟೆ.

ಹರಿಹರದಲ್ಲಿ ಸರ್ಕಾರಿ ಶಾಲೆಗೆ ದಾಖಲಾದಾಗ ಶಾಲೆಯ ಶಿಕ್ಷಕರ–ಗೆಳೆಯರ ಎಲ್ಲರ ಬಾಯಿಯಲ್ಲೂ ಚಳುವಳಿಯದ್ದೇ ಮಾತುಗಳು. "ಇವತ್ತು ಅವನಿಗೆ ೩೦ ಛಡಿ ಏಟು ಕೊಡ್ತಾರಂತೆ, ನಿನ್ನೆ ಪಿಕೆಟಿಂಗ್ ಮಾಡ್ದವ್ರು ಸೆರೆವಾಸ ಅನುಭವಿಸ್ತಾರಂತೆ, ಅಂಚೆ ಅಣ್ಣನ ಕೈಲಿದ್ದ ಅಂಚೆಗಳನ್ನೆಲ್ಲಾ ಸುಟ್ಟಾಕುದ್ರಂತೆ, ನಾವೂ ಶಾಲೆಗೆ ಹೋಗ್ಬಾರ್ದಂತೆ, ಸ್ವದೇಶಿ ಚಳುವಳಿಗೆ ಧುಮುಕಿ ಅಂತ ನಮ್ಮನೆ ಪಕ್ಕದ ಅಣ್ಣ ಹೇಳ್ತಿದ್ರು" ಎಂಬೆಲ್ಲಾ ಮಾತು ದಿನಂಪ್ರತಿ ಕೇಳ್ತಾ, ನಮ್ಮಲ್ಲಿಯೂ ದೇಶಾಭಿಮಾನ ನಿಧಾನಕ್ಕೆ ಮೊಳೆಯುತ್ತಿತ್ತು. ಸುತ್ತಮುತ್ತ ಆಂಗ್ಲ ಸರ್ಕಾರದ, ಪೋಲೀಸರ ದಬ್ಬಾಳಿಕೆ ಜನಸಾಮಾನ್ಯರ ಮೇಲೆ ನಡೆಯುತ್ತಿರುವುದನ್ನು ಕಣ್ಣಾರೆ ನೋಡಿಯೂ ಹೃದಯ ಕರಗದೆ ಇದ್ದರೆ ಅದೆಂಥ ಮಾನವಜನ್ಮ? ಇನ್ನೆಂಥಾ ದೇಶಾಭಿಮಾನ?

ಕರ್ನಾಟಕದಲ್ಲಿ ನಮ್ಮ ಜನರ ಈ ಜಾಗೃತ ಮನಸ್ಥಿತಿಗೆ ಮುಖ್ಯ ಕಾರಣ ಯಾರು ಗೊತ್ತಾ? ಅದೇ ನಮ್ಮ ಆಲೂರು ವೆಂಕಟರಾಯರು. ೧೯೨೦ರವರೆಗೂ ಇಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಯಾವ ಜಾಗೃತಿಯೂ ಕನ್ನಡಿಗರಲ್ಲಿ ಇರಲಿಲ್ಲ. ಕರ್ನಾಟಕದಲ್ಲಿ ಇಂಥ ಚಳುವಳಿಯ ಆರಂಭಿಕ ನಾಯಕರೇ ಶ್ರೀ ಆಲೂರು ವೆಂಕಟರಾಯರು. ಕರ್ನಾಟಕದ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿದ ರಾಯರು, ಕನ್ನಡಿಗರಿಗೆ ಅವರ ಇತಿಹಾಸ ತಿಳಿದಿಲ್ಲವೆಂದು ಬೇಸರ ಮಾಡಿಕೊಂಡರು. ಕನ್ನಡಿಗರ ನಿದ್ರಿತ ಮನಸ್ಥಿತಿಗೆ ಇತಿಹಾಸದ ಅಜ್ಞಾನವೇ ಕಾರಣ ಎಂದು ಮರುಗಿದರು. ೧೯೧೭ರಲ್ಲಿ ಅವರ 'ಕರ್ನಾಟಕದ ಗತವೈಭವ' ಪುಸ್ತಕ ಚಳುವಳಿಗೆ ಒಳ್ಳೆಯ ಚಾಲನೆ ಕೊಟ್ಟಿತು. ಕನ್ನಡಿಗರನ್ನು ಬಡಿದೆಬ್ಬಿಸಿತು. ಕರ್ನಾಟಕ ಏಕೀಕರಣ ಆಗಬೇಕೆಂದು ೧೯೦೭ರಲ್ಲಿ ಲೇಖನ ಬರೆದರು. ಕರ್ನಾಟಕ ಇತಿಹಾಸ ಸಂಶೋಧನ ಮಂದಿರ ಸ್ಥಾಪಿಸಿದರು. ಏಕೀಕರಣಕ್ಕಾಗಿ ಕರ್ಣಾಟಕ ಸಭೆ ಸ್ಥಾಪಿಸಿದರು. ೧೯೧೪ರಲ್ಲಿ ಕನ್ನಡಿಗರ ಸಾರ್ವತ್ರಿಕ ಜಾಗೃತಿಗಾಗಿ ದುಡಿದರು. ವಕೀಲಿ ವೃತ್ತಿ ತ್ಯಜಿಸಿ ಪಾಡುಪಟ್ಟರು. ಇದರ ನಂತರ ಕನ್ನಡಿಗರಲ್ಲಿ ಚಳುವಳಿಯ ಕಾವು ಏರಿತು.

ಈ ಚಳುವಳಿ ನಮ್ಮ ಪುಟ್ಟ ಊರು ಆಗಿನ ಚಿತ್ರದುರ್ಗ ಜಿಲ್ಲೆಯ ಮತ್ತು ಈಗಿನ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನವರೆಗೂ ಹಬ್ಬಿತು. ಅದರ ಸಂಕ್ಷಿಪ್ತ ಇತಿಹಾಸ ಹಾಗೂ ಸ್ವಾತಂತ್ರ ಚಳುವಳಿ ಪ್ರಾರಂಭವಾದ ಬಗೆ ಈಗ ಹೇಳ್ತಿನಿ ಕೇಳಿ.



## ಹರಿಹರದ ಇತಿಹಾಸ

ಹರಿಹರ ಕ್ಷೇತ್ರವು ಚಾರಿತ್ರಿಕವಾಗಿ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ ಮುಂತಾದ ಪ್ರಾಚೀನ ಕರ್ನಾಟಕವನ್ನಾಳಿದ ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತಂತೆ. ನಂತರ ಮಧ್ಯಕಾಲೀನ ಸಂದರ್ಭದಲ್ಲಿ ಕರ್ನಾಟಕವನ್ನಾಳಿದ ವಿಜಯನಗರ, ಬಹಮನಿ, ಆದಿಲ್ ಶಾಹಿಗಳು, ಇಕ್ಕೇರಿ, ಬಿದನೂರು ಹೈದರಾಲಿ, ಟಿಪ್ಪುಸುಲ್ತಾನ ಮುಂತಾದವರ ಆಳ್ವಿಕೆಗೆ ಒಳಪಟ್ಟು ಸ್ವಾತಂತ್ರ್ಯದ ನಂತರ ಮೈಸೂರು ರಾಜ್ಯದ ಒಂದು ತಾಲ್ಲೂಕು ಕೇಂದ್ರವಾಗಿ, ಇದೀಗ ಕರ್ನಾಟಕ ಸರ್ಕಾರದ ಆಳ್ವಿಕೆಗೆ ಒಳಪಟ್ಟ ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಆಗಿದೆ. ೧೮೬೫ರ ಹೊತ್ತಿಗೆ ಹರಿಹರ ಬ್ರಿಟೀಷರ ಆಯಕಟ್ಟಿನ ಸ್ಥಳವಾಗಿ, ಇಂದಿನ ಜಿಲ್ಲಾ ಕೇಂದ್ರವಾದ ದಾವಣಗೆರೆ ಆ ಕಾಲಕ್ಕೆ ಹರಿಹರ ಠಾಣೆಯ ವ್ಯಾಪ್ತಿಗೆ ಸೇರಿತ್ತು. ೧೮೭೫ರಲ್ಲಿ ಬ್ರಿಟಿಷ್ ಸರ್ಕಾರವು ಹರಿಹರದ ಸುತ್ತಮುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ ಹರಿಹರವನ್ನು ತಾಲ್ಲೂಕು ಕೇಂದ್ರ ಮಾಡಿ ತಾಲ್ಲೂಕು ಕಚೇರಿಯನ್ನು ಸ್ಥಾಪಿಸಿತು. ಕ್ರಿ.ಶ. ೧೮೬೬ರಲ್ಲಿ ತುಂಗಭದ್ರಾ ನದಿಗೆ ಸೇತುವೆಯನ್ನು ಕಟ್ಟುವ ಮೂಲಕ, ಮೈಸೂರು ಸಂಸ್ಥಾನ ಮತ್ತು ಬ್ರಿಟಿಷ್ ಆಡಳಿತದ ಸಂಪರ್ಕ ಸಾಧ್ಯವಾಯಿತು. ಕ್ರಿ.ಶ. ೧೮೭೧ರ ಜನಗಣತಿಯ ಪ್ರಕಾರ ಆಗಿನ ಹರಿಹರ ಗ್ರಾಮದ ಜನಸಂಖ್ಯೆ ೬೪೦೧ ಇತ್ತಂತೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಹರಿಹರ ಪಶ್ಚಿಮ ಭಾಗದ ತುಂಗಭದ್ರಾ ನದಿಯ ತಟದಲ್ಲಿರುವ ಗ್ರಾಮ ಉಕ್ಕಡ ಗಾತ್ರಿಕರ ವಸೂಲಾತಿಯ ಕೇಂದ್ರವಾಗಿ ಕೆಲಸ ನಿರ್ವಹಿಸುತ್ತಿದ್ದುದರ ಬಗ್ಗೆಯೂ ಅನೇಕರಲ್ಲಿ ಕೇಳಿದ್ದೇನೆ.

ಇದರ ನಂತರ ಶುರುವಾಗಿದ್ದೇ ಈ ಬ್ರಿಟೀಷ್ ಗವರ್ನರ್‌ಗಳ ಆಡಳಿತ. ಸುಗಮವಾಗಿ ಸಾಗುತ್ತಿದ್ದ ಮಹಾರಾಜರ ಆಡಳಿತವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ದೃಷ್ಟಿಯಿಂದ ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಹರಿಹರ ಪ್ರಾಂತ್ಯದಲ್ಲಿ ಆಡಳಿತಾತ್ಮಕವಾಗಿ ಮತ್ತು ಆರ್ಥಿಕವಾಗಿ ಅನೇಕ ಲೋಪದೋಷಗಳನ್ನು ಗುರುತಿಸಿದರು. ಪಿತೂರಿಯಿಂದ ಅಂದಿನ ಭಾರತದ ಗವರ್ನರ್ ಜನರಲ್ ಆದ ಲಾರ್ಡ್ ವಿಲಿಯಂ ಬೆಂಟಿಂಕ್ ಅವರು, ಮೈಸೂರು ಸಂಸ್ಥಾನದ ರಾಜರಾಗಿದ್ದ ಕೃಷ್ಣರಾಜ ಒಡೆಯರ್ ಅವರು ಆಡಳಿತ ನಿರ್ವಹಿಸುವಲ್ಲಿ ವಿಫಲರಾಗಿದ್ದರೆಂಬ ಕಾರಣಕೊಟ್ಟು ಕ್ರಿ.ಶ. ೧೮೩೧ರಂದು ಅವರನ್ನು ಒತ್ತಾಯಪೂರ್ವಕವಾಗಿ ಪದಚ್ಯುತಿ ಗೊಳಿಸಿದರಂತೆ. ಅಕ್ಟೋಬರ್ ೧೯ರಂದು ಸಂಸ್ಥಾನದಲ್ಲಿ 'ಕಮಿಷನರ್'ರುಗಳ ಆಳ್ವಿಕೆ ಜಾರಿಗೆ ತರಲಾಯಿತು. ಕ್ರಿ.ಶ.

## ಹರಿಹರ ತಾಲ್ಲೂಕಿನ ನಕಾಶೆ




೧೮೮೦ರವರೆಗೆ ಸುಮಾರು ೫೦ ವರ್ಷಗಳ ಕಾಲ ಬ್ರಿಟಿಷ್ ಕಮಿಷನರುಗಳು ಮೈಸೂರು ಸಂಸ್ಥಾನವನ್ನು ಆಳುವ ಮೂಲಕ ಜನಜೀವನದ ಮೇಲೆ ಕರಿಛಾಯೆಯಾಗಿ ಪರಿಣಮಿಸಿದರು. ಅವರ ಮನಸ್ಸಿಗೆ ಬಂದಂತೆ ಅನೇಕ ಹುದ್ದೆಗಳನ್ನು ಅಪ್ರಯೋಜಕ, ಅನುತ್ಪಾದಕ ಹುದ್ದೆಗಳು ಎಂದು ಹೇಳಿ, ಅನೇಕ



ಇಲಾಖೆಗಳನ್ನು ರದ್ದುಗೊಳಿಸಿ ಆಡಳಿತವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಬ್ರಿಟಿಷ್ ಮಾದರಿಯ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಕರ್ನಲ್ ಜೆ. ಬ್ರಿಗ್ಸ್, ಪಿ. ಲುಷಿಂಗ್ಟನ್, ಡಬ್ಲ್ಯೂ. ಮಾರಿಸನ್ ಮತ್ತು ಜಿ.ಡಿ. ಡ್ರ್ಯೂರಿ ಅವರು ಕಮೀಷನರುಗಳಾಗಿ ಕೆಲಸ ನಿರ್ವಹಿಸಿದ ನಂತರ ೧೮೩೪ರಲ್ಲಿ ಏಕ ಕಮಿಷನರ್ ಆಗಿ ಮಾರ್ಕ್ ಕಬ್ಬನ್ ಅವರು ನೇಮಕವಾದರು. ಇವರು ೧೮೬೧ರವರೆಗೆ ಕಾರ್ಯ ನಿರ್ವಹಿಸಿದರಂತೆ.

ನಮ್ಮ ಮಹಾರಾಜರ ಆಡಳಿತ ವ್ಯವಸ್ಥೆಯನ್ನ ಹೇಗೆ ಬದಲಾಯಿಸಿದ್ರೂ ಅನ್ನೋದನ್ನೂ ಮುಂದೆ ಹೇಳ್ತೀನಿ ಕೇಳಿ. ಮೊದಲು ನಮ್ಮವರಿಗೆ ಉದ್ಯೋಗದಲ್ಲಿ ಹೆಚ್ಚಿನ ಪ್ರಾಧಾನ್ಯತೆ ನೀಡುವ ದೃಷ್ಟಿಯಿಂದ ಆಡಳಿತ ವ್ಯವಸ್ಥೆ ೬ ಸಂಸ್ಥಾನದಲ್ಲಿ ಇದ್ದಿತ್ತು. ಇದನ್ನು ಕಡಿತಗೊಳಿಸಿ ೪ ವಿಭಾಗಗಳಿಗೆ ಸೀಮಿತಗೊಳಿಸಿದರು. ಅವುಗಳೆಂದರೆ (೧) ಅಷ್ಟಗ್ರಾಮ (೨) ಬೆಂಗಳೂರು (೩) ಚಿತ್ರದುರ್ಗ (೪) ನಗರ. ಅಲ್ಲಿದ್ದ ನಮ್ಮವರನ್ನು ಆಳಲು ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಯೂರೋಪ್ ಸೂಪರಿಂಟೆಂಡೆಂಟನ್ನು ಮೇಲಧಿಕಾರಿಯ ರೂಪದಲ್ಲಿ ನಿಯೋಜಿಸಿದರು. ೪ ಭಾಗಗಳನ್ನು ೧೨೫ ತಾಲ್ಲೂಕು ಕೇಂದ್ರಗಳನ್ನಾಗಿ ವಿಂಗಡಿಸಿದರು. ಪ್ರತಿಯೊಂದು ತಾಲ್ಲೂಕಿಗೂ ಅಮಲ್ದಾರನನ್ನು ಮುಖ್ಯಸ್ಥರನ್ನಾಗಿ ನೇಮಿಸಿ ಹೋಬಳಿಗಳಲ್ಲಿ ಶೇಕ್‌ದಾರರನ್ನು, ಗ್ರಾಮಗಳಲ್ಲಿ ಗೌಡರನ್ನು ನೇಮಕ ಮಾಡಿದರು. ಇವರೆಲ್ಲರೂ ಬ್ರಿಟೀಷ್ ಆಡಳಿತದ ಕಮಿಷನರ್ ಹತೋಟಿಗೆ ಒಳಪಟ್ಟವರಾಗಿದ್ದರು. ತಾಲ್ಲೂಕು ಕೇಂದ್ರಗಳಲ್ಲಿ ಕಂದಾಯ ಮುಖ್ಯಸ್ಥರಾಗಿ ಶಿರಸ್ತೇದಾರರನ್ನು ನೇಮಿಸಿದರು.

ಒಡೆಯರ ಆಡಳಿತ ಕಾಲದಲ್ಲಿ ಅಸ್ತಿತ್ವದಲ್ಲಿದ್ದ 'ಅಠಾರ' ಕಚೇರಿಯನ್ನು ರದ್ದುಪಡಿಸಿ ಬದಲಾಗಿ ೯ ಇಲಾಖೆಗಳನ್ನು ಸ್ಥಾಪಿಸಿದರು. ಎಲ್ಲದರಲ್ಲೂ ಮುಖ್ಯಸ್ಥರನ್ನಾಗಿ ಬ್ರಿಟೀಷ್ ಅಧಿಕಾರಿಗಳನ್ನೇ ನೇಮಿಸಲಾಯಿತು. ಕ್ರಿ.ಶ. ೧೮೩೧ರಲ್ಲಿ ಬ್ರಿಟಿಷರಿಗೆ ಅಧಿಕಾರ ಬಿಟ್ಟುಕೊಟ್ಟ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮರಳಿ ಅಧಿಕಾರ ಪಡೆಯಲು ಅವಿರತ ಶ್ರಮಪಡಬೇಕಾಯಿತು. ಅದರ ಫಲಶ್ರುತಿಯಾಗಿ ೧೮೬೭ರಲ್ಲಿ ಕೃಷ್ಣರಾಜ ಒಡೆಯರ ದತ್ತು ಪುತ್ರರಾದ ೧೦ನೇ ಚಾಮರಾಜ ಒಡೆಯರಿಗೆ ಸಂಸ್ಥಾನದ ಆಡಳಿತವನ್ನು ವಹಿಸಿಕೊಡಲಾಯಿತು. ಅಲ್ಲಿಯವರೆಗಿನ ೩ ಜನ ಕಮಿಷನರುಗಳು ಒಡೆಯರ ಹೆಸರಿನಲ್ಲಿ ಆಡಳಿತ ನಡೆಸಿ ಕಂದಾಯವೆಂಬ ಅಸ್ತ್ರದ ಮೂಲಕ ಜನಜೀವನಕ್ಕೆ ಬರ್ಬರ ಆಘಾತವನ್ನು ಒದಗಿಸಿದ್ದರು.

೧೦ನೇ ಚಾಮರಾಜ ಒಡೆಯರ ಕಾಲದಿಂದ ಜಯಚಾಮರಾಜ ಒಡೆಯರ ಕಾಲದವರೆಗೆ ಕ್ರಿ.ಶ. ೧೯೪೦ರಿಂದ ೧೯೪೭ರವರೆಗೆ ಮೈಸೂರು ಸಂಸ್ಥಾನದ ಆಳ್ವಿಕೆಯಲ್ಲಿ ದಿವಾನರು ವಹಿಸಿದ ಪಾತ್ರವನ್ನ ಮಾತ್ರ ನಾವುಗಳು ಮರೆಯುವಂತಿಲ್ಲ. ಅದರಲ್ಲಿ ಮುಖ್ಯವಾಗಿ ಸರ್ ಎಂ. ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಡಳಿತದ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನ ಅನೇಕ ಸುಧಾರಣೆಗಳನ್ನು ಕಂಡಿತು. ಪ್ರಥಮ ಮತ್ತು ದ್ವಿತೀಯ ಮಹಾಯುದ್ಧದ ಪರಿಣಾಮವಾಗಿ ಸಂಸ್ಥಾನದಲ್ಲಿ ಹಲವಾರು ಬಿಕ್ಕಟ್ಟುಗಳು ಉದ್ಭವವಾದವು. ಈ ಮಧ್ಯೆ ಭಾರತದಲ್ಲಿ ಚುನಾವಣೆಗಳು ನಡೆದು ಕಾಂಗ್ರೆಸ್ ಪಕ್ಷ ಜಯಭೇರಿಬಾರಿಸಿತ್ತು. ಅದೇ ಪ್ರಕಾರ ಮೈಸೂರು ಒಡೆಯರು ಭಾರತದಲ್ಲಿ ಪ್ರಪ್ರಥಮವಾಗಿ ಮೈಸೂರು ಸಂಸ್ಥಾನವನ್ನು ವಿಲೀನಗೊಳಿಸಿದರು. ೧೯೪೭ರ ಅಕ್ಟೋಬರ್‌ನಲ್ಲಿ ಮೈಸೂರು ಕಾಂಗ್ರೆಸ್ ಪಕ್ಷ 'ಜವಾಬ್ದಾರಿ ಸರ್ಕಾರ' ಸ್ಥಾಪನೆಗಾಗಿ 'ಮೈಸೂರು ಚಲೋ' ಚಳುವಳಿ ಮಾಡಿದರು. ೧೯೪೭ ಅಕ್ಟೋಬರ್ ೨೦ರಂದು ತಾತ್ಕಾಲಿಕ ಸರ್ಕಾರದಲ್ಲಿ ಕೆ.ಸಿ.ರೆಡ್ಡಿ ಅವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ಸ್ವಾತಂತ್ರ್ಯಾನಂತರ ನಡೆದ ಚುನಾವಣೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಹರಿಹರ ತಾಲ್ಲೂಕು ಆಯಾ ಕಾಲಕ್ಕೆ ಚುನಾವಣೆಗಳನ್ನು ನಡೆಸಿಕೊಂಡು ತನ್ನ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಆಡಳಿತವನ್ನು ನಡೆಸಿಕೊಂಡು ಬಂದಿದೆ.

ಇವಿಷ್ಟು ಆಡಳಿತಾತ್ಮಕ ದೃಷ್ಟಿಯಿಂದ ನಾನು ನಿಮಗೆ ತಿಳಿಸಿದ ಸಂಕ್ಷಿಪ್ತ ಸಾರಾಂಶ. ಇನ್ನು ನಮ್ಮ ಸ್ವಾತಂತ್ರ್ಯ ಚಳುವಳಿಯ ವಿಷಯಕ್ಕೆ ಬರೋಣ. ಬ್ರಿಟಿಷರ ಆಳ್ವಿಕೆಯ ವಿರುದ್ಧ ಭಾರತಾಂಬೆಯ ದಾಸ್ಯ ವಿಮೋಚನೆಯ ರಣಕಹಳೆ ಉತ್ತರ ಭಾರತದಲ್ಲಿ ಪ್ರಾರಂಭವಾದರೂ ಕ್ರಮೇಣ ದಕ್ಷಿಣ ಭಾರತದತ್ತ ದಾಂಗುಡಿ ಇಟ್ಟಿತು. ಆಡಳಿತ ವ್ಯವಸ್ಥೆಯಲ್ಲಿ ಇಷ್ಟೆಲ್ಲಾ ಬದಲಾವಣೆ ಮಾಡಿದವರು ಜನರ ರೀತಿ ನೀತಿ, ಆಗುಹೋಗುಗಳ ಮೇಲೆ ದಾಳಿ ಮಾಡದೆ ಇದ್ದಾರೆಯೇ?!!! ಈಗ ಶುರುವಾಯ್ತು ನೋಡಿ ನಿಜವಾದ ಚಳುವಳಿ.ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ಅಂದರೆ ಮುಂಬೈ ಕರ್ನಾಟಕ ಭಾಗದ ಸಹಸ್ರಾರು ಯುವಕರು ವಿದ್ಯಾರ್ಥಿಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ವಯಂಪ್ರೇರಣೆಯಿಂದ ಭಾಗವಹಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟ ನಡೆಸಿ ಸೆರೆಮನೆವಾಸ ಅನುಭವಿಸಿದರು. ಮೈಸೂರು ರಾಜ್ಯದ ಉತ್ತರದ ಗಡಿಯಾಗಿ ತುಂಗಭದ್ರಾ ನದಿಯ ದಂಡೆಯ ಪ್ರದೇಶವಾದ ಹರಿಹರ ಒಂದು ಪ್ರಾಂತ್ಯವಾಗಿತ್ತು.



ಮೈಸೂರು ರಾಜರ ಆಳ್ವಿಕೆಯಲ್ಲಿ ಹರಿಹರದಲ್ಲಿ ಮಿಲಿಟರಿ ಕ್ಯಾಂಪ್‌ಗಳಿದ್ದದ್ದನ್ನು ಈಗಲೂ ಈ ಪ್ರಾಂತ್ಯದ ಹಿರಿಯರು ನೆನಪಿಸುತ್ತಾರೆ. ಕ್ರಿ.ಶ. ೧೮೮೯ರ ಹೊತ್ತಿಗೆ ಸ್ವಾತಂತ್ರ್ಯ ಚಳುವಳಿ ತೀವ್ರವಾಗುತ್ತಿದ್ದ ಸಂದರ್ಭದಲ್ಲಿ ಹರಿಹರ ಪ್ರಾಂತ್ಯದ ಅನೇಕ ದೇಶಪ್ರೇಮಿಗಳು, ಯುವ ವಿದ್ಯಾರ್ಥಿಗಳು, ಶಾಲಾ–ಕಾಲೇಜು ತೊರೆದು ದೇಶಕ್ಕಾಗಿ ಹೋರಾಟ ನಡೆಸಲು ಸ್ವಾತಂತ್ರ ಚಳುವಳಿಯಲ್ಲಿ ಧುಮುಕಿದರು. ಆ ಸಂದರ್ಭದಲ್ಲಿ ಗಾಂಧೀಜಿಯವರ ಅಸಹಕಾರ ಆಂದೋಲನ ಇಡೀ ಭಾರತದಲ್ಲೆಲ್ಲಾ ಪಸರಿಸಿತ್ತು. ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರು ಚಿತ್ರದುರ್ಗ ಮತ್ತು ದಾವಣಗೆರೆಗಳನ್ನು ಸ್ವಾತಂತ್ರ್ಯ ಹೋರಾಟದ ಕೇಂದ್ರವನ್ನಾಗಿ ಮಾಡಿಕೊಂಡರು. ಈ ಚಳುವಳಿಯಲ್ಲಿ ಹರಿಹರ ಪ್ರಾಂತ್ಯದ ದಿ॥ ಕೊಂಡಜ್ಜಿ ಬಸಪ್ಪನವರು, ದಿ॥ ಗಾಂಜಿ ವೀರಪ್ಪನವರು, ದಿ॥ ಹೆಚ್. ಸಿದ್ಧವೀರಪ್ಪನವರು, ದಿ॥ ಕೆ.ಟಿ. ಜಂಬಣ್ಣನವರು ಮುಂತಾದ ಜನನಾಯಕರಂತೆ ಅನೇಕ ಯುವಕರು ಹೋರಾಟಕ್ಕೆ ಧುಮುಕಿ ಕಾರ್ಯ ಪ್ರವೃತ್ತರಾದರು. ಇದರಲ್ಲಿ ಹರಿಹರ ಪ್ರಾಂತ್ಯದಿಂದ ಸುಮಾರು ನೂರಾರು ಯುವಕರು ಚಳುವಳಿಯಲ್ಲಿ ಭಾಗವಹಿಸಿ ತಮ್ಮ ದೇಶಭಕ್ತಿಯನ್ನು ಮೆರೆದುದು ಇತಿಹಾಸದಲ್ಲಿ ಸಂಪೂರ್ಣವಾಗಿ ದಾಖಲಾಗಿಲ್ಲ.

## ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಹರ

ಹರಿಹರ ಪ್ರಾಂತ್ಯದ ಕಮಲಾಪುರವನ್ನು ತಮ್ಮ ಹೋರಾಟದ ಕೇಂದ್ರವನ್ನಾಗಿ ಮಾಡಿಕೊಂಡು ಅದರ ಸುತ್ತ ಮುತ್ತಲಿನ ಗ್ರಾಮಗಳಾದ ನಂದಿಗಾವಿ, ಬಿಳಸನೂರು, ಭಾನುವಳ್ಳಿ, ಯಲವಟ್ಟಿ, ಕುಂಬಳೂರು, ಹನಗವಾಡಿ, ಮುದೇನೂರು ಮುಂತಾದ ಗ್ರಾಮಗಳ ಅನೇಕ ಯುವಕರು ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಹೋರಾಟದ ಪಣತೊಟ್ಟರು. ನಂದಿಗಾವಿ ಶ್ರೀ ಎನ್.ಎಂ. ಚಂದ್ರಶೇಖರಯ್ಯನವರು "ಪ್ರಾಣ ಹೋಗಲಿ, ಮಾನ ಹೋಗಲಿ, ಆದರೆ ಭಾರತಾಂಬೆಯ ದಾಸ್ಯ ತೊಲಗಲಿ" ಎಂಬ ಘೋಷಣೆ ಹಾಕುತ್ತಾ ಸ್ವಾತಂತ್ರ ಚಳುವಳಿಯ ಕಾವನ್ನು ಹುಟ್ಟು ಹಾಕಿದರಂತೆ.

ಹರಿಹರದಲ್ಲಿ ಮಿಲಿಟರಿ ಠಾಣೆ ಇರುವುದನ್ನು ಅಲಕ್ಷಿಸಿ ಪುಟ್ಟ ಕಮಲಾಪುರ ಕೇಂದ್ರ ಸ್ಥಳದಿಂದ ಹೊರಟ ಯೋಧರೆಲ್ಲ ಬಹುತೇಕ ವಿದ್ಯಾರ್ಥಿಗಳೇ. ಒಟ್ಟು ೨೯ ಜನ ವಿದ್ಯಾರ್ಥಿಗಳು ಸ್ವಾತಂತ್ರ್ಯ ಸಿಗುವವರೆಗೂ ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿ ಅವರ ಆಡಳಿತಕ್ಕೆ ಭಂಗತರುತ್ತಿದ್ದರು. ಅಂದು ಹೋರಾಡಿದವರಲ್ಲಿ ಕೆಲವರು ಬದುಕಿದ್ದವರು, ಅಂದಿನ ತಮ್ಮ

ಹೋರಾಟದ ನೈಜ ಚಿತ್ರಣವನ್ನು ಕಣ್ಣ ಮುಂದೆ ಬರುವ ಹಾಗೆ ನಮಗೆ ಕಥೆಯ ರೂಪದಲ್ಲಿ ಚಿತ್ರಿಸುತ್ತಿದ್ದರು.

ಭಾನುವಳ್ಳಿಯ ಸಿ.ಕೊಟ್ರಪ್ಪ, ನಂದಿಗಾವಿಯ ಎನ್.ಎಂ. ಚಂದ್ರಶೇಖರಯ್ಯ, ಎನ್. ಕೊಟ್ರಬಸಪ್ಪ, ಎಸ್. ಕೆಂಚವೀರಪ್ಪ, ಎನ್.ಈ. ಬಸಪ್ಪ, ತಂದೆ ಮಲ್ಲಪ್ಪ, ಹೊಳೆಸಿರಿಗೆರೆಯ ಟಿ. ದೊಡ್ಡ ಕೊಟ್ರಪ್ಪ, ಯಲವಟ್ಟಿಯ ಎಂ. ಹಾಲಪ್ಪ, ಬಿ. ಚನ್ನಬಸಪ್ಪ ಕಮಲಾಪುರದ ಬಿ.ಸಿದ್ದಣ್ಣ, ಜಿ.ರಾಮಪ್ಪ ಈ ಮುಂತಾದವರೆಲ್ಲರೂ ಇಂದಿಗೂ ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳಾಗಿದ್ದಾರೆ. ಅಂದು ಇವರು ಮಾಡಿದ ಹೋರಾಟ ನಿಜಕ್ಕೂ ರೋಮಾಂಚನಕಾರಿ ಎನಿಸುತ್ತದೆ.

ಹರಿಹರ ಪ್ರಾಂತ್ಯದ ಸ್ವಾತಂತ್ರಯೋಧರ ನಾಯಕನಾಗಿ ಎಂ.ಎನ್. ಚಂದ್ರಶೇಖರಯ್ಯ ಅವರನ್ನು ಹರಿಹರ ಪ್ರಾಂತ್ಯದ 'ಸಿಡಿಲುಮರಿ' ಎಂದೇ ಕರೆಯಲ್ಪಡುತ್ತಿದ್ದರಂತೆ. ಅವರನ್ನು ಈ ಪ್ರಾಂತ್ಯದ ಸುಭಾಷ್‌ಚಂದ್ರ ಬೋಸ್ ಎಂತಲೂ ಕರೆಯುತ್ತಿದ್ದರು. ಅವರ ದೇಶಭಕ್ತಿ, ತ್ಯಾಗ, ಧೈರ್ಯ, ನಾಯಕತ್ವದ ಗುಣ ಅನಿರ್ವಚನೀಯ. ಪೋಲೀಸರನ್ನು ಕಟ್ಟಿ ಹಾಕಿ ಧ್ವಜಾರೋಹಣ ಮಾಡಿದ್ದು, ಸೂಳಿಕೆರೆ ಏರಿ ಮೇಲೆ ಬಾಂಬ್ ಎಸೆದು ಸೇತುವೆ ಸಿಡಿಸಿದ ಘಟನೆಯನ್ನು ಅವರು ನೆನೆಪಿಸಿಕೊಂಡಾಗ ನಮಗೆ ಈಗಲೂ ಮೈನಡುಗುತ್ತದೆ. ಕಾರಿಗನೂರಿನ ಶ್ರೀ ಹಾಲಪ್ಪನವರು ಹರಿಹರ ಪ್ರಾಂತ್ಯದ ಎಲ್ಲ ಸ್ವಾತಂತ್ರ್ಯ ಯೋಧರನ್ನು ತಮ್ಮೂರಿಗೆ ಬರಮಾಡಿಕೊಂಡು ಮುತ್ತೈದೆಯರಿಂದ ಆರತಿ ಮಾಡಿಸಿ ಸನ್ಮಾನಿಸಿದ ಘಟನೆ ಮತ್ತು ಹರಿಹರ ಪ್ರಾಂತ್ಯದ ಸ್ವಾತಂತ್ರ್ಯ ಯೋಧರ ದೇಶಭಕ್ತಿ, ತ್ಯಾಗ, ಧೈರ್ಯ ಮತ್ತು ಕಾಯಕ ಗುಣಗಳು ಇಡೀ ಚಿತ್ರದುರ್ಗದಲ್ಲಿಯೇ ಜನಮನದಲ್ಲಿ ಹಸಿರಾಗಿ ಇಂದಿಗೂ ಉಳಿದಿವೆ.

ಹರಿಹರ ಪ್ರಾಂತ್ಯದ ಸ್ವಾತಂತ್ರ್ಯ ಯೋಧರಲ್ಲಿ ಪ್ರಮುಖರಾಗಿದ್ದವರೆಂದರೆ ಜಿ. ಮುನಿಯಪ್ಪನವರು ಮತ್ತು ಶ್ರೀ ಅಣಜಿ ಮಠದ ಕೊಟ್ರಯ್ಯನವರು ಮುಂತಾದ ನಾಯಕರೊಂದಿಗೆ ಹೋರಾಡಿದ ಈ ಪ್ರಾಂತ್ಯದ ಸ್ವಾತಂತ್ರ್ಯ ಯೋಧರ ಸಂಖ್ಯೆ ೮೭ಕ್ಕೆ ತಲುಪುತ್ತದೆ. ಹರಿಹರ ಪ್ರಾಂತ್ಯವು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇನೋ ನಿಜ. ಆದರೆ, ಮೈಸೂರು ಸಂಸ್ಥಾನವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದರಿಂದ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಈ ಪ್ರಾಂತ್ಯದಲ್ಲಿ ಸ್ವತಂತ್ರ ದೇಶದ ಬಾವುಟ ಹಾರಿಸುವಂತಿರಲಿಲ್ಲ. ಇಲ್ಲಿನ ಸ್ವಾತಂತ್ರ್ಯ ಯೋಧರು ಮತ್ತೆ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಹೋರಾಟ ಮುಂದುವರೆಸಬೇಕಾಯಿತು. ಆಳರಸರ ಆಜ್ಞೆಯನ್ನು ಪಾಲಿಸುವ



ನಮ್ಮವರ ವಿರುದ್ಧ ಯುವಕರು ಸಿಡಿದೆದ್ದು ಹೋರಾಟ ಮಾಡಿ ಕೆಲವೇ ತಿಂಗಳಲ್ಲಿ ಮೈಸೂರು ಭಾಗವು ಸ್ವತಂತ್ರ ಭಾರತ ದೇಶದಲ್ಲಿ ಲೀನವಾಗುವಂತೆ ಮಾಡಿದ್ದರು. ಹೀಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಹರಿಹರ ಪ್ರಾಂತ್ಯದ ಪಾತ್ರ, ಯುವಕರು ಹೋರಾಡಿದ ಚಿತ್ರ ಇಂದಿಗೂ ಭಾರತದ ಇತಿಹಾಸದಲ್ಲಿ ಮರೆಯಲಾಗದ ಪುಟಗಳಾಗಿವೆ.

ನಿಮಗೆ ಹೇಳಬೇಕಾದ ಇಷ್ಟುದ್ದ ಕಥೆಯನ್ನ ಇಷ್ಟರಲ್ಲೇ ಪುಟ್ಟದಾಗಿ ಇಲ್ಲಿ ಹೇಳಿ ಮುಗಿಸಿದ್ದೇನೆ. ಇನ್ನೂ ಒಬ್ಬೊಬ್ಬರ ಕಥೆ, ಸಾಹಸಗಾಥೆ, ಪೌರುಷ, ಯಶೋಗಾಥೆಗಳನ್ನು ನೀವು ತಿಳಿದುಕೊಳ್ಳದೇಇದ್ದರೆ ಅಂದಿನ ಹೋರಾಟದ ನೈಜಚಿತ್ರಣ ನಿಮಗೆ ಸಿಗುವುದೇ ಇಲ್ಲ. ನಮ್ಮವರ ಅಭಿಮನ್ಯು ಹೋರಾಟದ ರೀತಿಯ ಹೃದಯ ವಿದ್ರಾವಕ ಅಸಮಬಲಗಳ ಝರಿ ನಮಗೆ ದೊರಕುವುದೇ ಇಲ್ಲ. ಇಂದು ನಾವಿಷ್ಟು ಸುಖಿಗಳು ಯಾಕೆ ಎಂಬ ನೈಜತೆ ನಮ್ಮ ಅರಿವಿಗೇ ಬರುವುದಿಲ್ಲ. ಈಗ ನಮ್ಮೂರಲ್ಲಿ ನಮ್ಮ ಜಿಲ್ಲೆಯಲ್ಲಿ ನಾನು ಕಂಡ ಸ್ವಾತಂತ್ರ್ಯ ಹೋರಾಟದ ಕಥೆಯನ್ನ ನಿಮಗೆ ವಿಸ್ತಾರವಾಗಿ ಹೇಳುತ್ತೇನೆ.

ನನಗೆ ಸರಿಯಾಗಿ ನೆನಪಿದೆ. ಅದು ೧೯೨೦ರ ಅವಧಿ. ಆಗ ಲೋಕಮಾನ್ಯ ಬಾಲಗಂಗಾಧರ ತಿಲಕರ "ಸ್ವರಾಜ್ಯ ನಮ್ಮ ಆಜನ್ಮಸಿದ್ಧ ಹಕ್ಕು; ಅದನ್ನು ಪಡೆದೇ ತೀರುತ್ತೇವೆ" ಎಂಬ ಘೋಷಣೆ ಇಡೀ ರಾಷ್ಟ್ರದೆಲ್ಲೆಡೆ ಮನೆ ಮಾಡಿತ್ತು. ತಿಲಕರ ಭಾಷಣ ಲೇಖನಗಳಿಂದ ಪ್ರೇರಿತರಾದ ಹರಿಹರದ ಗುಂಡೂರಾಯರು ಚಿತ್ರದುರ್ಗದ ಐಯ್ಯಣ್ಣನವರು ಪೇಟೆಯಲ್ಲಿ ತಮ್ಮ ಗೆಳೆಯರೊಂದಿಗೆ ಕೂಡಿ ತಿಲಕರ ಸಂಘವನ್ನು ಪ್ರಾರಂಭಿಸಿದರು. ಜಿಲ್ಲಾ ಕಛೇರಿಯಲ್ಲಿ ಗುಮಾಸ್ತರಾಗಿದ್ದವರು ನಂತರ ಸ್ವ–ಅಭ್ಯಾಸದಿಂದ ವಕೀಲರಾದರು. ತಿಲಕ ಸಂಘದ ಅಡಿಯಲ್ಲಿ ವೃತ್ತ ಪತ್ರಿಕೆಯನ್ನು ಓದಲು ಜನಸಾಮಾನ್ಯರಿಗೆ ಪ್ರೇರಣೆ ನೀಡುವ ದೃಷ್ಟಿಯಿಂದ ತಿಲಕ ಪುಸ್ತಕಾಲಯ–ವಾಚನಾಲಯಗಳನ್ನು ಶುರುಮಾಡಿದರು.ನಮ್ಮ ಹರಿಹರದಂತಹ ಸಣ್ಣ ಊರುಗಳಲ್ಲಿ ಸಣ್ಣರೂಪದಲ್ಲಿಯೇ ಭರ್ಜರಿಯಾಗಿ ಜ್ಞಾನ, ಮಾಹಿತಿ ಹಾಗೂ ವಾರ್ತಾ ಪ್ರಸಾರವಾಗುತ್ತಿದ್ದ ಕಾಲವದು. ವಾಚನಾಲಯಕ್ಕೆ ಎಂದೂ ಯಾರಿಂದಲೂ ಗುಂಡೂರಾಯರು ಹಣವನ್ನು ಸ್ವೀಕರಿಸಿದ್ದನ್ನ ನಾನು ಇದುವರೆಗೂ ನೋಡಿಲ್ಲ. ಅಲ್ಲೊಂದು ಮೂಲೆಯಲ್ಲಿ ಮೇಜಿನ ಮೇಲೆ ಮಡಕೆಯ ಬಾಯಿಗೆ ಬಟ್ಟೆಕಟ್ಟಿ ತೂತ ಮಾಡಿ ಇಡುತ್ತಿದ್ದರು. ನಿಮ್ಮಿಚ್ಛೆ ಇದ್ದರೆ ನಿಮಗನಿಸಿದಷ್ಟು ಹಣ ಅದರಲ್ಲಿ ಹಾಕಬಹುದು. ತಿಂಗಳ ಅಂತ್ಯಕ್ಕೆ ಅದನ್ನ ತೆಗೆದು ವಾಚನಾಲಯಕ್ಕೆ ಬಳಸುತ್ತಿದ್ದರು. ಕಡಿಮೆಯಾದಲ್ಲಿ ಸ್ವತಃ ಕೈಯ್ಯಾರೆ ಹಣವನ್ನು ಹಾಕಿ ವಾಚನಾಲಯ

ನಡೆಸುತ್ತಿದ್ದ ಮಹಾನುಭಾವರು. ಸ್ವಲ್ಪ ವರ್ಷಗಳ ಕಾಲ ವಾಚನಾಲಯ ಭರದಿಂದ ಸಾಗಿತ್ತು. ಚಳುವಳಿಯ ಎಲ್ಲಾ ವಿಚಾರಗಳಿಗೂ ಪ್ರತಿಯೊಬ್ಬರೂ ವಾಚನಾಲಯಕ್ಕೇ ಮುಖಮಾಡುತ್ತಿದ್ದರು. ಅಷ್ಟರಲ್ಲಿ ಚಳುವಳಿಯ ಧಾಟಿ ತೀವ್ರವಾಗಿ ಈ ಕಾರ್ಯಕ್ಕೆ ಕೊಂಚ ಹಿನ್ನಡೆಯಾಯ್ತು. ಕೊಂಚ ತಡೆದು ೧೯೩೩ರಲ್ಲಿ ಈ ವಾಚನಾಲಯವನ್ನ ಗುಂಡೂರಾಯರು ತಾಲ್ಲೂಕು ಕಾಂಗ್ರೆಸ್ ಸಮಿತಿಗೆ ವಹಿಸಿಕೊಟ್ಟರು.

ಸಾರ್ವಜನಿಕ ಸಭೆಗಳೇ ನಡೆಯದ ಕಾಲದಲ್ಲಿ ಜನರನ್ನೆಲ್ಲ ಸೇರಿಸಿ ಭಾಷಣಕಾರರನ್ನು ಕರೆಯಿಸಿ ಭಾಷಣ ಮಾಡಿಸಿದ್ದರು ಗುಂಡೂರಾಯರು. ಸಾರ್ವಜನಿಕ ಗಣೇಶೋತ್ಸವದ ಆಯೋಜನೆ, ಸಂಗೀತ ಕಛೇರಿಗಳು, ಖಾದೀ ಪ್ರಚಾರ, ವಿದೇಶೀ ವಸ್ತ್ರದಹನ, ತಿಲಕ ಸಂಘದ ವಾರ್ಷಿಕೋತ್ಸವ, ಒಂದೇ ಎರಡೇ. ಇವರ ಆಯೋಜನೆಯಲ್ಲಿ ಆಲೂರು ವೆಂಕಟರಾಯರು, ಎಂ. ವೆಂಕಟಕೃಷ್ಣಯ್ಯ, ಡಿ.ಕೆ. ಭಾರದ್ವಾಜ್, ಡಾ॥ ಹರ್ಡೀಕರ ಮಂಜಪ್ಪನವರು, ಮುದವೀಡು ಕೃಷ್ಣರಾಯರು, ಬಳ್ಳಾರಿ ರಾಘವಾಚಾರ್‌ರವರು ಭಾಷಣ ನೀಡಿದ್ದರು. ಆಲೂರು ವೆಂಕಟರಾಯರ ಭಾಷಣ ಕೇಳಿ ಹಿರಿಯೂರಿನ ರಾಮದಾಸರು ಖಾದೀವಸ್ತ್ರಧಾರಿಗಳಾದರು ಎಂದು ಹೆಮ್ಮೆಯಿಂದ ಎಲ್ಲರಲ್ಲಿಯೂ ಗುಂಡೂರಾಯರು ಸಂಭ್ರಮದಿಂದ ಹೇಳಿಕೊಳ್ಳುತ್ತಿದ್ದರು.

ಒಂದು ದಿನ ೧೯೨೬ರ ಸುಮಾರಿಗೆ ಒಮ್ಮೆ ತಿಲಕ ಸಂಘದ ವಾರ್ಷಿಕೋತ್ಸವ ನಡೆಯುತ್ತಿರುವ ಸಂಧರ್ಭದಲ್ಲಿ ಮುದವೀಡು ಕೃಷ್ಣರಾಯರು ಕರ್ನಾಟಕದ ಗತವೈಭವ ಮತ್ತು ಸ್ವರಾಜ್ಯ ನಮ್ಮ ಆಜನ್ಮ ಸಿದ್ಧ ಹಕ್ಕು ಎಂಬ ವಿಚಾರವಾಗಿ ಉಪನ್ಯಾಸವನ್ನು ನೀಡಿದರು. ಜೊತೆಗೆ ಉತ್ಸವಾಂಬಾ ದೇವಾಲಯದಲ್ಲಿ ಸ್ವಾತಂತ್ರ್ಯ ಸಮ್ಮೇಳನ ನಡೆಸಿದ್ದಕ್ಕಾಗಿ ಪೋಲಿಸರು ಸಿ.ವಿ. ಕೃಷ್ಣಮೂರ್ತಿಗಳನ್ನು ಹಾಗೂ ಇತರೆ ಸ್ವಯಂಸೇವಕರನ್ನು ಸ್ಟೇಷನ್‌ಗೆ ಕರೆಸಿ ಎಚ್ಚರಿಕೆ ಕೊಟ್ಟು ಕಳುಹಿಸಿದ್ದರು. ಕೊಪ್ಪಳದ ಜಯರಾಮಾಚಾರ್ಯರ ರಾಜಕೀಯ ಹಾಗೂ ಪುರಾಣ ಮಿಶ್ರಿತ ಹರಿಕಥೆಗಳನ್ನು ಆಸ್ವಾದಿಸುವವರಿಗೆ ಸದಾ ರೋಮಾಂಚನ. ಕಾರ್ಯಕ್ರಮದ ನಂತರ ಸಭಿಕರು ಮಂಗಳಾರತಿ ತಟ್ಟೆಗೆ ಹಣ, ಉಂಗುರ, ಬಂಗಾರದ ಬಳೆಗಳನ್ನೂ ಹಾಕಿ ಅಭಿಮಾನ ವ್ಯಕ್ತಪಡಿಸಿದ್ದುಂಟು. ಅಷ್ಟೊಂದು ಮಾರ್ಮಿಕತೆ ಅವರ ಹರಿಕಥೆಯಲ್ಲಿ. ನಾನಂತೂ ಯಾವ ಕಥಾ ಪ್ರಸಂಗವನ್ನೂ ತಪ್ಪಿಸಿಲ್ಲ. ಕಾಮನ ಬಾವಿಯ ಹತ್ತಿರವಿದ್ದ ಟಿಪ್ಪು ಸುಲ್ತಾನನು ಕಟ್ಟಿಸಿದ್ದ ಕಟ್ಟಡವೊಂದರಲ್ಲಿದ್ದ ತಾಲ್ಲೂಕು ಕಛೇರಿಯ ಆವರಣವೇ ಈ ಎಲ್ಲಾ ಕಾರ್ಯಕ್ರಮಗಳ ವೇದಿಕೆಯಾಗಿತ್ತು. ಭಾಷಣ ಮುಗಿಸಿ ಮನೆಗೆ



ಬಂದಾಗ "ಭಾಷಣ–ಹರಿಕಥೆ ಸಂಭ್ರಮದ ಮಧ್ಯೆ ಓದಿನ ಕಡೆ ಗಮನ ಕಡಿಮೆ ಆಗಿದೆ ಇವ್ನಿಗೆ. ಅಕ್ಕಂಗೆ ಕಾಗದ ಬರೆದು ಕರ್‍ಕೊಂಡ್ ಹೋಗಂತೀನಿ. ಎಲ್ಲಾ ಬುದ್ದಿ ಬರ್ತದೆ" ಎನ್ನುವುದು ಮಾವನ ಸಾಮಾನ್ಯ ಬೆದರಿಕೆ ಆಗಿತ್ತು.

## ಖಾದಿಯ ಪ್ರಚಾರ

ಮಾವನ ವಿರೋಧದ ಮಧ್ಯದಲ್ಲೂ ಅವರ ಕಣ್ಣು ತಪ್ಪಿಸಿ ನಾನೂ ವಾಚನಾಲಯಕ್ಕೆ ಸದಾ ಹೋಗುತ್ತಿದುದರಿಂದ ಗಾಂಧೀಜಿಯವರ ಬಗ್ಗೆ ಹಾಗೂ ಅವರು ದೇಶದಾದ್ಯಂತ ಎಲ್ಲರೂ ಒಗ್ಗಟ್ಟಾಗಿ ಚಳುವಳಿ ನಡೆಸಬೇಕೆಂಬ ಕೋರಿಕೆ ದಿನಪತ್ರಿಕೆಗಳಲ್ಲಿ ಓದುತ್ತಿದ್ದೆ. ಈ ಬಾರಿ ವಿದೇಶಿವಸ್ತ್ರ ಮಾರಾಟದ ವಿರುದ್ಧ ಸಂಘಟನೆಗೊಂಡು ವಿರೋಧಿಸಬೇಕು, ದೇಶದಾದ್ಯಂತ ಖಾದಿಯನ್ನೇ ಧರಿಸಬೇಕು ಎಂಬ ಗಾಂಧೀಜಿಯವರ ಕರೆ ಮನೆ ಮನೆಗೆ ಕಾಡ್ಗಿಚ್ಚಿನಂತೆ ಹರಡಿತ್ತು. ಖಾದಿ ಗ್ರಾಮೋದ್ಯೋಗವನ್ನು ಪ್ರಚುರ ಪಡಿಸುವ ನಿಟ್ಟಿನಲ್ಲಿ ಜನರೆಲ್ಲರೂ ಚರಖಾಗಳ ಖರೀದಿ, ಹತ್ತಿಯಖರೀದಿ, ಸ್ವಯಂ ನೇಯ್ಗೆಯ ವಿಧಾನಗಳನ್ನು ಕಲಿಯುವಲ್ಲಿ ತೀವ್ರ ಆಸಕ್ತಿಯನ್ನು ತೋರಿಸಿದ್ದರು.

**ಏಕೆ ಧರಿಸುವೆ ಸಾಕು ಬಿಡು ಪರ**
**ದೇಶಿ ಜನರ ವಸ್ತ್ರವ ।**
**ಹಾಕು ಬೆಂಕಿಲಿ ಉರಿಯಲಿ ಧಗಧಗ**
**ಧರಿಸು ಖಾದಿ ಪವಿತ್ರವ ॥**

ಎಂಬ ಹಾಡು ಕರ್ನಾಟಕದೆಲ್ಲಡೆ ಜನರು ಹಾಡಲಾರಂಭಿಸಿದ್ದರು. ಅದು ೧೯೨೧ರ ಸಮಯ. ಇದೇ ಗುಂಡೂರಾಯರು ಎಲ್ಲರಿಗಿಂತ ಮೊದಲು ಬಡಗಿ ಹೊಸೂರಪ್ಪನ ಸಹಾಯವನ್ನು ಪಡೆದು ಉತ್ತಮ ಚರಖಾ ಸಿದ್ದಪಡಿಸಿಕೊಂಡರು. ಗಾಂಧೀಜಿಯವರ ಕಟ್ಟಾ ಅಭಿಮಾನಿ, ಅವರ ಒಂದು ವಾಕ್ಯವನ್ನೂ ತೆಗೆದು ಹಾಕದವರು, ಖುದ್ದಾಗಿ ತಾವೇ ಧಾರವಾಡಕ್ಕೆ ಹೋಗಿ ನೂಲುವುದನ್ನೂ ಕಲಿತು ಬಂದರು. ಇವರ ಉತ್ಸಾಹ ಕಂಡು ಇತರರೂ ಪ್ರೇರಣೆ ಪಡೆದದ್ದಾಯ್ತು. "ಏನಂದ್ರೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರ್ಬೇಕು ಅಂದ್ರೆ ಇದೇ ರೀತಿ ಜನ ಒಗ್ಗಟ್ಟಾಗ್ಬೇಕು ರಾಯ್ರೇ. ಆಗ ಅವರ್ಗೆ ನಮ್ ಮೇಲೆ ದಬ್ಬಾಳಿಕೆ ಮಾಡಕ್ಕೆ ದಂ ಇರಲ್ಲ" ಅಂತ ಹಿರಿಯರೊಬ್ಬರು ವಾಚನಾಲಯದಲ್ಲಿ ಗುಂಡೂರಾಯರಿಗೆ ಹೇಳುತ್ತಿದ್ದದ್ದು ಈಗ ನೆನಪಿಗೆ ಬರ್ತಿದೆ. ಹೀಗೆ ಹಚ್ಚಡದಂತಹ ಬಟ್ಟೆ ಮೊದಲು ತಯಾರಾಗಿ ಬರಬರುತ್ತಾ ರುಮಾಲು, ಪಂಚೆ, ಸೀರೆಗಳೂ

ತಯಾರಾಗತೊಡಗಿದವು. ಗುಂಡೂರಾಯರು 'ಖಾದಿ ಮಹಿಮೆ' ಎಂಬ ಪುಸ್ತಕವನ್ನೂ ಬರೆದರು. ಈ ಮಧ್ಯೆವಿದೇಶಿ ವಸ್ತ್ರದಹನವೂ ನಡೆಯಿತು. ಇವರ ಹಲವು ಸೇವಾಕಾರ್ಯದಲ್ಲಿ ಅವರ ಧರ್ಮಪತ್ನಿ ವೆಂಕಮ್ಮನವರೂ ಭಾಗಿಯಾದರು. ಈ ಎಲ್ಲಾ ಕಾರ್ಯಗಳಿಗೆ ಚಿತ್ರದುರ್ಗದ ಕುಂಚಿಟಿಗರ ಹಾಸ್ಟೆಲ್ ಹಾಗೂ ರೆಡ್ಡಿ ಹಾಸ್ಟೆಲ್ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾಗಿತ್ತು.

೧೯೨೭ರ ಮಧ್ಯದಲ್ಲಿ ಮಹಾತ್ಮ ಗಾಂಧೀಜಿಯವರು ಮೈಸೂರು ದೇಶದ ಪ್ರವಾಸ ಕೈಗೊಂಡು ನಿಧಿ ಸಂಗ್ರಹಿಸಿದರು. ಅಂದು ಸಂಗ್ರಹವಾದ ನಿಧಿಯಿಂದ ಮತ್ತಷ್ಟು ಖಾದಿ ಅಂಗಡಿಗಳು ಪ್ರಾರಂಭವಾದವು. ದಾವಣಗೆರೆಯ ಶ್ರೀನಿವಾಸ ಶೆಟ್ಟರ ಮೇಲ್ವಿಚಾರಣೆಯಲ್ಲಿ ಒಂದು ಖಾದಿ ಅಂಗಡಿಯನ್ನು ಅಖಿಲ ಭಾರತ ಚರಖಾ ಸಂಘವು ಪ್ರಾರಂಭಿಸಿತು. ಇದರ ವ್ಯವಸ್ಥಾಪಕರಾದ ಬೆಲ್ಲದ ಸಿದ್ಲಿಂಗಪ್ಪನವರು ತಮ್ಮ ಹೆಗಲ ಮೇಲೆ ಗಂಟುಗಳನ್ನ ಹೊತ್ತುಕೊಂಡು ಹಳ್ಳಿಹಳ್ಳಿಗೆ ಹೋಗಿ ಖಾದಿ ಮಾರುತ್ತಿದ್ದದ್ದು ಈಗಲೂ ನನಗೆ ಕಣ್ಣಿಗೆಕಟ್ಟಿದ ಹಾಗಿದೆ. ನಮ್ಮ ಹರಿಹರದ ನಾರಾಯಣರಾಯರು ಅರ್ಧ ಬೆಲೆಗೆ ಖಾದಿ ಅಂಗಿಯನ್ನು ಹೊಲಿದುಕೊಡುತ್ತಿದ್ದರು. ಹೊಲಿಗೆಯ ಹೆಚ್ಚಿನ ತರಬೇತಿಗೆ ಮೈಸೂರಿಗೆ ಹೋಗಿದ್ದಾಗ ಅವರು ಅಲ್ಲಿ ನಡೆದ ಹ್ಯಾಮಿಲ್ಟನ್ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರಂತೆ. ಸದ್ಯಕ್ಕೆ ಜೈಲು ಪಾಲಾಗಿದ್ದಾರೆಂಬ ಸುದ್ದಿ ಬಂದಿತ್ತು. ಮತ್ತೊರ್ವರು ಹುಲ್ಲೂರು ಶ್ರೀನಿವಾಸ ಜೋಯಿಸರು. ಗಾಂಧೀಜಿಯವರ ಯಥಾವಾಕ್ಯ ಪರಿಪಾಲಕರಾದ ಇವರು ಬರೀ ಸ್ವದೇಶಿ ವಸ್ತುಗಳನ್ನೇ ಉಪಯೋಗಿಸುತ್ತಿದ್ದರು. ಚಿತ್ರದುರ್ಗದಲ್ಲಿ ಖಾದಿಯ ಪ್ರಚಾರ ಕೈಗೊಂಡು, ಮಾರುವ ಶಾಖೆಯನ್ನು ತಮ್ಮ ಗೃಹದಲ್ಲಿಯೇ ಪ್ರಾರಂಭಿಸಿದ್ದರು. ಸ್ವತಂತ್ರ ವೃತ್ತಿಯನ್ನು ಕೈಗೊಳ್ಳಲು ಹಾಗೂ ಖಾದಿ ಭಂಡಾರ ಸ್ಥಾಪಿಸಲು ಸ್ಥಳೀಯರಿಗೆ ಸದಾ ಸ್ಫೂರ್ತಿ ತುಂಬುತ್ತಿದ್ದರು ಜೋಯಿಸರು.

ಈ ಎಲ್ಲಾ ಹಿರಿಯರ ಸಂಗ ದೊರೆತು ನಾನು ನನಗೇ ಗೊತ್ತಿಲ್ಲದಂತೆ ಒಬ್ಬ ಪ್ರಬುದ್ಧ ಯುವಕನಾಗಿ ಬೆಳೆದೆ. ಸಂಘದ, ದೇಶದ ಬಗೆಗೆ ಕಿರಿಯ ವಯಸ್ಸಿನಲ್ಲೇ ನನ್ನ ಆಸಕ್ತಿಯನ್ನು ಗಮನಿಸಿ ಇವರೆಲ್ಲರೂ ಸೇರಿ ನನಗೊಂದು ಖಾದಿ ಕಸೆ ಅಂಗಿ ಹಾಗೂ ಟೋಪಿಯನ್ನು ಹೊಲಿದು ಉಡುಗೊರೆಯಾಗಿ ಕೊಟ್ಟರು. ಅಂದಿನ ದಿನ ನನ್ನ ಸಂಭ್ರಮ ಹೇಳತೀರದು. ಆಗಿನಿಂದ ಎಲ್ಲರ ಬಾಯಿಯಲ್ಲೂ ನಾನು ಭರತ್‌ದೇಶ್‌ಮುಖ್‌ನಿಂದ ಅವರೆಲ್ಲರ ಆಪ್ತ 'ಭರತ'ನಾಗಿದ್ದೆ. ೧೬ರ ಪ್ರಾಯದ ನನ್ನಲ್ಲಿ ಖಾದಿಯ ಬಗೆಗೆ ವಿಶೇಷ ವ್ಯಾಮೋಹ



ನೆಲೆಮಾಡಿತ್ತು. ಆ ತಿಂಗಳು ನಾನೇ ನನ್ನ ಕೈಯಾರೆ ನೇಯ್ದ ಒಂದು ರುಮಾಲು ಹಾಗೂ ಸೀರೆಯನ್ನು ಅತ್ತೆ ಮಾವನಿಗೆ ಉಡುಗೊರೆಯಾಗಿ ಕೊಟ್ಟಿದ್ದೆ. ಅತ್ತೆ ಕೈಯಲ್ಲಿ ಸೀರೆ ಹಿಡಿದು ಅಪ್ಪುತ್ತಾ, ಗಳಗಳನೆ ಅಳುತ್ತಾ ನನಗೆ ತಾಯಿಯಂತೆ ಮಮತೆ ತೋರಿಸಿದ್ದಳು. ಯಥಾವತ್ತಾಗಿ ಮಾವ ರುಮಾಲನ್ನು ಕೈಲಿ ಹಿಡಿದು "ಇವೆಲ್ಲಾ ಮಾಡ್ತಾಕೂತ್ರೆ ದೊಡ್ಡವ್ನಾದ್ಮೇಲೆ ಹೊಟ್ಟೆಗೇನ್ ತಿಂತಿಯಾ? ಮೊದ್ಲು ಓದು. ಸರ್ಕಾರಿ ಕೆಲ್ಸ ಗಿಟ್ಟಿಸ್ಕೋ" ಎಂದು ಗುಡುಗಿದ್ದನು. ನನ್ನ ಆಶಾಭಾವದ ಮೇಲೆ ತಣ್ಣನೆಯ ನೀರು ಎರಚಿ ಹೋಗಿದ್ದ ನನ್ನ ಮಾವ.

೧೯೨೯ನೇ ಮೇ ತಿಂಗಳ ಕೊನೆಯ ಭಾನುವಾರ ಅದು. ಚಿತ್ರದುರ್ಗದಲ್ಲಿ ಮೊದಲ ಸಲ ಸೇವಾದಳದ ಮತ್ತೊಬ್ಬ ಕಾರ್ಯಕರ್ತರೊಂದಿಗೆ ಧ್ವಜವಂದನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬ್ರಿಟೀಷರ ಕಾನೂನಿನ ವಿರುದ್ಧ ನಮ್ಮ ಸ್ವಂತ ಧ್ವಜವನ್ನು ಹಾರಿಸುವ ಕಾರ್ಯಕ್ರಮ. ಅಂತೂ ಪ್ರತಿಬಂಧಕಾಯ್ದೆ ಜಾರಿಯಾಯ್ತು. ಆಗಲೇ ನಮ್ಮ ಹುಲ್ಲೂರು ಶ್ರೀನಿವಾಸ ಜೋಯಿಸರ ಸಮೇತ ಅವರ ತಂಡ ಪೋಲೀಸರ ಪಟ್ಟಿಯಲ್ಲಿ ದಾಖಲಾದರು. ಜೋಯಿಸರು ಚಿತ್ರದುರ್ಗದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಚುನಾಯಿತರಾಗಿದ್ದರು. ಗೃಹ ಕೈಗಾರಿಕೆ ಹಾಗೂ ಹರಿಜನೋದ್ಧಾರವೇ ಅವರ ಮುಖ್ಯ ಕಾರ್ಯಗಳಾಗಿದ್ದವು.

ಮಾವನ ಆಕ್ಷೇಪಣೆಯ ನಡುವೆಯೂ ಸ್ವಾತಂತ್ರ ಚಳುವಳಿಯ ಕೆಲವು ಪತ್ರಿಕೆ ಹಾಗೂ ಕರಪತ್ರವನ್ನು ರಾತ್ರೋರಾತ್ರಿ ಪೋಲೀಸರ ಕಣ್‌ತಪ್ಪಿಸಿ ಮತ್ತೊಬ್ಬರಿಗೆ ತಲುಪಿಸುವುದು, ವಾಚನಾಲಯಕ್ಕೆ ಮಾಹಿತಿಗಾಗಿ ಬರುವ ಅನಕ್ಷರಸ್ಥ ಗ್ರಾಮಸ್ಥರಿಗೆ ಸ್ವಾತಂತ್ರ್ಯ ಚಳುವಳಿಯ, ತಿಲಕರ, ಗಾಂಧೀಜಿಯವರ ಭಾಷಣ–ಲೇಖನಗಳನ್ನು ಓದಿ ಹೇಳುವ ಕಾರ್ಯ ನನ್ನ ಸುಪರ್ದಿಗೆ ಬಂತು. ಇದನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದೆ. ಒಂದಲ್ಲಾ ಒಂದು ಚಳುವಳಿಗಳ ಆಕರವಾಗಿ ತಿಲಕರು ಹಾಗೂ ಗಾಂಧೀಜಿಯವರು ದೇಶದ ಜನತೆಯಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಬೆಳಗಿಸುತ್ತಲೇ ಇದ್ದರು.

ಹಾಗೆಯೇ ನಮ್ಮೂರಿನಲ್ಲಿ ಪ್ರತೀ ದಿನ ಪ್ರಭಾತ್ ಫೇರಿ (ಜನರನ್ನು ಮುಂಜಾನೆ ಒಂದುಗೂಡಿಸಿ ಭಕ್ತಿಗೀತೆ ಹಾಗೂ ದೇಶ ಭಕ್ತಿಗೀತೆಗಳನ್ನು ಹಾಡುತ್ತಾ ಬೀದಿ ಬೀದಿಗಳಲ್ಲಿ ಒಟ್ಟಾಗಿ ಹಾಡುತ್ತಾ ಸಾಗುವುದು) ನಡೆಸುತ್ತಿದ್ದರು ಅಂತ ಈ ಮುಂಚೆಯೇ ಹೇಳಿದ್ದೆನಲ್ಲ. ಅದೇ ಹೊತ್ತಿಗೆ ಹೊಸದುರ್ಗ ತಾಲ್ಲೂಕಿನಲ್ಲಿ ಉಪಾಧ್ಯಾಯರಾಗಿದ್ದ ಚಪಾಳಿ ಮರಿರಾಮಪ್ಪನವರು 'ಸ್ತ್ರೀ ನಾಟಕ' ಎಂಬ

ನಾಟಕವನ್ನು ಆಡಿಸಿದರು. ಅದರಲ್ಲಿ ಪಾಶ್ಚಾತ್ಯ ಶಿಕ್ಷಣದಿಂದ ನಮ್ಮ ಜನ ಪಾಶ್ಚಾತ್ಯರನ್ನು ಅನುಕರಿಸಿ ವಿಲಾಸಿಗಳೂ, ಕುಡುಕರೂ ಆಗಿ ಹೀನವರ್ತನೆಯ ಜನರ ಬೆಂಬಲಿಗರೂ, ಸತ್ಯವಾದಿಗಳನ್ನು ತಿರಸ್ಕರಿಸುವವರೂ ಆದರೆಂದು ಚಿತ್ರಿಸಲಾಗಿತ್ತು. ಆ ನಾಟಕಕ್ಕೆ ಲೈಸೆನ್ಸ್ ಕೊಡುವುದಿಲ್ಲವೆಂದರೂ, ಊರಿನಲ್ಲಿ ಐಕ್ಯತೆ ಇದ್ದುದರಿಂದ ನಾಲ್ಕೈದು ಬಾರಿ ಅದನ್ನು ಅಭಿನಯಿಸಿದ್ದಾಯಿತು. ಧಾರವಾಡ ಮತ್ತು ಬೆಂಗಳೂರು ಕಡೆಯಿಂದ ಪ್ರಿಂಟಾದ ಸಣ್ಣ ಸಣ್ಣ ಲಾವಣಿಗಳನ್ನು ನಮ್ಮ ಊರ ಎಸ್.ಕೆ. ಗೋವಿಂದಪ್ಪ, ಜಿ.ಎಚ್.ಸಿದ್ದಪ್ಪ ಮುಂತಾದವರು ಪ್ರಭಾತ್ ಫೇರಿಯ ಸಮಯದಲ್ಲಿ, ಹೀಗೇ ಎಲ್ಲಾರೂ ಒಟ್ಟಾಗಿ ಕೂತಿದ್ದಾಗ, ಒಬ್ಬೊಬ್ಬರೇ ನಡೆದುಕೊಂಡು ಹೋಗುವಾಗ ಹಾಡಿ ಪ್ರಚಾರ ಮಾಡಿದರು. ಹೀಗೆ ಸ್ವಾತಂತ್ರ್ಯ ಚಳುವಳಿಗಳ ಬಗ್ಗೆ ನಮ್ಮ ಊರಿನಲ್ಲಿ ಇನ್ನಷ್ಟು ಜಾಗೃತಿ ಹೆಚ್ಚಿತು.

ಒಮ್ಮೆ ನಮ್ಮ ಶಾಲೆಯ ಹೊರಗಡೆ ವಿದೇಶಿ ವಸ್ತ್ರಬಳಕೆಯ ವಿರುದ್ಧ ಒಂದು ಗುಂಪು ಚಳುವಳಿಯನ್ನು ನಡೆಸುತ್ತಿತ್ತು. ಶಾಲೆಯ ಮುಖ್ಯೋಪಾಧ್ಯಾಯರ ಸೂಚನೆಯ ಮೇರೆಗೆ ವಿದ್ಯಾರ್ಥಿಗಳು ಯಾರೂ ಹೊರಗಡೆ ಹೋಗದಂತೆ ಮೇಷ್ಟ್ರು ಬಾಗಿಲು ಕಿಟಕಿಗಳನ್ನು ಭದ್ರಮಾಡಿದರು. ಆದರೂ ಅವರ ಘೋಷಣೆ, ಲಾವಣಿಗಳು ಸೂರಿನ ಮೂಲಕ ನಮ್ಮ ಕಿವಿಗಳಿಗೆ ತಲುಪುತ್ತಲೇ ಇತ್ತು. ಸುಮಾರು ಒಂದು ಘಂಟೆ ದಾಟಿತು. ನನಗಂತೂ ಒಳಗೆ ಹುದುಗಿದ್ದ ತಳಮಳ ತಡೆಯಲು ಆಗಲೇ ಇಲ್ಲ. ನಾನು ಹಾಗೂ ನನ್ನ ಗೆಳೆಯರ ಗುಂಪು ಅದುವರೆಗೂ ಅದುಮಿಟ್ಟ ತೀಕ್ಷ್ಣ ಪ್ರಚೋದನೆಯನ್ನು ಹೊರಗೆ ಚಿಮ್ಮಿಸುತ್ತಾ ಮೇಜಿನ ಮೇಲಿಂದ ಎದ್ದು 'ಭಾರತ್ ಮಾತಾಕಿ ಜೈ, ಗಾಂಧೀಜಿ ಕಿ ಜೈ' ಎಂದು ಜೋರಾಗಿ ಜೈಕಾರ ಹಾಕಿ ಬಾಗಿಲನ್ನು ತೆರೆದು ಹೊರಗೆ ಓಡೋಡಿ ಬಂದು ಚಳುವಳಿಯ ಗುಂಪನ್ನು ಸೇರಿಕೊಂಡೆವು. ನಮ್ಮ ಹಿಂದೆಯೇ ಇಡೀ ಶಾಲೆಯ ವಿದ್ಯಾರ್ಥಿಗಳು ಜಯಘೋಷಗಳನ್ನು ಹಾಕುತ್ತಾ ಪ್ರವಾಹದ ಗತಿಯಲ್ಲಿ ತಂಡೋಪತಂಡವಾಗಿ ಪ್ರಾಂಗಣದ ಹೊರಗೆ ಹರಿದು ಬಂತು. ಮೇಷ್ಟ್ರು ಏನೂ ಮಾಡದ ಅಸಹಾಯ ಸ್ಥಿತಿಯಲ್ಲಿದ್ದರು.

ಅದೇ ದಿನ ಸಂಜೆ ಮಾವ ತೋಟದ ಕೆಲಸವನ್ನು ಮುಗಿಸಿ ಮನೆಗೆ ಹಿಂತಿರುಗುವಾಗ, ಹಾದಿಯಲ್ಲಿ ಮೇಸ್ಟರರು ಸಿಕ್ಕು ಮಾವನನ್ನು ಕರೆದು ಮಾತಾಡಿದರಂತೆ.

"ಭರತ, ಚಳುವಳಿ ಚಳುವಳಿ ಅಂತ ಅತ್ತಕಡೇನೇ ಪೂರ್ತಿ ಗಮನ



ಕೊಟ್ಟಿದಾನೆ. ಶಾಲೆಯಕಡೆ ತಲೆ ಹಾಕ್ದೆ ತಿಂಗಳಾಯ್ತು. ಇದು ಹೀಗೇ ಮುಂದುವರುದ್ರೆ ಮೆಟ್ರಿಕ್ ಪಾಸ್ಆದ ಹಾಗೆ. ಏನಾದ್ರೂ ಹೇಳ್ಬಾರ್ದೆ ಅವ್ನಿಗೆ. ಮೆಟ್ರಿಕ್ ಒಂದು ಪಾಸ್ ಮಾಡ್ಕೊಂಡ್ರೆ ಸಾಕು ಸರ್ಕಾರಿ ನೌಕರಿ ಗಿಟ್ಟಿಸಿ ಕೋಬಹುದು. ಭವಿಷ್ಯ ಉಜ್ವಲವಾಗತ್ತೆ."

"ಏನ್ ಹೇಳೋದು ಮೇಷ್ಟ್ರೆ. ನಾನೂ ಹೇಳೋ ಅಷ್ಟು ಹೇಳಿದ್ದಾಯ್ತು. ಹೆಗಲೆತ್ತರಕ್ಕೆ ಬೆಳ್ದಿದಾನೆ. ಹೆಚ್ಚು ಒತ್ತಡ ಹಾಕುದ್ರೆ ಕೈಮೀರಿ ಬೆಳೀತಾವೆ ಈಗಿನ ಜಾಯ್ಮಾನ್ದವ್ರು. ಆದ್ರೂ ಒಮ್ಮೆ ಮಾತಾಡ್ತೀನಿ" ಎಂದು ಮನೆಗೆ ಬಂದು, ಅತ್ತೆಯ ಮೇಲೆ ಹೀನಾಮಾನವಾಗಿ ರೇಗಿದ್ದನಂತೆ. ಅಂದು ಮಧ್ಯರಾತ್ರಿಯವರೆಗೂ ಅತ್ತೆ, ನಾನು ಬರುವ ಹಾದಿಯನ್ನೇ ಕಾದು ಗಳಗಳನೆ ಅತ್ತು ಮನಸ್ಸು ಹಗುರ ಮಾಡಿಕೊಂಡಿದ್ದಳು.

ಮಾರನೆಯ ದಿನ ಬೆಳಿಗ್ಗೆ ಪ್ರಭಾತ್ ಫೇರಿಗೆ ಹೋಗಿ ಮನೆಗೆ ಹಿಂತಿರುಗಿದಾಗ ನನ್ನ ಬರುವಿಕೆಯನ್ನೇ ಕಾಯುತ್ತಾ ಕುಳಿತಿದ್ದ ಮಾವ, ತನ್ನ ಪ್ರಶ್ನೋತ್ತರ ಮಾಲಿಕೆಗಳನ್ನ ಆಗಸದಿಂದ ಸುರಿದ ಬೆಂಕಿಯ ಉಂಡೆಯಂತೆ ನನ್ನ ಮೇಲೆ ಸುರಿಸತೊಡಗಿದ. ಶಾಲೆಯ ನಾಲ್ಕು ಗೋಡೆಯನ್ನು ಅದರ ಗಡಿಗಳನ್ನು ಮೀರಿ, ಗುಂಡೂರಾಯರ ವಾಚನಾಲಯದಲ್ಲಿ ಬೆಳೆದವ ನಾನು. ಮಾವನ ವೀರೋಚಿತ ಪ್ರಶ್ನೆಗಳಿಗೆ ನನ್ನ ಬಗೆಬಗೆಯ ವೀರೋಚಿತ ಉತ್ತರಗಳು ಅವನ ಮಾತಿನ ಧಾಟಿಯನ್ನೇ ಬದಲಿಸಿಬಿಟ್ಟವು. ಮಾವ ಕಕ್ಕಾಬಿಕ್ಕಿಯಾಗಿದ್ದ. ಅತ್ತೆ ನನ್ನ ವಾಕ್ಪಟುತ್ವದಿಂದ ಖುಷಿಗೊಂಡು ನನ್ನನ್ನು ಒಳಗಡೆ ಕರೆದುಕೊಂಡು ಹೋಗಿ ಹೊಟ್ಟೆತುಂಬಾ ಅವಲಕ್ಕಿ ಮೊಸರು ತಿನ್ನಲು ಕೊಟ್ಟು 'ಹೋಗಿ ಬಾ ಮಗ' ಅಂತ ದುಪ್ಪಟ್ಟು ಪ್ರೀತಿಯಿಂದ ಮುಂದಿನ ಚಳುವಳಿಗೆ ತನ್ನ ಅಭಯ ಹಸ್ತವನ್ನು ಚಾಚಿದ್ದಳು.

ಈಬಾರಿ ಗಾಂಧೀಜಿಯವರು ೧೯೩೦ರ ಹೊಸ್ತಿಲಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ಕರೆ ಇತ್ತರು. ದಿನಂಪ್ರತಿ ಉಪಯೋಗಿಸುವ ಸಾದಾ ಉಪ್ಪಿನ ಮೇಲೂ ಕರವನ್ನು ಹೇರುವ ಆಂಗ್ಲರ ಹೇಯ ಕೃತ್ಯವನ್ನು ಖಂಡಿಸಿ ಈ ಸತ್ಯಾಗ್ರಹಕ್ಕೆ ಕರೆ ಇತ್ತಿದ್ದರು. ಧಾರವಾಡ–ಹುಬ್ಬಳ್ಳಿಗಳಲ್ಲಿ ಈ ಸತ್ಯಾಗ್ರಹದ ಕಾವು ಜೋರಾಗಿಯೇ ಇದ್ದದ್ದರಿಂದ ನಮ್ಮ ಊರಿನ ಹಲವು ವಿದ್ಯಾರ್ಥಿಗಳು ಕಾಲೇಜು ವ್ಯಾಸಂಗ ತೊರೆದು ಉಪ್ಪಿನ ಸತ್ಯಾಗ್ರಹಕ್ಕೆ ಧುಮುಕಿದರು. ಹಿರಿಯ ಮುಖಂಡರೂ ಕೂಡ ಸತ್ಯಾಗ್ರಹದಲ್ಲಿ ಭಾಗಿಯಾಗಲು ನಮ್ಮ ಊರಿಂದ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದ್ದರು. ನಮ್ಮ ಊರಿನಲ್ಲಿ ಪ್ರತ್ಯೇಕವಾಗಿ ಈ ಚಳುವಳಿ ಏನೂ ನಡೆಯಲಿಲ್ಲ

ವಾದರೂ ಕಾಸಲ ಶ್ರೀನಿವಾಸ ಶೆಟ್ಟರು ಅಂಕೋಲೆಯಲ್ಲಿ ಭಾರೀ ಪ್ರಮಾಣದಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಾಗ ಮೊದಲ ದಿನ ಉತ್ಪಾದಿಸಿದ ಕರಮುಕ್ತ ಉಪ್ಪನ್ನು ಅಲ್ಲಿ ಹಾಜರಿದ್ದು ಹರಾಜಿಗೆ ಪಡೆದವರಲ್ಲಿ ಇವರೂ ಒಬ್ಬರು ಎಂದು ಹೆಮ್ಮೆಯಿಂದ ಹೇಳುವ ಸಂಗತಿ.

ಇದೇ ವರ್ಷದಲ್ಲಿ ನಮ್ಮ ಚಿತ್ರದುರ್ಗದ ಪ್ರಖ್ಯಾತ ವಕೀಲರು ಎಸ್. ನಿಜಲಿಂಗಪ್ಪನವರು ನಮ್ಮ ಜಿಲ್ಲೆಯಿಂದ ಹಲವರನ್ನು ಸಂಪರ್ಕಿಸಿ ಸಿರಸಿ–ಸಿದ್ಧಾಪುರ ಚಳುವಳಿಗೆ ನೆರವಾಗಲು ಸಾಧ್ಯವಾದಷ್ಟು ಹಣ ಸಂಗ್ರಹಿಸಿ ಕಳುಹಿಸಿದ್ದರು. ಆವತ್ತಿನಿಂದಲೇ ಪ್ರತೀ ಶನಿವಾರ ಅವರು ತಮ್ಮ ಗೆಳೆಯರೊಂದಿಗೆ ಸೇರಿ ರಾಷ್ಟ್ರಧ್ವಜ ವಂದನೆ ನಡೆಸುತ್ತಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ನಿಜಲಿಂಗಪ್ಪನವರು ಇಡೀ ಊರು ಸಮುದಾಯಕ್ಕೆ ಅತ್ಯಂತ ಗೌರವದ ಶಿಸ್ತಿನ ವ್ಯಕ್ತಿ ಹಾಗೂ ಎಲ್ಲರಿಗೂ ಪ್ರೀತಿಪಾತ್ರರಾಗಿದ್ದರು. ಹಾಗಾಗಿ ಇವರ ಈ ಕೆಲಸವನ್ನು ಕಂಡರೂ ಸರ್ಕಾರದವರು ಏನೂ ಕ್ರಮ ಕೈಗೊಳ್ಳಲಿಲ್ಲ. ಆದರೆ ಒಂದು ದಿನ ಆಗಿನ ಡೆಪ್ಯೂಟಿ ಕಮೀಷನರ್ ನಿಜಲಿಂಗಪ್ಪನವರಿಗೆ “ನಿಮ್ಮನ್ನು ಬಂಧಿಸಿದರೆ ನೀವು ವೃಥಾ ದೊಡ್ಡವರಾಗುತ್ತೀರಿ” ಎಂದು ಆಫೀಸಿಗೆ ಕರೆಸಿ ಗಂಭೀರವಾಗಿ ಹೇಳಿದ್ದರಂತೆ ಎಂದು ಊರಿನವರೆಲ್ಲಾ ಮಾತನಾಡಿಕೊಳ್ಳುತ್ತಿದ್ದರು. ಆದರೂ ದೇಶಾಭಿಮಾನ ನಿಜಲಿಂಗಪ್ಪನವರಿಂದ ಕಲಿಯಬೇಕು. ಅವರು ತಮ್ಮ ಕಾರ್ಯ ವೈಖರಿ ಬದಲಾಯಿಸಲೇ ಇಲ್ಲ.

ಗಾಂಧೀಜಿಯವರ ಹಾಗೂ ತಿಲಕರ ಭಾಷಣಗಳು ಹೆಚ್ಚಾಗಿ ಹಿಂದಿಯಲ್ಲೇ ಪ್ರಸಾರವಾಗುತ್ತಿದ್ದವು. ದಕ್ಷಿಣ ಭಾರತದಲ್ಲಿ ಹಿಂದಿಯ ಬಗೆಗೆ ಯಾವುದೇ ಹೆಚ್ಚು ಪ್ರಚಾರವಿರದ ಕಾರಣ ಆಕಾಶವಾಣಿಯಲ್ಲಿ ಪ್ರಸಾರವಾಗುವ ಅವರ ಭಾಷಣಗಳನ್ನು ತಿಳಿದುಕೊಳ್ಳಲು ಮಾರನೆಯ ದಿನದ ದಿನಪತ್ರಿಕೆ ಬರುವವರೆಗೂ ಕಾಯಬೇಕಾಗುತ್ತಿತ್ತು. ರಾಷ್ಟ್ರೀಯ ಹಿತಾಸಕ್ತಿಯ ಮೇರೆಗೆ ೧೯೩೬ರಲ್ಲಿ ದಾವಣಗೆರೆಯಲ್ಲಿ ಹಿಂದೀ ಪ್ರಚಾರ ಸಮಿತಿಯನ್ನು ಡಿ.ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಡಿ.ಆರ್. ಮೌನೇಶ್ವರಪ್ಪನರ ಕಾರ್ಯದರ್ಶಿತ್ವದಲ್ಲಿ ಪ್ರಾರಂಭ ಮಾಡಿದರು. ದಾವಣಗೆರೆಯ ಹೈಸ್ಕೂಲಿನಲ್ಲೂ ಉಚಿತವಾಗಿ ಉಪಾಧ್ಯಾಯರನ್ನು ಒದಗಿಸಿ ಅಲ್ಲಿ ಹಿಂದಿಯನ್ನು ಪೂರಕ ವಿಷಯವಾಗಿ ಕಲಿಸುವ ವ್ಯವಸ್ಥೆ ಮಾಡಿದ್ದರು.



## ಗಾಂಧೀಜಿಯವರು ದಾವಣಗೆರೆಗೆ

ಹೀಗೆ ೧೯೩೪ರಲ್ಲಿ ಕಾಸಲ ಶ್ರೀನಿವಾಸ ಶೆಟ್ಟಿ ಹಾಗೂ ಪಾಂಡುರಂಗ ಶಿರೂರರ ನೇತೃತ್ವದಲ್ಲಿ ಗಾಂಧೀಜಿಯವರನ್ನು ದಾವಣಗೆರೆಗೆ ಕರೆಯಿಸುವ ಚಿಂತನೆ ನಡೆಯಿತು. ಈ ಹಿಂದೆ ಹೇಳಿದಂತೆ ‘ಹರಿಜನೋದ್ಧಾರ ಹಾಗೂ ಸ್ವದೇಶಿ–ಸ್ವರಾಜ್ಯ’ ಕಾರ್ಯಗಳು ದೇಶದೆಲ್ಲೆಡೆ ಮನೆ ಮಾತಾಗಿದ್ದವು. ಗಾಂಧೀಜಿಯವರ ದೃಢಸಂಕಲ್ಪ ಸರ್ವರ ಸಂಕಲ್ಪವಾಗಿತ್ತು. ಇದೇ ಉದ್ದೇಶಕ್ಕಾಗಿ ಭಾರತದಾದ್ಯಂತ ಸಂಚರಿಸುತ್ತಿದ್ದ ಗಾಂಧೀಜಿಯವರಿಗೆ ಇಬ್ಬರೂ ಸೇರಿ ಪತ್ರ ಬರೆದರಂತೆ. ಅಂತೂ ಗಾಂಧೀಜಿಯವರಿಂದ ಇವರ ಪತ್ರಕ್ಕೆ ಮರು ೩ ಪ್ರಶ್ನೆಗಳು ಬಂದಿದ್ದವು. ಮೊದಲನೆಯದು ನೀವು ಹೇಳುತ್ತಿರುವ ಹರಿಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದಾರೆಯೇ? ಎರಡನೆಯದು ಅವರು ಸ್ವದೇಶಿ ಉಡುಗೆಯನ್ನು ಧರಿಸುತ್ತಿದ್ದಾರೆಯೇ? ಮೂರನೆಯದಾಗಿ ನೀವು ಹರಿಜನರೊಡನೆ ಕೈಜೋಡಿಸಿದ್ದೀರೆ? ಈ ಮೂರೂ ಪ್ರಶ್ನೆಗಳಿಗೆ ದೃಢ ಹಾಗೂ ನಿಶ್ಚಿತ ಉತ್ತರಗಳೊಂದಿಗೆ ಶೆಟ್ಟರು ಹಾಗೂ ಶಿರೂರರು ಗಾಂಧೀಜಿಯವರಿಗೆ ಉತ್ತರಿಸಿದ್ದರಂತೆ “ಹೌದು, ಅವರೆಲ್ಲರೂ ಸ್ವಾತಂತ್ರ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಹಾಗೂ ಇತರರಿಗೂ ಚಳುವಳಿಯಲ್ಲಿ ಧುಮುಕಲು ಪ್ರೇರಣೆ ನೀಡುತ್ತಿದ್ದಾರೆ. ನಾವುಗಳೆಲ್ಲರೂ ಖಾದಿ ವಸ್ತ್ರವನ್ನು ತೊಟ್ಟು ಬೆಳಗಿನ ಪ್ರಭಾತ್ ಫೇರಿಯ ಬಳಿಕ ಹರಿಜನರ ಮನೆಯಲ್ಲೇ ಪ್ರತಿದಿನ ಉಪಹಾರವನ್ನೂ ಸೇವಿಸುತ್ತಿದ್ದೇವೆ. ನಾವುಗಳೂ ಅವರ ಉದ್ಧಾರಕ್ಕಾಗಿ ಅವರೊಡನೆ ಕೂಡಿ ಶ್ರಮಿಸುತ್ತಿದ್ದೇವೆ.” ಇವರ ಉತ್ತರಕ್ಕೆ ಪ್ರಭಾವಿತರಾಗಿ ಗಾಂಧೀಜಿಯವರು ಮತ್ತೂ ಮೂರು ಷರತ್ತುಬದ್ಧ ಬೇಡಿಕೆಗಳನ್ನಿತ್ತು ಬರಲು ಒಪ್ಪಿಕೊಂಡರು. ಹರಿಜನರ ಸಮಗ್ರ ಉದ್ಧಾರಕ್ಕಾಗಿ ಹಾಗೂ ಅವರಿಗೆ ಶಿಕ್ಷಣದ ನೈತಿಕ ಹಕ್ಕನ್ನು ಒದಗಿಸಲು ಒಂದು ಶಾಲೆಯನ್ನೋ ಅಥವಾ ವಸತಿಗೃಹವನ್ನೋ ಸಮಾಜದಿಂದ ನಿರ್ಮಿಸುವುದು, ಹರಿಜನರ ಕೇರಿಗಳಿಗೆ ಹೋಗಲು ವ್ಯವಸ್ಥೆ ಮಾಡುವುದು ಹಾಗೂ ಹರಿಜನರ ಜೊತೆ ಸಂವಾದ ಏರ್ಪಡಿಸುವುದು ಇವಿಷ್ಟು ಅವರ ಪತ್ರದಲ್ಲಿದ್ದ ವಿಷಯಗಳು. ಇವೆಲ್ಲವನ್ನೂ ಕಾಸಲ ಶ್ರೀನಿವಾಸ ಶೆಟ್ಟರು ನೆರವೇರಿಸಿದರು. ದಾವಣಗೆರೆಯ ಪಟ್ಟಣ ಪಂಚಾಯತಿಯ ಆಗಿನ ಉಪಾಧ್ಯಕ್ಷರಾಗಿದ್ದ ರಂಗಪ್ಪನವರು ಇದಕ್ಕಾಗಿ ಜಾಗವನ್ನು ನಿಗದಿಪಡಿಸಿ ಕೊಟ್ಟಿದ್ದರು.

ಮಾರ್ಚ್ ೨, ೧೯೩೪ರಂದು ಗಾಂಧೀಜಿಯವರು ರೈಲ್ವೇ ಸ್ಟೇಷನ್ನಿಗೆ

ಆಗಮಿಸುತ್ತಿದ್ದಂತೆ ಅಂದಿನ ಚನ್ನಗಿರಿ ರಂಗಪ್ಪನವರು ತಮ್ಮ ಕಾರಿನಲ್ಲಿ ಕಾರ್ಯಕ್ರಮ ನಡೆಯುವ ಜಾಗಕ್ಕೆ ಕರೆದೊಯ್ದರು. ತದನಂತರ ಹೋದದ್ದು ಗಾಂಧೀನಗರಕ್ಕೆ. ಈ ಮೊದಲು ಅದು 'ಹರಿಜನಕೇರಿ' ಎಂದೇ ಕರೆಯಲ್ಪಡುತ್ತಿತ್ತು ಈಗ ಅದು ಗಾಂಧಿನಗರ ಎಂಬ ಹೆಸರನ್ನು ಪಡೆದಿದೆ. ಗಾಂಧೀಜಿಯವರು ಹರಿಜನ ವಸತಿನಿಲಯಕ್ಕೆ ಭೂಪೂಜೆ ನೆರವೇರಿಸಿ ಶಂಕುಸ್ಥಾಪನೆ ಮಾಡಿದರು. ಗಾಂಧೀಜಿಯನ್ನು ನೋಡಲು ಸಾಗರೋಪಾದಿಯಲ್ಲಿ ದಾವಣಗೆರೆಯ ಮೈದಾನದಲ್ಲಿ ಜನರ ದಂಡು ನೆರೆದಿತ್ತು. ಹರಿಜನರ ಕೇರಿಗಳಿಗೆ ಭೇಟಿಕೊಟ್ಟು ಹರಿಜನರ ಸಂಗಡ ಸಮಲೋಚನೆ ನಡೆಸಿ ಗಾಂಧೀಜಿಯವರು ಎಲ್ಲರನ್ನುದ್ದೇಶಿಸಿ ಮಾತನಾಡಿ ಹುರಿದುಂಬಿಸಿದ್ದರು. ಇದು ಮುಂದೊಂದು ದಿನ ಐತಿಹಾಸಿಕ ಘಟನೆಯಾಗುವುದೆಂದು ಎಲ್ಲರಿಗೂ ಅನಿಸಿತು.

ಇವರೊಡನೆ ದೊಡ್ಡಸಿದ್ದನವಳ್ಳಿ ಆಟದ ಪೆನ್ನಯ್ಯನವರ ಕಾರ್ಯ ಮರೆಯುವಂತೆಯೇ ಇಲ್ಲ. ತಮ್ಮ ಸಂಪೂರ್ಣ ಜೀವನವನ್ನೇ ಸಾರ್ವಜನಿಕ ಸೇವೆಗಾಗಿ ಮುಡಿಪಾಗಿಟ್ಟ ಇವರು ತಮ್ಮ ಊರಾದ ದೊಡ್ಡಸಿದ್ಧನವಳ್ಳಿಯ ಹರಿಜನ ಕೇರಿಯಲ್ಲಿ ಚರ್ಮ ಹದಮಾಡುವ ಕಾರ್ಖಾನೆಯನ್ನೂ, ಹಿರಿಯೂರಿನಲ್ಲಿ ಚಾಪೆ ಹೆಣೆಯುವ ಕೇಂದ್ರ ಹಾಗೂ ನೂಲುವ ಕೇಂದ್ರವನ್ನು ಸ್ಥಾಪಿಸಿ ಅನೇಕ ಹರಿಜನರಿಗೆ ಉದರ ನಿರ್ವಾಹಕ್ಕೆ ದಾರಿ ಮಾಡಿಕೊಟ್ಟಿದ್ದರು. ೧೯೨೫ರಲ್ಲಿ ಚಿತ್ರದುರ್ಗದಲ್ಲಿ ಹರಿಜನ ಹಾಸ್ಟೆಲ್‌ಅನ್ನೂ ಸ್ಥಾಪಿಸಿದ್ದರು. ಇದಲ್ಲದೆ ಬ್ರಹ್ಮಚಾರಿ ರಾಮಚಂದ್ರಜಿ ಹಾಗೂ ಚಿಕ್ಕಹನುಮಂತಯ್ಯನವರ ಸಹಕಾರದಿಂದ ೧೯೩೭ರಲ್ಲಿ ಹರಿಜನ ಸಾಮೂಹಿಕ ವಿವಾಹವನ್ನೂ ಏರ್ಪಡಿಸಿದ್ದರು. ಹರಿಜನರ ಶಿಕ್ಷಣಕ್ಕಾಗಿ ಅಪಾರವಾಗಿ ಶ್ರಮಿಸಿದ ಇವರು, ಹರಿಜನರಿಗಾಗಿ ಪ್ರೌಢ ಶಿಕ್ಷಣ ವರ್ಗವನ್ನೂ ಕೂಡ ಸ್ಥಾಪಿಸಿದ್ದರು. ಈ ತರಹದ ಹಲವು ಪ್ರಥಮಗಳ ಸರದಾರರು ಇವರಾಗಿದ್ದರು. ಎಸ್. ಗೋವಿಂದರೆಡ್ಡಿಯವರು ೧೯೪೩ರಲ್ಲಿ ಚಿತ್ರದುರ್ಗದಲ್ಲಿ ಹರಿಜನರಿಗೆ ನೀರಿನ ಬಾವಿಯನ್ನು ತೆರವು ಮಾಡಿಸಿ ಅಸ್ಪೃಶ್ಯತಾ ನಿವಾರಣಾ ಚಟುವಟಿಕೆಯನ್ನು ತಮ್ಮ ತಂಡದ ಮುಖಾಂತರ ನಡೆಸಿದರು. ಹರಿಜನರಿಗೆ ಮನೆಗಳನ್ನು ಕಟ್ಟಲು ಮುಚ್ಚಳಿಕೆ ಕೊಟ್ಟು ಸಾಲವನ್ನು ಸರಕಾರದಿಂದ ಕೊಡಿಸಿದ್ದರು.

ಇದಾದ ಬಳಿಕ ೧೯೩೭ರಲ್ಲಿ 'ಕಿಸಾನ್ ಚಳುವಳಿ' ಆರಂಭವಾಗಿತ್ತು. ಕಾಂಗ್ರೆಸ್ ರಾಷ್ಟ್ರೀಯ ನಾಯಕರೆನಿಸಿದ ಡಾ॥ ಹರ್ಡೀಕರರೊಂದಿಗೆ ಡಿ.ಎಸ್. ಮುನೇಶ್ವರ ಅವರು ದಾವಣಗೆರೆ, ಹರಿಹರ ತಾಲ್ಲೂಕುಗಳಲ್ಲಿ ಪ್ರಚಾರಕಾರ್ಯ ಪ್ರಾರಂಭಮಾಡಿದರು. ದಾವಣಗೆರೆ ಹಾಗೂ ಹರಿಹರದ ೧೦ಮೈಲು ಸುತ್ತಮುತ್ತ



ಸಭೆ, ಭಾಷಣ, ಪ್ರಚಾರ ಮುಂತಾದವುಗಳನ್ನು ಮಾಡಬಾರದೆಂದು ಪ್ರತಿಬಂಧವನ್ನು ದಾವಣಗೆರೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ ಸೆಕ್ಷನ್ ೩೯ರಂತೆ ದಿನಾಂಕ ೧೬.೦೫.೧೯೩೭ ರಂದು ಡಾ॥ ಹರ್ಡೀಕರ, ಕಾಸಲ ಶ್ರೀನಿವಾಸ ಶೆಟ್ಟಿ, ಬೊಂದಾಡೆ ಹನುಮಂತರಾವ್, ದೋತ್ರಗಾವಿ ಮೌನೇಶ್ವರಿ, ನಂಜಪ್ಪಕೊಟ್ರೆ, ಎಸ್. ನಿಜಲಿಂಗಪ್ಪ ಮತ್ತು ವಾಸುದೇವರಾವ್ ಇವರ ಮೇಲೆ ಹೊರಿಸಲಾಗಿತ್ತು. ತೆರಿಗೆ ಕೊಡುವುದರ ವಿರುದ್ಧ ಈ ಚಳುವಳಿ ನಡೆಯುತ್ತಿದೆ ಎಂದು ಆಜ್ಞೆಯಲ್ಲಿ ತಿಳಿಸಲಾಗಿತ್ತು. ಇದೇ ಸಂದರ್ಭದಲ್ಲಿ ಹರಿಹರದಲ್ಲಿ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪನೆ ಮಾಡಲಾಯಿತು. ಆಗ ದಾವಣಗೆರೆ, ಹರಿಹರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ "ಕಾಂಗ್ರೆಸ್ ಬಾವುಟವನ್ನು ಪ್ರದರ್ಶಿಸಬಾರದು, ಅದು ಸಾರ್ವಜನಿಕ ಶಾಂತಿಯನ್ನು ಕದಡಲು ಕಾರಣವಾಗಬಹುದು ಮತ್ತು ತಮ್ಮದೇ ಮಾನ್ಯತೆ ಪಡೆದು ಧ್ವಜವನ್ನು ಹೊಂದಿರುವ ಶ್ರೀಮನ್ಮಹಾರಾಜರ ಪರಮಾಧಿಕಾರಕ್ಕೆ ಇದರಿಂದ ಘಾತವಾಗಬಹುದು" ಎಂದು ದಾವಣಗೆರೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ೧೨.೧೦.೧೯೩೭ ರಂದು ಆಜ್ಞೆಯೊಂದನ್ನು ಡಿ.ಆರ್.ಮೌನೇಶ್ವರಪ್ಪರ ಮೇಲೆ ಜಾರಿಗೊಳಿಸಿದ್ದು ಆ ಆಜ್ಞೆಯ ಪ್ರತಿಯಲ್ಲಿ ನಮೂದಾಗಿತ್ತು.

ಇಷ್ಟೆಲ್ಲ ಚಟುವಟಿಕೆಗಳ ಮಧ್ಯದಲ್ಲಿ ಒಂದು ತರುಣರ ತಂಡವೂ ಜಾಗೃತವಾಗಿ ಕೆಲಸ ಪ್ರಾರಂಭಿಸಿತ್ತು. ಹಿರಿಯರ ನಡೆನುಡಿಗಳನ್ನು ಗಮನಿಸುತ್ತಾ ಅವರೊಂದಿಗೆ ಹೆಜ್ಜೆಗೆಹೆಜ್ಜೆ ಮೇಳೈಸುತ್ತಾ ಎಲ್ಲಾ ಕೆಲಸಗಳನ್ನೂ ಚಾಕಚಾಕ್ಯತೆಯಿಂದ ಚೂಟಿಯಾಗಿ ನೆರವೇರಿಸುತ್ತಿದ್ದರು. ಅವರ ಗುಂಪಿನಲ್ಲಿ ನಾನೂ ಒಬ್ಬಇದ್ದೆನೆಂಬ ಹೆಮ್ಮೆ ನನ್ನದು. ಇದಕ್ಕೆ ಕಿರೀಟವೆಂಬಂತೆ ದಾವಣಗೆರೆಯಲ್ಲಿ 'ತಿಲಕ್ ತರುಣ ಸಂಘ'ಕೂಡ ಸ್ಥಾಪಿತವಾಯಿತು. ನಾನು ಈಗಾಗಲೆ ನನ್ನ ಶಿಕ್ಷಣವನ್ನೆಲ್ಲಾ ಮುಗಿಸಿ ಮಾವನ ಅಡಿಕೆ ತೋಟವನ್ನು ನೋಡಿಕೊಳ್ಳುತ್ತಿದ್ದೆ. ಅತ್ತೆಗೆ ಮನೆಗೆಲಸದಲ್ಲೂ ನೆರವಾಗುತ್ತಿದ್ದೆ. ಕಾರ್ಯ ನಿಮಿತ್ತ ಆಗಾಗ ದಾವಣಗೆರೆಗೂ ಹೋಗುವ ಸಂದರ್ಭ ಒದಗಿಬರುತ್ತಿತ್ತು. ಅತ್ತೆ, ಮಾವನ ಕಣ್ಣುತಪ್ಪಿಸಿ ಪುಡಿಗಾಸು ನೀಡಿ ತಿನ್ನಲಿಕ್ಕೆ ಬುತ್ತಿಕಟ್ಟಿಕೊಟ್ಟು ಜೋಪಾನವಾಗಿ ಹೋಗಿ ಬರಲು ಹರಸಿ ಕಳಿಸುತ್ತಿದ್ದಳು. ಅವಳು ಇಲ್ಲದೆ ಹೋಗಿದ್ದರೆ ನನ್ನ ಜೀವನ ದುಸ್ತರವಾಗುತ್ತಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಮಕ್ಕಳಿಲ್ಲದ ದಂಪತಿಗಳು ನನ್ನನ್ನು ತಮ್ಮ ಸ್ವಂತ ಮಗನಂತೆಯೇ ಅಕ್ಕರೆಯಿಂದ ಆರೈಕೆ ಮಾಡಿದ್ದರು. ಮಾವನಿಗೆ ವಿಪರೀತ ಕೋಪವಿತ್ತಾದರೂ ಒಂದು ದಿನವೂ ಆತ ನನ್ನ ಮೇಲಾಗಲಿ, ಅತ್ತೆಯ ಮೇಲಾಗಲಿ ಕೈಮಾಡಿದವನಲ್ಲ.

ಏನಿದ್ದರೂ ಪದಪ್ರಯೋಗದಲ್ಲೇ ಎಲ್ಲವೂ ಬಗೆಹರಿಯುತ್ತಿತ್ತು. ಅಂದು ನಾನು ತಿಲಕ್ ತರುಣ ಸಂಘದ ಸ್ಥಾಪನೆಯ ದಿನದ ಸಂಭ್ರಮದಲ್ಲಿದ್ದೆ. ಇದ್ದಕ್ಕಿದ್ದಂತೆ ಬರಸಿಡಿಲಿನ ಹಾಗೆ ನನಗೆ ಧಾರವಾಡದಲ್ಲಿದ್ದ ಅಜ್ಜಿ ತೀರಿ ಹೋದ ಸುದ್ದಿ, ಜೊತೆಗೆ ಅಪ್ಪ ಮತ್ತೆ ಕಾನೂನು ಮುರಿದು ಜೈಲಿಗೆ ಸೇರಿದ ಸುದ್ದಿ ಕಿವಿಗೆ ಬಿದ್ದಿತ್ತು. ಸುದ್ದಿ ಕೇಳುತ್ತಿದ್ದಂತೆ ಅತ್ತೆ–ಮಾವ ಇಬ್ಬರೂ ಧಾರವಾಡಕ್ಕೆ ಹೊರಟು ನಿಂತರು. ನಾನೂ ಬರುವೆನೆಂದು ಹೇಳಿದೆ. ಆಶ್ಚರ್ಯವೆಂಬಂತೆ ಇದೇ ಮೊದಲ ಬಾರಿಗೆ ಮಾವ "ಬೇಡ, ನೀನು ಚಳುವಳಿಯ ಜವಾಬ್ದಾರಿಯನ್ನು ನಿಭಾಯಿಸು. ಅಜ್ಜಿಯ ಕಾರ್ಯ ಅಲ್ಲಿಯೇ ಮುಗಿಸಿ ನಿಮ್ಮಮ್ಮನನ್ನು ಇಲ್ಲಿಗೇ ಕರೆದುಕೊಂಡು ಬರ್ತೇವೆ" ಎಂದು ಮುಂದಿನ ಬಸ್ ಹಿಡಿದು ಹೊರಟೇ ಬಿಟ್ಟರು. ನನ್ನ ದೇಶದ ಮೇಲಿನ ನಿಷ್ಠೆ–ಭಕ್ತಿ, ಕೆಲಸದ ಮೇಲಿನ ಶ್ರದ್ಧೆ ಮಾವನ ಕಲ್ಲುಹೃದಯವನ್ನೂ ಕರಗಿಸಿತ್ತು. ಈ ಬಾರಿ ಮಾವ ನನ್ನ ಕಣ್ಣಿಗೆ ದೇವರಂತೆ ಕಂಡ. ಅಮ್ಮನನ್ನು ನೋಡುವ ದಶಕಗಳ ಹಂಬಲಕ್ಕೆ ಮುಕ್ತಿ ಸಿಗುವುದೆಂದು ಕಾತುರನಾಗಿ ಕುಳಿತೆ.

ಅಂತೂ ೧೩ ದಿನಗಳ ಅಜ್ಜಿಯ ಎಲ್ಲಾ ಕಾರ್ಯಗಳನ್ನು ಮುಗಿಸಿ ಅತ್ತೆ–ಮಾವ, ಅಮ್ಮನನ್ನು ಹರಿಹರಕ್ಕೆ ಕರೆದುಕೊಂಡು ಬಂದಾಗ ಅಮ್ಮನ ಪರಿಸ್ಥಿತಿ ಆಗಲೇ ಹದಗೆಟ್ಟಿತ್ತು. ಅಮ್ಮ ಕ್ಷಯರೋಗಕ್ಕೆ ತುತ್ತಾಗಿದ್ದಳು. ಇಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿದ್ದಂತೆ ಎದೆಗವಚಿ ಬಿಕ್ಕಿ ಬಿಕ್ಕಿ ಅತ್ತೆವು. ಅಮ್ಮ ನನ್ನ ಹಣೆ–ಮುಖದ ತುಂಬಾ ಮುತ್ತಿನ ಸುರಿಮಳೆಗೈದಳು. "ಭರತೂ ಭರತೂ, ನನ್ನ ಬಂಗಾರ ಭರತು, ಆಳೆತ್ರಕ್ಕೆ ಬೆಳೆದ್ ಬಿಟ್ಟಿದಿಯಲ್ಲೋ ಮಗನೇ. ನೋಡ್ತಿದ್ರೆ ನನ್‌ದೃಷ್ಟಿನೇ ಬೀಳತ್ತೆ"ಎಂದು ತನ್ನ ಎಂದಿನ ಮಮಕಾರವನ್ನು ಪದಗಳ ಮೂಲಕ ಹೊರಹಾಕುತ್ತಾ ತನ್ನ ಎರಡೂ ಕೈಗಳಿಂದ ದೃಷ್ಟಿ ತೆಗೆಯುತ್ತಾ ಲಟಿಕೆ ಮುರಿದಳು. ೧೭ ವರ್ಷದ ಬಳಿಕ ಅಮ್ಮನನ್ನು ನೋಡಿದ ಖುಷಿಗೆ, ಆವತ್ತೆಲ್ಲಾ ಅಮ್ಮನ ಮಡಿಲಲ್ಲೇ ಮಲಗಿ, ಆಕೆಯ ಕೈತುತ್ತನ್ನೂ ತಿಂದಿದ್ದೆ. ಮುಂದೆ ಅಮ್ಮ ಮಾವ ಅತ್ತೆ ಮೂವರಿಗೂ ದಿನಂಪ್ರತಿ ಗಾಂಧೀಜಿ, ತಿಲಕರು ಹಾಗೂ ನಮ್ಮ ಊರಿನ ಚಳುವಳಿಯ ಬಗ್ಗೆ ವಿಸ್ತೃತವಾಗಿ ವಿವರಿಸುತ್ತಲಿದ್ದೆ. ಈಗ ಮಾವನ ಕೋಪ ಕಡಿಮೆಯಾಗಿ ಗಂಭೀರನಾಗಿದ್ದ. ಅಮ್ಮನನ್ನು ತನ್ನ ತಾಯಿಯಂತೆಯೇ ಆರೈಕೆ ಮಾಡುತ್ತಿದ್ದ.

೧೯೩೮ರ ಹೊಸ್ತಿಲಲ್ಲಿ ವೈಸ್‌ರಾಯ್ ಲಿನ್‌ವಿತ್ ಮೈಸೂರಿಗೆ ಭೇಟಿಕೊಟ್ಟಿದ್ದರು. ದಾವಣಗೆರೆ ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಕಪ್ಪು ಬಾವುಟ ತೋರಿಸಬೇಕೆಂದು ಚಿತ್ರದುರ್ಗ ಕಾಂಗ್ರೆಸ್ ಕಮಿಟಿಯ ಶ್ರೀನಿವಾಸ ಮೂರ್ತ್ಯಾಚಾರ್ ಸಮೇತ ಕೆಲವರನ್ನು ಕಳುಹಿಸಿದರು. ಪೋಲೀಸರ ಕುತಂತ್ರದಿಂದ ದಾವಣಗೆರೆಗೆ ಹೋಗುವ ಗಾಡಿ ತಪ್ಪಿಹೋಗಿ ಸ್ಟೇಷನ್ನಿನಲ್ಲಿ ಯಾವ ಇತರ ಕಾರ್ಯಕರ್ತರೂ ಇಲ್ಲದಾದರು. ಆಗ ಕೊನೆಯ ಕ್ಷಣದಲ್ಲಿ ಹರಿಹರದಿಂದ ಸಿಕ್ಕ ಜಟಕಾಗಾಡಿ, ಸೈಕಲ್ ಏರಿ ದಾವಣಗೆರೆ ರೈಲ್ವೇಸ್ಟೇಷನ್ ತಲುಪಿ ಎಸ್.ವಿ.ರಂಗನಾಥ ಜೋಯ್ಸರೊಬ್ಬರೇ ನಿಂತು 'ಲಿನ್‌ವಿತ್ ಗೋ, ಲಿನ್‌ವಿತ್ ಗೋ' ಎಂದು ಕೂಗುತ್ತಾ ಕಪ್ಪು ಬಾವುಟ ಪ್ರದರ್ಶಿಸಿದರಂತೆ. ಪೋಲಿಸರು ತಕ್ಷಣ ಬಂದು ಇವರನ್ನು ಬಂಧಿಸಿ ವೈಸ್‌ರಾಯ್ ಹಿಂತೆರಳಿದ ಮೇಲೆ ಇವರನ್ನು ಬಿಟ್ಟರಂತೆ.



ಹೀಗೆ ಚಳುವಳಿಯ ಓಘ ರಾಷ್ಟ್ರ, ರಾಜ್ಯ, ಜಿಲ್ಲೆ, ತಾಲ್ಲೂಕುಗಳನ್ನು ದಾಟಿ ಈಗ ಹಳ್ಳಿಗಳ ಮಟ್ಟಕ್ಕೂ ಇಳಿದಿತ್ತು. ೧೯೩೯ರ ಕಾಲ. ಗಾಂಧೀಜಿಯವರ ತತ್ವ, ಆದರ್ಶಗಳು, ಅಹಿಂಸಾ ಧರ್ಮದ ಪಾಲನೆ, ಸತ್ಯಾಗ್ರಹ, ಖಾದಿ ಹಾಗೂ ಗ್ರಾಮೋದ್ಯೋಗದ ಪ್ರಚಾರದೇಶದ ಮೂಲೆ ಮೂಲೆಗೆ ತಲುಪಿದ್ದವು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮಾಹಿತಿಗಳು ಎಲ್ಲರ ಎದೆಯಲ್ಲೂ ಕಂಪನವನ್ನು ಉಂಟುಮಾಡಿದ್ದವು. ೧೯೩೪ರಲ್ಲಿ ಮಹಾತ್ಮಾ ಗಾಂಧೀಜಿಯವರು ಬಹುದೊಡ್ಡ ಚಳುವಳಿ 'ಹರಿಜನೋದ್ಧಾರ' ಕಾರ್ಯಕ್ಕಾಗಿ ಪ್ರವಾಸ ಕೈಗೊಂಡಾಗ ದಾವಣಗೆರೆಯಲ್ಲಿ ಆಸ್ತಿಭಾರ ಹಾಕಿದ್ದರಂತೆ. ಕಾಸಲ ಶ್ರೀನಿವಾಸ ಶೆಟ್ಟರು ಈ ಸಂಘದ ಕಾರ್ಯದರ್ಶಿಗಳೂ ಆಗಿದ್ದರು.

## ಅರಣ್ಯ ಸತ್ಯಾಗ್ರಹ

ಇದೇ ವೇಳೆಗೆ ಮೈಸೂರು ಸಂಸ್ಥಾನದ ಸರ್ಕಾರವು ಕಾಂಗ್ರೆಸ್‌ನ ಕೋರಿಕೆಯಂತೆ ಪಾನ ವಿರೋಧಿ ನೀತಿಯನ್ನು ಜಾರಿಗೆ ತರಲಿಲ್ಲ. ಆದಕಾರಣ ಕಾಂಗ್ರೆಸ್ ಕುಪಿತಗೊಂಡು ಸರ್ಕಾರಿ ಜಮೀನಲ್ಲೆಲ್ಲಾ ಈಚಲು ಮರಗಳನ್ನು ಕಡಿದು, ಸಂಸ್ಥಾನದಲ್ಲೆಲ್ಲಾ ಹೆಂಡದ ಸರಬರಾಜು ಆಗದಂತೆ ಮಾಡಲು ಒಂದು ಚಳುವಳಿಯನ್ನು ೧೯೩೯ರ ಸೆಪ್ಟೆಂಬರ್‌ನಲ್ಲಿ ಪ್ರಾರಂಭಿಸಿತು. ಅದನ್ನ ಅರಣ್ಯ(ಜಂಗಲ್) ಸತ್ಯಾಗ್ರಹ ಎಂದು ಕರೆಯಲಾಯಿತು. ಇದು ಬಹುಸಂಖ್ಯೆಯಲ್ಲಿ ಪ್ರಚುರಗೊಂಡಿತು. ಹೆಂಡ ಉತ್ಪತ್ತಿ ಮಾಡುವ ಈಚಲು ಮರಗಳನ್ನು ಕಡಿಯುವುದು ಹಾಗೂ ಹೆಂಡದಂಗಡಿಗಳ ಪಿಕೆಟಿಂಗ್(ನಿಷೇಧ/ ವಿರೋಧ ವ್ಯಕ್ತಪಡಿಸುವ ಬಗೆ)ಗೆ ಕರೆ ನೀಡಲಾಗಿತ್ತು. ಅದೇ ಮೊದಲಬಾರಿಗೆ ನಿಜಲಿಂಗಪ್ಪನವರ ನೇತೃತ್ವದಲ್ಲಿ ಚಿತ್ರದುರ್ಗದಲ್ಲಿ ಕಾನೂನು ಮುರಿಯುವ

ಪ್ರಯತ್ನ ಮಾಡಲಾಯಿತು. ಅದಕ್ಕಾಗಿ ಆಗಿನ ಚಿತ್ರದುರ್ಗ ತಾಲ್ಲೂಕಿನ ತುರುವನೂರಿನಲ್ಲಿ ಈಚಲಮರ ಕಡಿಯುವ ಅರಣ್ಯ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಅದಕ್ಕಾಗಿ ಎ.ಎಸ್. ಶ್ರೀನಿವಾಸಮೂರ್ತಿ ಆಚಾರ್‌ರವರು ಬೆಂಗಳೂರಿಗೆ ಹೋಗಿ ಮೈಸೂರು ಕಾಂಗ್ರೆಸ್ಸಿನ ನಾಯಕರ ಅನುಮತಿ ಪಡೆದು ಬಂದಿದ್ದರು. ಆದಿನ ಸುಮಾರು ೭–೮ ಸಾವಿರಜನ ಒಟ್ಟಾಗಿ ಸೇರಿದ್ದರು. ಈ ಸತ್ಯಾಗ್ರಹ ೧೫ ದಿನಕ್ಕೂ ಹೆಚ್ಚಾಗಿ ಸಾಗಿತು. ದಿನಾ ೫–೧೦ ಜನರಂತೆ ಸತ್ಯಾಗ್ರಹ ಮಾಡುವ ನಿರ್ಣಯ ಮಾಡಿ ತಂಡೋಪತಂಡವಾಗಿ ಸತ್ಯಾಗ್ರಹಕ್ಕೆ ಭಾಗಿಯಾಗುತ್ತಿದ್ದರು. ನಾನು ಈ ಮೊದಲೇ ತಿಳಿಸಿದಂತೆ ರಾಷ್ಟ್ರದಾದ್ಯಂತ ಅನೇಕ ಚಳುವಳಿಗಳು ನಡೆದರೂ ನಮ್ಮ ಊರಿನಲ್ಲಿ ಇದರಂತಹ ದೊಡ್ಡ ಚಳುವಳಿ ನಾನು ಇದುವರೆಗೆ ನೋಡಿದ್ದಿಲ್ಲ. ಈ ಕಾರ್ಯಕ್ರಮ ವೀಕ್ಷಿಸಲು ಬಂದಿದ್ದ ಪತ್ರಕರ್ತ ಚಂದೂರರನ್ನೇ ಬಂಧಿಸಿದ್ದರು ಪೋಲೀಸರು. ಇದೇ ಮೊದಲಬಾರಿಗೆ ಸಿದ್ದನವಳ್ಳಿ ನಿಜಲಿಂಗಪ್ಪನವರು ಸತ್ಯಾಗ್ರಹದಲ್ಲಿ ಭಾಗವಹಿಸುವುದರ ಮೂಲಕ ಈ ಕಾನೂನು ವಿರೋಧಿ ನೀತಿಯನ್ನು ಅನುಸರಿಸಿದ್ದಕ್ಕಾಗಿ ೧೮ ತಿಂಗಳು ಜೈಲುಶಿಕ್ಷೆ ಮತ್ತು ೮೦೦ರೂ. ದಂಡ ತೆರಬೇಕಾಯಿತು. ಚಿತ್ರದುರ್ಗದಲ್ಲಿ ಎಂ.ರಾಮರೆಡ್ಡಿ, ತುರುವನೂರಿನಲ್ಲಿ ಪಿ.ಚನ್ನಾರೆಡ್ಡಿಯವರನ್ನು ಬಂಧಿಸಿ ೧೮ತಿಂಗಳ ಕಠಿಣಶಿಕ್ಷೆ, ೫೦೦ರೂ. ಜುಲ್ಮಾನೆ ಕೊಡಲು ತಪ್ಪಿದರೆ ೬ ತಿಂಗಳ ಅಧಿಕ ಶಿಕ್ಷೆ ವಿಧಿಸಲಾಯ್ತು. ದಂಡ ವಸೂಲಿಗೆಂದು ಮನೆಗೆ ಪೋಲೀಸರು ಬಂದಾಗ, ಊರ ಹೆಂಗಸರೆಲ್ಲಾ  ನಿಜಲಿಂಗಪ್ಪನವರ ಮನೆಯ ಮುಂದೆ ಪ್ರತಿಭಟನೆ ಮಾಡಿದ್ದರಂತೆ. ದಿನಂಪ್ರತಿ ಒಂದಿಷ್ಟು ಜನ ಬಂಧನಕ್ಕೊಳಗಾದರೂ ಸತ್ಯಾಗ್ರಹ ಮುಂದುವರೆಯುತ್ತಲೇ ಇತ್ತು. ಬಂಧನಕ್ಕೊಳಗಾದವರಿಗೆಲ್ಲ ದಸ್ತಗಿರಿ ಮಾಡಿ ಜೈಲಿಗೆ ಕಳಿಸದೆ ರಾತ್ರಿ ವೇಳೆಯಲ್ಲಿ ಊರಹೊರಗಿನ ಕಾಡಿಗೆ ಬಿಟ್ಟುಬರುವುದು, ಪೋಲೀಸ್ ಠಾಣೆಯಲ್ಲಿ ಇದ್ದವರಿಗೆ ಲಾಠಿಗಳಿಂದ ಹೊಡೆಯುವುದು, ಒದೆಯುವುದು, ಅನ್ನ–ನೀರು ಕೊಡದಿರುವುದು ಇತ್ಯಾದಿ ಹಿಂಸೆ ಕೊಡಲಾಯಿತು. ಶಾಸನಭಂಗ ಮಾಡಿದವರನ್ನೆಲ್ಲಾ ಜೈಲಿಗೆ ಕಳುಹಿಸಿ ಊಟ ವಸತಿಕಲ್ಪಿಸುವುದು ಕಷ್ಟವಾಯಿತು. ಕಡೆಗೊಂದು ದಿನ ಪೋಲೀಸರು ಬಂಧಿಸಲಾಗದೆ ತಟಸ್ಥರಾದರು.

ಎನ್.ಉಗ್ರಯ್ಯ ಹಾಗೂ ಅವರ ೧೫ ಜನ ಸ್ನೇಹಿತರನ್ನೂ ಬಂಧಿಸಿ ಹಿರಿಯೂರು ಪೋಲಿಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಒಂದು ಸಣ್ಣ ಕೋಣೆಗೆ ದೂಡಿದರಂತೆ. ಮಲಮೂತ್ರಗಳಿಗೆ ಬಿಡದೆ, ಎರಡು ಮೂರು ದಿನ ಊಟ ಕೊಡದೆ ಅಮಾನುಷವಾಗಿ ನಡೆಸಿಕೊಂಡರು. ಕೂರೆ, ತಿಗಣೆ, ಸೊಳ್ಳೆಗಳ



ಕಾಟ ಹೇಳಲಸದಳ. ಏಳು ದಿನಗಳ ನಂತರ ಚಿತ್ರದುರ್ಗದ ಲಾಕಪ್ಪಿಗೆ ವರ್ಗಾಯಿಸಿ ಚಿತ್ರಹಿಂಸೆ ಕೊಟ್ಟು ನಂತರ ಕೋರ್ಟಿಗೆ ಪ್ರಸ್ತುತಪಡಿಸಿ ೧೮ ತಿಂಗಳು ಕಠಿಣ ಸಜೆ ಹಾಗೂ ೫೦೦ ರೂ.ಗಳ ಜುಲ್ಮಾನೆ ಚಿತ್ರದುರ್ಗ ಕೋರ್ಟಿನಲ್ಲಿ ವಿಧಿಸಿ, ತದನಂತರ ಬೆಂಗಳೂರಿನ ಜೈಲಿಗೆ ವರ್ಗಾಯಿಸಲಾಯ್ತು. ಇವರೆಲ್ಲರು ಜೈಲಿನಲ್ಲಿದ್ದಾಗ ಪೋಲೀಸರು ಇವರ ಗ್ರಾಮಗಳಿಗೆ ಮನೆಗಳಿಗೆ ನುಗ್ಗಿ ಮನೆಯಲ್ಲಿದ್ದ ಹೆಂಗಸರು ಮಕ್ಕಳನ್ನು ಬೆದರಿಸಿ ಅವರ ಮೇಲೆ ದೌರ್ಜನ್ಯ ನಡೆಸಿ ಮನೆಯನ್ನು ಜಪ್ತಿ ಮಾಡಿ ಕೈಗೆ ಸಿಕ್ಕ ಪಾತ್ರೆ, ಬೆಲೆಬಾಳುವ ಅನೇಕ ವಸ್ತುಗಳನ್ನು ತೆಗೆದುಕೊಂಡು ಹೋದರಂತೆ. ಇದೊಂದು ನಿಷ್ಕಾರುಣ ಘಟನೆ.

ಕರ್ನಾಟಕದ ಮೂಲೆ ಮೂಲೆಯಿಂದ ಬಂಧಿತರಾಗಿದ್ದ ಹಲವು ರಾಜಕೀಯ ಖೈದಿಗಳನ್ನು ಬೆಂಗಳೂರಿನ ಜೈಲಿನಲ್ಲಿ ಬಂಧನಕ್ಕೆ ಒಳಪಡಿಸಿದ್ದನ್ನು ಈಗಾಗಲೇ ನಿಮಗೆ ಹೇಳಿದ್ದೇನೆ. ಆ ಸಂದರ್ಭದಲ್ಲಿ ಖೈದಿಗಳನ್ನೆಲ್ಲಾ ಭೈರಮಂಗಲ ಪ್ರಾಜೆಕ್ಟ್‌ಗೆ ಕರೆದುಕೊಂಡು ಹೋಗಿ ಉರಿವಬಿಸಿಲಿನಲ್ಲಿ, ಸುಡುತ್ತಿರುವ ಧೂಳಿನಲ್ಲಿ, ಕಾಲಿಗೆ ಚಪ್ಪಲಿಗಳಿಲ್ಲದೆ, ಕುಡಿಯಲು ನೀರೂ ಇಲ್ಲದೆ, ಊಟ ಸಕಾಲಕ್ಕೆ ದೊರೆಯದೆ ಅವರನ್ನೆಲ್ಲಾ ನಾಯಿನರಿಗಳಿಗಿಂತಲೂ ಕಡೆಯಾಗಿ ನೋಡಿಕೊಂಡದ್ದಾಗಿತ್ತು. ತದನಂತರ ಮತ್ತೆ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಬಂಧಿಸಲಾಯಿತು. ಆ ಸಂದರ್ಭದಲ್ಲಿ ಮಹಾರಾಜ ಜಯಚಾಮರಾಜೇಂದ್ರರ ಪಟ್ಟಾಭಿಷೇಕದ ಸಂದರ್ಭ. ಆಗ ರಾಜಕೀಯ ಖೈದಿಗಳ ಜೊತೆ ಇವರೆಲ್ಲರನ್ನು ಅಪರಾಧ ಮುಕ್ತರನ್ನಾಗಿ ಮಾಡಿ ಜೈಲಿನಿಂದ ಬಿಟ್ಟರು. ಮನೆಗೆ ಬಂದು ಕುಟುಂಬದವರೊಡನೆ ಸಂಭಾಷಿಸಿದಾಗ ಪೋಲೀಸರು ಮನೆಯವರ ಮೇಲೆ ನಡೆಸಿದ ದೌರ್ಜನ್ಯಗಳ ಅರಿವು ಬಂತು. ರಕ್ತ ಕುದಿಯಲಾರಂಭಿಸಿತು. ಸರ್ಕಾರದ ವಿರುದ್ಧ ಸೇಡುತೀರಿಸಿಕೊಳ್ಳಲು ಸಮಯಕಾಯುತ್ತ ಅನೇಕರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಹುರಿದುಂಬಿಸಲಾಯ್ತು.

ದೇಶಾಭಿಮಾನದಿಂದ ಕೂಡಿ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ ದಸ್ತಗಿರಿ ಮಾಡಲ್ಪಟ್ಟ ರಾಜಕೀಯ ಖೈದಿಗಳನ್ನು ಸರ್ಕಾರವು ಬೈರಮಂಗಲ ಹಾಗೂ ತಿಪ್ಪಗಾನ ಹಳ್ಳಿಗಳಲ್ಲಿ ಕೆರೆಕಟ್ಟುವ ಕೆಲಸದಲ್ಲಿ ಭಾಗವಹಿಸುವಂತೆ ಮಾಡಿತು. ಉರಿಯುವ ಬಿಸಿಲಿನಲ್ಲಿ ಮಣ್ಣನ್ನು ಬಗೆದು ಹೊರುವ ಕೆಲಸ, ನಾಗರಿಕ ಮಾನವನಿಗೆ ಯೋಗ್ಯವಲ್ಲದ ಈ ಶಿಕ್ಷೆಯನ್ನು ಚಳುವಳಿಗಾರರ ಮೇಲೆ ಸರ್ಕಾರವಿಧಿಸಿತ್ತು. ಆದರೂ ಸಹ ದೇಶಬಾಂಧವರು ಆ ಶಿಕ್ಷೆಯನ್ನೆಲ್ಲಾ ಸಹಿಸಿಕೊಂಡರು. ಚಿತ್ರದುರ್ಗದ ತುರುವನೂರಿನವರ ಮೇಲೆ

ಪುಂಡುಗಂದಾಯವನ್ನೂ ಹೇರಿದರು. ಕಠಿಣ ಶಿಕ್ಷೆಯನ್ನು ಸಹಿಸಲಾಗದೆ ಶಿವಮೊಗ್ಗೆಯ ಪ್ರಹ್ಲಾದ ಶೆಟ್ಟರೂ, ತುಮಕೂರು ಜಿಲ್ಲೆಯ ಉಗ್ರಪ್ಪನವರೂ, ಚಿತ್ರದುರ್ಗ ಜಿಲ್ಲೆಯ ಹನುಮಂತಪ್ಪನವರೂ ಪ್ರಾಣತ್ಯಾಗ ಮಾಡಿದರು ಎಂಬ ಸುದ್ದಿ ಮನೆಮನೆಗೆ ಹರಿದಾಡಿತು. ಇಷ್ಟಾದರೂ ಚಳುವಳಿಯಬಿಸಿ ತುಸು ಹೆಚ್ಚಿತೇ ಹೊರತು ಅದು ಇಳಿಮುಖವಾಗುವ ಯಾವುದೇ ಲಕ್ಷಣಗಳು ಕಂಡುಬರಲಿಲ್ಲ.

ಚಿತ್ರದುರ್ಗದ ಚಳ್ಳಕೆರೆಯ ಘಟಪರ್ತಿಯಲ್ಲಿ ಸಿ.ಪಿ.ತಿಪ್ಪೇಸ್ವಾಮಿಯವರ ನೇತೃತ್ವದಲ್ಲಿ ಸರ್ಕಾರಿ ಶಾಲೆಯ ಎದುರಿನಲ್ಲಿ ಸೇರಿ ಮೆರವಣಿಗೆ ಹೊರಡುವುದೆಂದು ತೀರ್ಮಾನ ಮಾಡಿದ್ದರು. ನೂರಾರುಜನ ಸಾಲಾಗಿ ನಿಂತಿದ್ದರು. ನನಗೆ ಮುಂಭಾಗದಲ್ಲಿ ನಿಂತು ಬಾವುಟ ಎತ್ತಿಹಿಡಿದು ದೇಶಪ್ರೇಮದ ಕನ್ನಡ ಹಾಗೂ ಹಿಂದಿ ಗೀತೆಯನ್ನು ಹಾಡುತ್ತಾ ಸಾಗುವ ಜವಾಬ್ದಾರಿ ವಹಿಸಲಾಗಿತ್ತು. ನಮ್ಮ ಜೈಕಾರಗಳು ಹಳ್ಳಿಯ ಸಂದಿಗೊಂದಿಗಳ ಹೆಣ್ಣುಮಕ್ಕಳನ್ನೆಲ್ಲಾ ಮುಖ್ಯ ಬೀದಿಗೆ ಕರೆತಂದವು. ಊರಹೊರಗಿನ ಹೆಂಡದಂಗಡಿಗೆ ಕೈಮಾಡಿ ಯಾರೋ ಒಬ್ಬ "ಹೆಂಡ ಕುಡಿಯೋದನ್ನ ಬಿಡಿರಿ" ಎಂದು ಕೂಗಿದರು. ಅದು ಮುಂಜಾನೆಯ ಸಮಯ. ಅಂಗಡಿಯಲ್ಲಿ ಗಿರಾಕಿಗಳು ಇರಲಿಲ್ಲ. ಕೂಡಲೆ ಎಲ್ಲರೂ ಹೆಂಡದಂಡಿಯ ಕಡೆಗೆ ಹೆಜ್ಜೆ ಹಾಕುತ್ತಾ ಅಲ್ಲಿದ್ದ ಗಡಿಗೆಗಳನ್ನೆಲ್ಲಾ ಒಡೆದು ಹೆಂಡವನ್ನೆಲ್ಲಾ ಚೆಲ್ಲಾಡಿದರು. ಅಂದು ನಾವೇನೋ ಐತಿಹಾಸಿಕ ವಿಜಯ ಸಾಧಿಸಿದ ಅನುಭವ ನಮ್ಮಲ್ಲಿ ನೆಲೆಸಿತ್ತು. ಸಂಸ್ಥಾನದ ಸರ್ಕಾರದವರು ಇಡೀ ಸಂಸ್ಥಾನದಲ್ಲಿ ೧೨೩೮ ಜನರನ್ನು ದಸ್ತಗಿರಿ ಮಾಡಿ ಸಾವಿರಾರು ಜನರನ್ನು ನಿರ್ಜನ ಪ್ರದೇಶಗಳಲ್ಲಿ ಬಿಟ್ಟರು. ಸತ್ಯಾಗ್ರಹ ಹಿಂಸಾಚಾರಕ್ಕೆ ತಿರುಗಿರುವುದನ್ನು ಗಮನಿಸಿ ಗಾಂಧೀಜಿಯವರು ಡಿಸೆಂಬರ್‌ನಲ್ಲಿ ಅರಣ್ಯ ಸತ್ಯಾಗ್ರಹವನ್ನು ಹಿಂಪಡೆದರು.

ಈ ಮಧ್ಯೆ ಒಂದು ರಾತ್ರಿ ಪೋಲೀಸರ ದೌರ್ಜನ್ಯವನ್ನು ವಿವರಿಸುತ್ತಾ ಅಮ್ಮನ ಪಕ್ಕದಲ್ಲಿ ಮಲಗಿದ್ದಾಗ ನನ್ನ ಹೆಗಲನ್ನು ತಟ್ಟುತ್ತಾ ಕಥೆಯನ್ನು ಕೇಳುತ್ತಿದ್ದ ಕೈಗಳು ಇದ್ದಕ್ಕಿದ್ದಂತೆ ನಿಂತು ಬಿಟ್ಟಿತ್ತು. 'ಅಮ್ಮಾ, ಕೇಳುಸ್ಕೊತಿದೀಯೇನಮ್ಮಾ? ಅಮ್ಮಾ ಅಮ್ಮಾ' ಎಂದು ಮತ್ತೊಂದೆರೆಡು ಬಾರಿಕೂಗಿದೆ. ಅಮ್ಮ ಹೇಳುವುದು ಕೇಳುವುದು ಎರಡನ್ನೂ ಸಂಪೂರ್ಣ ನಿಲ್ಲಿಸಿ, ಇಹಲೋಕ ತ್ಯಜಿಸಿದ್ದಳು. ದುಃಖದ ಕಟ್ಟೆಒಡೆದು ಅಮ್ಮಾ ಎಂಬುವ ಪದ ೬೦ ಮನೆಗಳಿಗೆ ರಾಚುವಷ್ಟು ಜೋರಾಗಿ ಕೂಗಿ ಚೀತ್ಕಾರ ಹೊರಡಿಸಿದ್ದೆ. ಅಮ್ಮನ ಕ್ರಿಯಾಕರ್ಮಗಳನ್ನು



ಮಾವನ ಸುಪರ್ದಿಯಲ್ಲಿ ಹರಿಹರದಲ್ಲೇ ಮಾಡಿ ಮುಗಿಸಿದ್ದೆ. ತುಂಗಭಧ್ರಾ ನದಿಗೆ ಪಿಂಡ ಪ್ರದಾನ ಮಾಡುವ ಸಂಧರ್ಭದಲ್ಲಿ ಮೊದಲ ಬಾರಿಗೆ ಮಾವ ನನ್ನ ಅಪ್ಪಿ 'ಭರತೂ' ಎಂದು ಸಾಂತ್ವನ ವ್ಯಕ್ತಪಡಿಸಿದ್ದ. ಮಾವನ ಪ್ರೀತಿ ಪದಗಳಲ್ಲಲ್ಲ, ಆತನ ಕ್ರಿಯೆಯಲ್ಲಿ ಎಂದು ಅಂದೇ ಅರ್ಥವಾಗಿದ್ದು ನನಗೆ. ಅಪ್ಪ ದಾವಣಗೆರೆ ಜೈಲಿನಿಂದ ಯಾವ ಜೈಲಿಗೆ ಹೋದ? ಮುಂದೇನಾದ? ಎಂಬ ಯಾವ ವಿಚಾರವೂ ನಮಗೆ ತಿಳಿಯದಾಯ್ತು. ನನಗೆ ಮಾವನಿಗೆ ಇಬ್ಬರಿಗೂ ಸರ್ಕಾರಿ ಕಛೇರಿಗಳನ್ನು ಅಲೆದು ಅಲೆದು ಸಾಕಾಗಿಹೋಯ್ತು. ಆ ಸಂದರ್ಭದಲ್ಲಿ ನನಗೆ ಒಂದು ಖುಷಿಕೊಟ್ಟ ವಿಚಾರವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ.

ನಮ್ಮ ಚಿತ್ರದುರ್ಗದ ರಾಜಶೇಖರಯ್ಯ ಹಿರೇಮಠದ ಹಾಗೂ ಅವರ ಪತ್ನಿಯದ್ದು ಒಂದು ಅಪೂರ್ವ ಜೋಡಿ. ಮದುವೆಯಾಗಿ ಕೇವಲ ೧೮ ತಿಂಗಳಲ್ಲಿ ನಾಗರತ್ಮಮ್ಮನವರು ಜೈಲುವಾಸಕ್ಕೆ ಮುಂದಾಗಿ ನಿಜಕ್ಕೂ ಅವರ ಸರಳ ಜೀವನ, ಚಿಂತನ ಹಾಗೂ ದೇಶಪ್ರೇಮಕ್ಕೆ ಸಾಕ್ಷಿಯಾಗಿದ್ದರು. ಇದೇ ಅರಣ್ಯ ಸತ್ಯಾಗ್ರಹದಲ್ಲಿ ರಾಜಶೇಖರಯ್ಯ ಹಿರೇಮಠದ ಬಂಧಿತರಾದಾಗ ಬಂಧನವನ್ನು ಖಂಡಿಸಲೆಂದು ಚಿತ್ರದುರ್ಗದಲ್ಲಿ ಸಭೆ ನಡೆದಾಗ ನಾಗರತ್ನಮ್ಮನವರು ಭಾಷಣ ಮಾಡಿದ್ದರಂತೆ. ಆ ಸಭೆಯ ಮೇಲೆ ಪೋಲೀಸರ ಗೋಲೀಬಾರಿನಿಂದ ಹಿಟ್ಟಿನ ಗಿರಣಿಗೆ ಹೋಗುತ್ತಿದ್ದ ಅಜ್ಜಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಪರಿಚಿತರೊಬ್ಬರು ನಾಗರತ್ನಮ್ಮನವರನ್ನು ಜಟಕಾಗಾಡಿ ಹತ್ತಿಸಿ ಮನೆ ತಲುಪಿಸಿದ್ದರು. ಅಂದು ರಾತ್ರಿಯೇ ನಾಗರತ್ನಮ್ಮ ಹಾಗೂ ಸಿದ್ದಮ್ಮನವರ ಬಂಧನವಾಗಿ ಎರಡು ವರ್ಷ ಶಿಕ್ಷೆಯಾಯಿತಂತೆ.

ಜೈಲಿನಲ್ಲಿ ಪ್ರತಿದಿನ ಅನಿರ್ದಿಷ್ಟ ಅವಧಿಯಲ್ಲಿ ಜೈಲಿನ ಅಧಿಕಾರಿಗಳ ಸಮಕ್ಷಮ ಗಂಡಹೆಂಡಿರು ೧೫–೨೦ ನಿಮಿಷಗಳ ಕಾಲ ಭೇಟಿಯಾಗಬಹುದಿತ್ತು. ಅದೇ ಸಂದರ್ಭದಲ್ಲಿ ನಾನು ಮಾವ, ಅಪ್ಪನನ್ನು ಹುಡುಕುವ ಯತ್ನದಲ್ಲಿ ಇದ್ದುದರಿಂದ, ಅವರನ್ನು ನೋಡುವ ಸೌಭಾಗ್ಯ ನಮ್ಮಿಬ್ಬರಿಗೂ ದಕ್ಕಿತು. ನಾಗರತ್ನಮ್ಮನವರು ರಾಜಶೇಖರಯ್ಯ ಅವರಿಗೆ "ನಿಮಗೆ ಎರಡು ಶಿಕ್ಷೆ. ಒಂದು ಜೈಲುಶಿಕ್ಷೆ, ಮತ್ತೊಂದು ನವ ದಾಂಪತ್ಯದ ಕಾಲದಲ್ಲಿ ಪತ್ನಿಯನ್ನು ಅಗಲಿರುವ ಶಿಕ್ಷೆ. ಎರಡನೆಯ ಶಿಕ್ಷೆಗೆ ಅಯ್ಯೋ ಪಾಪ ಎನ್ನುತ್ತೇನೆ. ಜೈಲು ಶಿಕ್ಷೆಗೆ ಮಾತ್ರ ಸ್ವಲ್ಪ ಅಳುತ್ತೇನೆ. ಏಕೆಂದರೆ ನಿಮ್ಮದು ಸ್ವಲ್ಪ ಸೂಕ್ಷ್ಮಪ್ರಕೃತಿ. ಜೈಲಿನ ನಿಯಮಗಳಿಗೆ ಒಗ್ಗಿಕೊಳ್ಳಲು ಆ ದೇವರು ನಿಮಗೆ ಆರೋಗ್ಯವನ್ನು ದಯಪಾಲಿಸಲಿ. ಇದು

ಸತ್ವ ಪರೀಕ್ಷೆ. ಕಷ್ಟಸಹಿಷ್ಣುತೆ, ಮನೋಧೈರ್ಯ ನಿಮಗೆ ಬರುತ್ತದೆ. ನೈಜ ದೇಶಭಕ್ತರ ಶ್ರೇಣಿಗೆ ನನ್ನ ಯಜಮಾನರು ಸೇರಿದರೆಂದು ಹೆಮ್ಮೆ ಪಡುತ್ತೇನೆ" ಎಂದು ಉತ್ತೇಜನ ನೀಡಿ ಬೀಳ್ಕೊಟ್ಟರಂತೆ. ಈ ವಿಷಯವನ್ನು ಅಲ್ಲೇ ಇದ್ದ ಪರಿಚಿತ ದಫೇದಾರ ಕೇಳಿಸಿಕೊಂಡು ನೆಲೆದ ಮೇಲೆ ಹಿರಿಯ ಅಧಿಕಾರಿಯ ಬರುವಿಕೆಗೆ ಕಾಯುತ್ತಿದ್ದವ ನಮ್ಮ ಬಳಿ ಬಂದು ಹೇಳಿ ಕಣ್ಣೀರು ಹಾಕಿದ್ದ. ತನ್ನ ಮನೆಮಂದಿಗೆಲ್ಲಾ ಈ ವಿಚಾರವನ್ನು ಹೇಳಿ ಹೆಮ್ಮೆಪಟ್ಟಿದ್ದ. ಮಾರನೆಯ ದಿನ ದಂಪತಿಗಳ ಈ ಸಮರಸ ಮನೆಮನೆಯಲ್ಲಿ ಆದರ್ಶವಾಗಿತ್ತು.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಆರಂಭಗೊಳ್ಳುವ ಮುನ್ನಾದಿನ ಕೆಂಚಪ್ಪನವರನ್ನು ಅರೆಸ್ಟ್ ಮಾಡುವ ಸುದ್ದಿ ಹೇಗೋ ಅವರಿಗೆ ತಲುಪಿತು. ಮಧ್ಯರಾತ್ರಿಯ ಸಮಯ ಅಮಾವಾಸ್ಯೆಯ ಕತ್ತಲಿನಲ್ಲಿ ತಪ್ಪಿಸಿಕೊಳ್ಳಲು ತಮ್ಮ ಸೈಕಲ್ ಏರಿ ಚಳ್ಳಕೆರೆಗೆ ಹೋದರು. ಗೆಳೆಯ ಹರಿಹರಪ್ಪನವ್ರು ಅಬಕಾರಿ ಇನ್‌ಸ್ಪೆಕ್ಟರ್ ಆಗಿದ್ದವರು ಇವರಿಗೆ ಆಶ್ರಯ ನೀಡಿದರು. ಸರಕಾರಿ ಅಧಿಕಾರಿಯಾಗಿಯೂ ಅವರು ಮಿತ್ರನಿಗೆ ತಪ್ಪಿಸಿಕೊಳ್ಳಲು ನೆರವಾದರು. ಅಲ್ಲಿಂದ ಮತ್ತೆ ತಪ್ಪಿಸಿಕೊಂಡು ಮಾರುವೇಷದಲ್ಲಿ ಪರಶುರಾಮ ನಗರದ ಕ್ಯಾದಿಗುಂಟೆ ತಲುಪಿ ಬೆಳಗಾಗುತ್ತಿದ್ದಂತೆಯೇ ಅಲ್ಲಿನ ನರಸಪ್ಪನವರ ಮನೆಯಲ್ಲಿ ತಿಂಡಿತಿಂದು ಮತ್ತೆ ಪ್ರಯಾಣ ಮುಂದುವರೆಸಿ, ಬಸ್ಸಿನ ಮೂಲಕ ಹಿಂದೂಪುರ್ಕ ಸೇರಿದರು. ಹಿಂದೂಪುರ ಮದ್ರಾಸ್ ಪ್ರಾಂತ್ಯದಲ್ಲಿ ಇದ್ದದ್ದರಿಂದ ಮೈಸೂರು ಪ್ರಾಂತ್ಯದ ಪೊಲೀಸರು ಏನೂ ಮಾಡಲು ಸಾಧ್ಯವಾಗಲಿಲ್ಲ. ಅಲ್ಲಿಂದ ಒಂದು ತೋಟದಲ್ಲಿ ಕ್ರಾಂತಿಕಾರಿಗಳ ಗುಂಪಲ್ಲಿ ಸೇರಿ ಕೆಂಚಪ್ಪನವರು ಭೂಗತ ಚಟುವಟಿಕೆಗಳನ್ನು ನಡೆಸಿದರು. ಮತ್ತೆ ವೇಷ ಬದಲಿಸಿಕೊಂಡು ಹರಿಯಬ್ಬೆಗೆ ಬಂದು ಅಲ್ಲಿಂದ ಹಿರಿಯೂರಿನ ಬಳಿಯಿರುವ ರಂಗನಾಥಪುರ ತಲುಪಿ ಅಲ್ಲಿಂದಲೂ ಭೂಗತ ಚಟುವಟಿಕೆಗಳನ್ನು ನಡೆಸಿದರು. ಕೊನೆಯತನಕವೂ ರಂಗನಾಥಪುರದಲ್ಲಿ ನೆಲೆಸಿದರು. ಇವರ ಮೇಲೆ ದಸ್ತಗಿರಿ ವಾರೆಂಟ್ ಇದ್ದರೂಕೂಡ ತಪ್ಪಿಸಿಕೊಂಡು ಓಡಾಡಿ ಬ್ಯಾಡಗಿ, ಹಾವೇರಿ, ಹಿರೇಕೆರೂರು, ಶಿರಾಳಕೊಪ್ಪ, ಹಾನಗಲ್ ಮುಂತಾದ ಕಡೆಗಳಲ್ಲಿ ಚಳುವಳಿಗಾರರನ್ನು ಕರೆಸಿಕೊಂಡು, ಕೊಟಗಿ ಈಶ್ವರಪ್ಪನವರ ತೋಟದಲ್ಲಿ ಅಡಗಿಸಿಟ್ಟು ಚಳುವಳಿ ಕೆಲಸವನ್ನು ಮಾಡಿಸಿದರು. ಇವರು ಇಷ್ಟು ವಾರುವೇಷ ಹಾಗೂ ಪದೇ ಪದೇ ಸ್ಥಳವನ್ನು ಬದಲಾಯಿಸುತ್ತಿದ್ದದ್ದರಿಂದ ಸರಕಾರಕ್ಕೆ ಇವರನ್ನು ಪತ್ತೆ ಹಚ್ಚುವುದು ತಲೆನೋವಾಗಿ ಪರಿಣಮಿಸಿತು. ಒಂದು ರಾತ್ರಿ ಹನ್ನೆರಡು ಘಂಟೆಗೆ ತಪ್ಪಿಸಿಕೊಂಡು ಕೊಟ್ರೆ ಕೆಂಚಪ್ಪನವರು ಮನೆಗೆ ಬಂದು ಊಟ ಮಾಡುವಾಗ ಸರ್ಕಾರ ಷಡ್ಯಂತ್ರದಿಂದ



ಇವರ ಹತ್ತಿರದ ಸಂಬಂಧಿಕ ಪೋಲೀಸರನ್ನೇ ಮನೆಗೆ ಕಳುಹಿಸಿತ್ತು. ಸೂಕ್ಷ್ಮವನ್ನು ಅರಿತ ಕೊಟ್ರೆ ಕೆಂಚಪ್ಪನವರ ಹೆಂಡತಿ ಬೇಗ ಹೊರಡಿ ಎಂದು ಗಂಡನಿಗೆ ಸನ್ನೆ ಮಾಡಿ ಪೊಲೀಸರಿಗೆ ಮತ್ತೆ ಚಳ್ಳೆಹಣ್ಣನ್ನು ತಿನ್ನಿಸಿದರು.

ಕೊಟ್ರೆ ಕೆಂಚಪ್ಪ, ಕೊಟ್ರೆ ನಂಜಪ್ಪ ಇವರಿಬ್ಬರೂ ಆಪ್ತ ಮಿತ್ರರು. ಕೊಟ್ರೆ ಕೆಂಚಪ್ಪನವರದ್ದು ಒಂದು ರೀತಿಯ ಕಥೆಯಾದರೆ ಕೊಟ್ರೆ ನಂಜಪ್ಪನವರದ್ದು ಇನ್ನೊಂದು ರೀತಿಯ ಸ್ವಾರಸ್ಯಕರ ಘಟನೆ. ನಂಜಪ್ಪನವರು ಅಷ್ಟೇನೂ ವಿದ್ಯಾವಂತರಲ್ಲ. ಆದರೆ ಕೆಂಚಪ್ಪನವರು ವಿದ್ಯೆ ಸಂಪಾದಿಸಿದವರು. ಒಂದುದಿನ ರಾತ್ರಿ ಹನ್ನೆರೆಡರ ಸಮಯಕ್ಕೆ ನಂಜಪ್ಪ ಕೆಂಚಪ್ಪನವರ ಮನೆಗೆ ಬಂದರು. ಕೆಂಚಪ್ಪನವರ ಹೆಂಡತಿ ದೇವಮ್ಮನವರು ಅವರಿಗೆ ಊಟ ಬಡಿಸಿ ಬಳಲಿದ ನಂಜಪ್ಪನವರಿಗೆ ನಿದ್ರೆ ಹೋಗಲು ಅನುವು ಮಾಡಿಕೊಟ್ಟರು. ಆಗ ನಂಜಪ್ಪನವರು ಪೋಲೀಸರ ಬಲೆಗೆ ಸಿಕ್ಕಿ ಬಿದ್ದರು.

ಹೀಗೆಯೇ ಇನ್ನೊಮ್ಮೆ ಕೆಂಚಪ್ಪನವರನ್ನು ಪೋಲೀಸರು ಬಂಧಿಸಲು ಬಂದಾಗ ಅವರು ಬಸ್ಸೇರಿ ತಪ್ಪಿಸಿಕೊಳ್ಳಲು ನೋಡಿದ್ದರು. ಆದರೆ ಕಿಲಾಡಿ ಪೋಲಿಸರು ಅದೇ ಬಸ್ಸನ್ನು ಹಿಂಬಾಲಿಸಿದರು. ಹೊಳಲ್ಕೆರೆ ಬಳಿ ಬಸ್ ಬರುತ್ತಿದ್ದಂತೆ ಇವರು ಮೊದಲೇ ಡ್ರೈವರಿಗೆ ಸೂಚನೆ ನೀಡಿದಂತೆ ಆತ ಬಸ್ಸಿನ ವೇಗವನ್ನು ಕೊಂಚ ಕಡಿಮೆ ಮಾಡಿದ ತಕ್ಷಣ, ಇವರು ಅದರಿಂದ ಧುಮುಕಿ ನಂಜಪ್ಪನವರ ಊರಾದ ದೊಗ್ಗನಾಳಿಗೆ ಓಡಿ ಹೋಗಿ ಅಲ್ಲಿಂದ ನಂಜಪ್ಪನವರನ್ನು ಸೇರಿಕೊಂಡು ತಪ್ಪಿಸಿಕೊಳ್ಳಲು ಪ್ರಯಾಸ ಪಟ್ಟರಂತೆ. ಪೊಲೀಸರ ಕಣ್ಣುತಪ್ಪಿಸಲು ಹುಲ್ಲು ಬಣವೆಯಲ್ಲಿ ಬಚ್ಚಿಟ್ಟುಕೊಂಡರಂತೆ. ಅವರ ಮುಂದೆಯೇ ಹಾದು ಹೋದ ಪೊಲೀಸರಿಗೆ, ಇವರ ತಪ್ಪಿಸಿಕೊಳ್ಳುವ ಪರಿ ಅಭೇಧ್ಯ ಎನಿಸಿ ಬರಿಗೈಯಲ್ಲಿ ಹಿಂದಕ್ಕೆ ಮರಳಿದ್ದರಂತೆ. ಈ ಸತ್ಯಾಗ್ರಹದ ಕಾಲದಲ್ಲಿ ಕೊಟ್ರೆ ನಂಜಪ್ಪನವರು ಪೋಲೀಸರಿಂದ ಅನುಭವಿಸಿದ ಕಿರುಕುಳ ನರಕಸದೃಶ. ಬೆಲ್ಟ್ ಹೊಡೆತ ಬೂಟಿನಿಂದ ಒದೆತ, ಬೈದ ಅವಾಚ್ಯ ಬೈಗುಳಗಳು ಎಂಥವರ ಹುಟ್ಟನ್ನೂ ಅಡಗಿಸಿಬಿಡುವಂತಿತ್ತು.

**ಕೊಟ್ರೆ ನಂಜಪ್ಪ ದಿಟ್ಟಗುಟರೆ ಕೇಳಿ ಸರಕಾರ**
**ಉಟ್ರೆ ಬೈಟ್ರೆ ಎಂದು ಹೇಳಿ ಸೆರೆಯೊಳಿಟ್ಟಿತು ॥**
**ಕೆಟ್ಟ ಕೆಟ್ಟ ಮಾತನಾಡಿ ಉಟ್ಟ ಬಟ್ಟೆ ಎಲ್ಲ ಹರಿದು**
**ಅಟ್ಟಹಾಸದಿಂದ ಬೂಟಕಾಲಲೊದ್ದರು ॥**

ಎಂದು ಒಬ್ಬ ಲಾವಣಿಕಾರ ಜೈಲಿನಲ್ಲಿಯೇ ಅವರ ಶೋಚನೀಯ ಸ್ಥಿತಿಯನ್ನು ಕಟ್ಟಿ ಹಾಡಿದ್ದರಂತೆ. ಇದೇ ಕೊಟ್ರೆ ನಂಜಪ್ಪನವರ ತಮ್ಮ ಕೊಟ್ರೆ ಬಸಪ್ಪನವರಿಗೆ, ತುರುವನೂರಿನ ಒಬ್ಬ ರೆಡ್ಡಿಗೆ ಪೋಲೀಸರು ೨೧ ಛಡಿ ಏಟು ಕೊಟ್ಟಿದ್ದರಂತೆ. ಛಡಿ ಏಟು ಕೊಟ್ಟ ಜಾಗದಿಂದ ಚರ್ಮ ಸುಲಿದು ರಕ್ತ ಒಸರುತ್ತಿದ್ದದ್ದು ನೋಡಿದರೆ ಎಂಥವರಿಗೂ ಎದೆ ನಡುಗುತ್ತಿತ್ತು. ಅವರೆದುರೇ ೧೬ ಸೇರಿನ ರಾಗಿಯನ್ನು ಬೀಸಿ ಬೀಸಿ ಕೈಗಳಿಗೆ ಬೊಬ್ಬೆ ಹತ್ತಿ ಶಿವಾ ಶಿವಾ ಎಂದು ಗೋಡೆಗೆ ಒರಗಿ ಅಸಹಾಯಕನಾಗಿ ಕೂತ ಶಿವಮೊಗ್ಗೆಯ ಒಬ್ಬ ಕೈದಿಯ ದೃಶ್ಯ ಈಗಲೂ ಮೈಗೆ ಝುಂಮ್ಮೆನಿಸುತ್ತದೆ ಎಂದು ಮತ್ತೊಬ್ಬ ಬಿಡುಗಡೆಯಾಗಿ ಬಂದ ಹೋರಾಟಗಾರರು ನಮ್ಮೆದುರು ಜೈಲಿನ ಕ್ರೌರ್ಯವನ್ನು ಬಿಚ್ಚಿಟ್ಟಿದ್ದರು.

ಕೆ.ಎಚ್. ಮಹದೇವಪ್ಪ ಹಾಗೂ ಕೆ. ಚನ್ನವೀರಪ್ಪನವರಿಗೆ ಹರಿಹರದಲ್ಲಿ ತಾರುಕಂಬ ಕೀಳುವ ಜವಾಬ್ದಾರಿ ವಹಿಸಲಾಗಿತ್ತು. ಆ ಸಂಧರ್ಭದಲ್ಲಿ ಅವರಿಬ್ಬರ ಬಂಧನವಾಯಿತು. ದಾರಿಯಲ್ಲಿ ಊಟ, ತಿಂಡಿ, ನೀರು ಸಹ ಕೊಡದೆ ದೂರದ ಕಪ್ಪತಗುಡ್ಡದಲ್ಲಿ ಅವರನ್ನು ಬಿಟ್ಟುಬರಲಾಯಿತಂತೆ. ಅಲ್ಲಿಂದ ೨೦–೨೫ ದಿನಗಳ ನಂತರ ನಡೆದು ಬಂದು ಅವರಿಬ್ಬರೂ ಊರು ಸೇರಿದ್ದರು. ಮುಂದೆ ಧಾರವಾಡ ಜಿಲ್ಲೆಯ ಖ್ಯಾತ ಹೋರಾಟಗಾರ ಮೆಣಸಿನ ಹಾಳು ತಮ್ಮಣ್ಣ ಗೌಡರು ನಮ್ಮ ಊರಿನಲ್ಲಿ ಮೂರು ದಿನ ಗುಟ್ಟಾಗಿ ಇದ್ದರೆಂಬ ಕಾರಣಕ್ಕಾಗಿ ಪೋಲೀಸರು ಕೆ.ಎಚ್. ಮಹಾದೇವಪ್ಪನವರನ್ನು ಸ್ಟೇಷನ್‌ಗೆ ಕರೆದೊಯ್ದು, ಐದು ದಿನ ಚಿತ್ರಹಿಂಸೆಗೆ ಒಳಪಡಿಸಿದ್ದರು, ಜೊತೆಗೆ ಹಳಿಗಳನ್ನು ಕಿತ್ತ ಆರೋಪದ ಅಡಿಯಲ್ಲಿ ಐದಾರು ತಿಂಗಳು ಡೆಟಿನ್ಯೂ (ಕಾನೂನಿಗೆ ವಿರೋಧವಾಗಿ ಜೈಲಿನಲ್ಲಿ ಇರಿಸಿಕೊಳ್ಳುವುದು) ಎಂದು ಇಟ್ಟಿದ್ದರು.

ರಾಜಕೀಯ ಕೈದಿಗಳು ಹೆಚ್ಚಿದ್ದರಿಂದ ಚಿತ್ರದುರ್ಗ ಜಿಲ್ಲೆಯ ಹಲವಾರು ಖೈದಿಗಳನ್ನು ಗೌರಿಬಿದನೂರಿನ ಘಾಟಿ ಸುಬ್ರಮಣ್ಯ ಕ್ಷೇತ್ರದ ತೊಂಡೆಬಾವಿ ಬಳಿಯ ಹಂಗಾಮಿ ಸಬ್‌ಜೈಲಿಗೆ ಸಾಗಿಸಲಾಗಿತ್ತು. ಈ ರೀತಿ ಹೋದ ೫೦ ಜನರಲ್ಲಿ ಎನ್.ಡಿ. ಶಂಕರ್, ಕೆ.ಎಸ್. ಕುಮಾರನ್, ತಗಡೂರು ರಾಮಚಂದ್ರ ರಾವ್, ಬಾಗಮನೆ ದೇವೇಗೌಡ, ದುಮ್ಮಿ ಮುರಿಗೆಪ್ಪ ಮೊದಲಾದವರು ಇದ್ದರು. ಇವರ ಕಥೆಯಂತೂ ಇನ್ನೂ ವಿಚಿತ್ರ, ರೋಚಕ ಅಂತಲೇ ಹೇಳಬಹುದು. ಬೆಟ್ಟದ ತಪ್ಪಲಿನಲ್ಲಿ ಗಿಡಗಂಟಿಗಳನ್ನು ಕಡಿದು ನಿರ್ಮಿಸಿದ್ದ ಜೈಲಂತೆ ಅದು.



ಹೋದ ಕೆಲ ತಿಂಗಳಲ್ಲೇ ಬಿರುಸಾದ ಮಳೆ ಬಂದು ಇಡೀ ಜೈಲು ಕೆಡವಿ ಹೋಯಿತಂತೆ. ಇದ್ದ ಸ್ವಲ್ಪ ದಿನದಲ್ಲೇ ನರಕ ದರ್ಶನವಾದದ್ದಂತೂ ನಿಜ ಎನ್ನುತ್ತಾರೆ ರಾಜಶೇಖರಯ್ಯನವರು. "ನಾವೆಲ್ಲ ಹೋದಾಗ ಫೆಬ್ರವರಿ ಉರಿ ಬಿಸಿಲು. ಎರಡು ಫರ್ಲಾಂಗ್ ದೂರವಿದ್ದ ಕೆರೆ ಕಟ್ಟುವ ಸ್ಥಳಕ್ಕೆ ಬೆಳಿಗ್ಗೆ ೯ಕ್ಕೆ ಹೋದರೆ, ಅಲ್ಲಿ ಕಟ್ಟೆಗೆ ಮಣ್ಣು ಹೊತ್ತು ಹಾಕಿ ಹಿಂತಿರುಗುತ್ತಿದ್ದದ್ದು ಸಂಜೆ ೪:೦೦ಕ್ಕೆ. ಮತ್ತೆ ಹಿಂತಿರುಗಿದಾಗ ಬಿರುಬಿಸಿಲಿನಲ್ಲಿ ಕಾದ ನೀರಿನ ತೊಟ್ಟಿಯ ಬಿಸಿ ಕುದಿಯುವ ನೀರಿನ ಸ್ನಾನ. ಆ ಜೈಲಿನ ಸುತ್ತಮತ್ತ ಹಾವುಗಳ ವಾಸ, ಚೇಳುಗಳ ಓಡಾಟ. ಅಬ್ಬೆಗಳ ಕಾಟ ಬೇರೆ. ಅಬ್ಬೆ ಕಡಿದರೆ ಹೆಬ್ಬಾಗಿಲಿನವರೆಗೆ ಸುದ್ದಿಕೊಡಲಾಗುತ್ತಿತ್ತು ಎಂಬ ಗಾದೆ ಬೇರೆ. ಬೆಳಿಗ್ಗೆ ಎದ್ದು ಹಾಸಿಗೆ ಸುತ್ತಿದರೆ ಆ ಹಾಸಿಗೆ ಅಡಿಯೇ ಇಷ್ಟುದ್ದ ಹಾವು ಚೇಳುಗಳು. ಒಮ್ಮೆ ಪಾಯಖಾನೆಗೆ ನಡುರಾತ್ರಿಯಲ್ಲಿ ಹೋದವ ಒಬ್ಬ ಸಿಂಬೆಯಂತೆ ಸುತ್ತಿ ಮಲಗಿದ್ದ ಹಾವಿನ ಮೇಲೆ ಕಾಲಿಟ್ಟಿದ್ದ. ಅದೃಷ್ಟವಶಾತ್ ಹಾವು ಕಚ್ಚಲಿಲ್ಲ. ಅಷ್ಟು ದಿನಗಳಲ್ಲಿ ಯಾರೊಬ್ಬರಿಗೂ ಹಾವು, ಚೇಳು, ಅಬ್ಬೆ ಕಡಿಯಲೇ ಇಲ್ಲ. ಯಾರೋ ಹೇಳುತ್ತಿದ್ದರು. "ಇದು ಸುಬ್ರಮಣ್ಯ ಕ್ಷೇತ್ರ; ಇಲ್ಲಿಂದ ಎರಡು ಮೈಲಿ ದೂರದವರೆಗೂ ಯಾರೊಬ್ಬರಿಗೂ ಹಾವು ಚೇಳು ಅಬ್ಬೆ ಕಡಿಯದು. ಹಾಗೆ ಸುಬ್ರಮಣ್ಯ ಸ್ವಾಮಿಯ ಆಜ್ಞೆ ಇದೆ ಎಂದು" ಹೀಗೆ ಸವಿವರವಾಗಿ ವರ್ಣಿಸಿದರು.

ಆಗಿನ ಬೆಂಗಳೂರು ಸೆಂಟ್ರಲ್ ಜೈಲು ಕೈದಿಗಳ ಪಾಲಿಗೆ ನರಕ ಸದೃಶವಾಗಿತ್ತು. ನೀರು ಕುಡಿಯಲು ಮಣ್ಣಿನ ಕುಡಿಕೆ ಊಟ ಮಾಡಲು ಮುಚ್ಚಳ, ಮಲಗಲು ಒಂದು ಗೋಣಿಚೀಲ, ಹೊದ್ದುಕೊಳ್ಳಲು ಜೈಲಲ್ಲೇ ತಯಾರಿಸಿದ ಹುಣಸೆ ಬೀಜದ ಮುಗ್ಗು ಸರಿ ಹಚ್ಚಿದ ಒರಟು ಕಂಬಳಿ, ಉಡಲು ಜೈಲಿನಲ್ಲೇ ತಯಾರಿಸಿದ ಒರಟು ಬಟ್ಟೆಗಳು, ಸೊಳ್ಳೆಕಾಟ ತಪ್ಪಿಸಲು ಕಂಬಳಿ ತುಂಬಾ ಹೊದ್ದುಕೊಂಡರೆ ಕಂಬಳಿಗೆ ಹಚ್ಚಿದ್ದ ಸರಿಯ ಮುಗ್ಗು ವಾಸನೆ ತಡೆದುಕೊಳ್ಳಲು ಆಗುತ್ತಿರಲಿಲ್ಲ. ಆಹಾರವು ಕಬ್ಬಿಣದ ಪಾತ್ರೆಯಲ್ಲಿ ಮಾಡಿದ ರಾಗಿಮುದ್ದೆ, ಅನ್ನ. ಅದನ್ನು ನೋಡಿದರೇ ಉಣ್ಣಲು ಮನಸ್ಸು ಬರುತ್ತಿರಲಿಲ್ಲ. ಶೌಚಗೃಹಗಳು ನರಕಸದೃಶ. ಅಕ್ಕಪಕ್ಕದಲ್ಲಿ ಮೂರಡಿ ಎತ್ತರ ಮಾತ್ರ ಮರೆಮಾಡಿದ್ದ, ಬಾಗಿಲಿಲ್ಲದ ಬಹಿರಂಗ ಶೌಚ ಕೂಪಗಳು. ಯತ್ನವಿಲ್ಲದೆ ಮರ್ಯಾದೆಯಿಂದ ತಲೆತಗ್ಗಿಸಿ ಕುಳಿತರೆ ಎದುರಿನ ಕೂಪದಲ್ಲಿ ಕುಳಿತ 'ಪಂಚರಂಗಿ' (ಕ್ರಿಮಿನಲ್) ಕೈದಿಯೊಬ್ಬ 'ಎನ್ನಆಯ್ಯ?' ಎಂದು ಆರಂಭಿಸಿ

ಬೀಡಿ ಕೇಳುತ್ತಾನೆ. ಅವನೊಂದಿಗೆ ಮಾತನಾಡಿದರೂ ಕಷ್ಟ, ಸುಮ್ಮನಿದ್ದರೂ ಕಷ್ಟ. ಮೊದಲನೇ ನಾಲ್ಕೈದು ತಿಂಗಳು ನರಕಯಾತನೆ ಅನುಭವಿಸಿದ್ದಾಯ್ತು. ಆದರೆ ನಿಧಾನವಾಗಿ ಪರಿಸ್ಥಿತಿ ಸುಧಾರಿಸಿತ್ತು. ಆದರೆ ಅನೇಕರಿಗೆ ಆಮಶಂಕೆ, ರಕ್ತಬೇಧಿಯಾಗಿ ಇಬ್ಬರೂ ಮುಖಂಡರು ಇಹಲೋಕ ತ್ಯಜಿಸಿದರು. ಮುಂದೆ ಶೌಚಗೃಹದ ವ್ಯವಸ್ಥೆಯಲ್ಲಿಯೂ ಮಾರ್ಪಾಡಾಯಿತು. ನಮ್ಮ ಅಡಿಗೆ ನಾವೇ ಪ್ರತ್ಯೇಕವಾಗಿ ಮಾಡಿಕೊಳ್ಳುವ ವ್ಯವಸ್ಥೆಯೂ ಆಯಿತು" ಎಂದು ಸವಿವರವಾಗಿ ಬಣ್ಣಿಸುತ್ತಾರೆ ಕೆ.ಎಂ. ರಾಜಶೇಖರಯ್ಯ ಹಿರೇಮಠ.

ಇನ್ನೊಂದು ವಿಶೇಷ ವಿಚಾರವನ್ನು ಮಾತ್ರ ನಾನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ಅದೇನೆಂದರೆ ಇವರೆಲ್ಲರೂ ಬಿರುಬಿಸಿನಲ್ಲಿ ಮಣ್ಣು ಹೊರುತ್ತಿದ್ದಾಗ ಒಬ್ಬ ವಯೋವೃದ್ಧರು ನಿಂತು ನೋಡುತ್ತಾ "ಅಯ್ಯೋ, ನಿರಪರಾಧಿಗಳಾದ ನಿಮ್ಮಿಂದ ಈ ಉರಿಬಿಸಿಲಿನಲ್ಲಿ ಮಣ್ಣು ಹೊರಿಸುತ್ತಾರಲ್ಲ? ಆ ಮಹಾರಾಜರಿಗೆ ಕಣ್ಣು ಕಿವಿ ಇಲ್ಲವೇ? ಆ ಸೂರ್ಯ ಭಗವಾನ್ ನಿಮ್ಮನ್ನು ದಂಡಿಸಿದ ರಾಜರನ್ನು ಭಸ್ಮ ಮಾಡಲಾರನೇ?" ಎಂದು ಮರುಗಿ ಶಪಿಸಿ ಹೊರಟು ಹೋದರಂತೆ. ಇದಾದ ಕೆಲಕಾಲದಲ್ಲಿಯೇ ಕೃಷ್ಣರಾಜೇಂದ್ರ ಒಡೆಯರು ವಿಧಿವಶರಾದರು. ಮುಂದೆ ಎರಡೇ ತಿಂಗಳಿನಲ್ಲಿ ನರಸಿಂಹರಾಜ ಒಡೆಯರೂ ವಿಧಿವಶರಾದರು. ಇದು ಕಾಕತಾಳೀಯವೇ ಇದ್ದೀತು ಎಂದು ರಂಗನಾಥ ಜೋಯ್ಸರು ನಮ್ಮೊಡನೆ ಹೇಳಿ ಮರುಗಿದ್ದರು.

ರಂಗನಾಥ ಜೋಯ್ಸರ ಎದುರು ಕುಳಿತರೆ ಹೊತ್ತು ಕಳೆದದ್ದು ಗೊತ್ತೇ ಆಗುತ್ತಿರಲಿಲ್ಲ. ದಿನ–ದಿನಾಂಕ–ಇಸವಿಯ ಸಮೇತ ಸವಿವರವಾಗಿ ಎಲ್ಲಾ ವಿವರಗಳನ್ನು ನಮ್ಮ ಮುಂದೆ ಪದರಪದರವಾಗಿ ಬಿಚ್ಚಿಡುತ್ತಿದ್ದರು. ನಾನು ನಿಮ್ಮ ಮುಂದೆ ಇಷ್ಟೆಲ್ಲಾ ಕಥಾನಕಗಳನ್ನು ಹಂಚಿಕೊಳ್ಳಲು ಅವರೂ ಒಬ್ಬ ಕಾರಣರು ಎಂದು ನಾನು ಹೇಳಬಹುದು. ಅಪರಿಚಿತ ವ್ಯಕ್ತಿಗಳನ್ನೇ ಅದೆಷ್ಟು ಭಾವೈಕ್ಯತೆಯಿಂದ ನಡೆಸಿಕೊಳ್ಳುತ್ತಿದ್ದ ವ್ಯಕ್ತಿ ಅವರು!!

ಹರಿಹರದ ಸಿ.ವಿ. ಕೃಷ್ಣಮೂರ್ತಿಗಳ ಬಂಧನದ ನಂತರ ಅವರ ಮನೆಗಳಿಗೆ ಅಂಗಡಿಗಳಿಗೆ ದಾಳಿ ನಡೆಸಿ ಪೋಲೀಸರು ಅವರ ಖಾದಿ ಬಟ್ಟೆಗಳು, ಸ್ಟೇಷನರಿಗಳು, ಔಷಧಿ ಅಂಗಡಿಯ ಸಾಮಗ್ರಿಗಳನ್ನು ಜಪ್ತಿ ಮಾಡಿ ರೂ.೨೦೦೦/–ಗಳಿಗೆ ಬೆಲೆಬಾಳುವ ಸೊತ್ತುಗಳನ್ನು ಸರ್ಕಾರ ಹರಾಜು



ಮಾಡಿತು. ಜೊತೆಗೆ ಇವರಿಗೂ ಇವರ ಸ್ನೇಹಿತರಿಗೂ ೬ ತಿಂಗಳಿನಿಂದ ೧ ವರ್ಷ ಸಜೆ ವಿಧಿಸಿತು. ಈ ತರಹ ಅನೇಕರ ಮನೆಗಳನ್ನು ಅಂಗಡಿಗಳನ್ನು ಸರಕಾರ ಮುಟ್ಟುಗೋಲು ಹಾಕಿತು. ರೊಚ್ಚಿಗೆದ್ದ ಕುಟುಂಬದವರು ಹರಾಜಿಗೆ ಹಾಕಿದ ಸಾಮಾನುಗಳನ್ನು ಖರೀದಿಸಿದವರ ಮನೆಯ ಎದುರೇ ಧರಣಿ ಕೂತರು. ನಿರಶನ ಮಾಡಿದರು. ಈ ನಡೆಯಿಂದ ಹೆದರಿದ ಖರೀದಿದಾರರು ಅವರವರ ಸಾಮಗ್ರಿಗಳನ್ನು ಕರುಣೆ ಹಾಗೂ ಮಾನವೀಯತೆಯಿಂದಲೇ ಹಿಂತಿರುಗಿಸಿದರು. ಮುಂದೆ ಸರ್ಕಾರದವರಿಗೆ ಜಪ್ತಿ ಮಾಡಿದ ಸಾಮಗ್ರಿಗಳು, ಆಸ್ತಿಪಾಸ್ತಿಗಳನ್ನು ಖರೀದಿಸಲು ಜನರಿಲ್ಲದಾಗಿ ಈ ಹುನ್ನಾರ ಕೈಬಿಡಬೇಕಾಯಿತು. ಈ ತರಹದ ಹಲವಾರು ಚಿತ್ರಣಗಳನ್ನು ನಾವು ಹರಿಹರದ ತಾಲ್ಲೂಕು ಕಛೇರಿಯ ಮೇಲೆ ಬಾವುಟ ನೆಟ್ಟು ಸಂಭ್ರಮಿಸಿದ ಪೈಲ್ವಾನ್ ನಂಜಪ್ಪನವರ ಲಾವಣಿಯಲ್ಲಿ ಕೇಳಲು ಸಿಗುತ್ತಿದ್ದವು. ಅವರ ದಿನಂಪ್ರತಿ ಲಾವಣಿಗಳು ಹೆಂಗಸರ ಮನೆಮನೆಯ ರಾಗಿ ಬೀಸುವ ಪದಗಳಾಗಿ ಮಾರ್ಪಟ್ಟಿದ್ದು ಅತ್ಯಂತ ವಿಶೇಷ.

ಜೈಲಿಗೆ ಸೇರಿದ ಚಳುವಳಿಗಾರರಿಗೆ ಊಟದ ಅವ್ಯವಸ್ಥೆ ಆರೋಗ್ಯವನ್ನು ಸಂಪೂರ್ಣ ಹದಗೆಡಿಸಿತ್ತು. ಜೈಲಿನ ಪರಿಸ್ಥಿತಿಯಂತೂ ಹೇಳತೀರದು. ಇಂತಹ ಸಂಧರ್ಭದಲ್ಲಿ ಹರಿಹರದ ಹೆಣ್ಣುಮಕ್ಕಳು ತಾವೇ ಮನೆಯಲ್ಲಿ ಅಡಿಗೆಯನ್ನು ತಯಾರಿಸಿ ಜೈಲಿಗೆ ಬಂದು ಭೇದಭಾವವಿಲ್ಲದೆ ಎಲ್ಲರಿಗೂ ಪ್ರತಿದಿನ ಊಟವನ್ನು ನೀಡುತ್ತಿದ್ದರು. ಕಡೆಗೊಂದು ದಿನ ಜೈಲಿನ ಪರಿಸ್ಥಿತಿ ನಿಧಾನ ಗತಿಯಲ್ಲಿ ಸುಧಾರಿಸಿತ್ತು.

೧೯೪೧ ಏಪ್ರಿಲ್ ತಿಂಗಳಿನಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ ಹರಿಹರದ ಹತ್ತಿರದ ಹಳ್ಳಿಯೊಂದರಲ್ಲಿ ನಡೆಯಿತು. ಆ ಕಾಲಕ್ಕೆ ಸುವ್ಯವಸ್ಥಿತವಾದ ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನವು ನಡೆಯಿತು. ಸರ್ದಾರ್ ಕೆ.ಎ. ವೆಂಕಟರಾಮಯ್ಯನವರು ಅದರ ಕಾರ್ಯದರ್ಶಿಗಳಾಗಿದ್ದರು. ಬಾಬು ರಾಜೇಂದ್ರ ಪ್ರಸಾದ್‌ರವರು ಈ ಪ್ರದರ್ಶನವನ್ನು ಉದ್ಘಾಟಿಸಿದರು. ವಿನೋಬಾನಗರದ ಅಧಿವೇಶನದ ಅಧ್ಯಕ್ಷರು ಎಚ್.ಸಿದ್ದಯ್ಯನವರು, ಸ್ವಾಗತ ಸಮಿತಿಯ ಅಧ್ಯಕ್ಷರು ಎಸ್.ಲಿಂಗಪ್ಪನವರಾದರೆ ಕೋಶಾಧ್ಯಕ್ಷರು ದಾವಣಗೆರೆಯ ಕಾಸಲ ಶ್ರೀನಿವಾಸಶೆಟ್ಟರು. ಕಾರ್ಯದರ್ಶಿಗಳಾಗಿ ಎಸ್. ವಾಸುದೇವರಾಜ್, ಸ್ವಯಂಸೇವಕರ ದಳಪತಿ ಮೌನೇಶ್ವರಪ್ಪನವರು, ಎಸ್. ವೀರಬಸಪ್ಪನವರು,

ವಾಗನೂರು ಬಸಪ್ಪನವರು ಹಾಗೂ ಬಳ್ಳಾರಿ ಸಿದ್ದಮ್ಮನವರು ಉಪಾಧ್ಯಕ್ಷರಾಗಿದ್ದರು. ಈ ಅಧಿವೇಶನ ನಡೆದಾಗ ಡಿ. ಆರ್. ಮೌನೇಶ್ವರಪ್ಪ ಹಾಗೂ ತಂಡದವರು ಅಧಿವೇಶನಕ್ಕೆ ಒಂದು ತಿಂಗಳು ಮುಂಚಿತವಾಗಿ ಸ್ವಯಂಸೇವಕರ ಶಿಕ್ಷಣ ಶಿಬಿರ ಆರಂಭಿಸಿ ಇಡೀ ಜಿಲ್ಲೆಯಲ್ಲಿ ೩೦೦ ಸ್ವಯಂಸೇವಕರಿಗೆ ತರಬೇತಿ ನೀಡಿದ್ದರು.

ಇದೇ ಸಂದರ್ಭದಲ್ಲಿ ಮನರಂಜನಾ ಕಮಿಟಿಯ ಕಾರ್ಯದರ್ಶಿಗಳಾಗಿದ್ದ ವೀರಬಸಯ್ಯ ಪುರಾಣಿಕ ಮಠ ತಿಲಕರ ತರುಣ ಸಂಘದಿಂದ 'ಚಲ್ತಿ ದುನಿಯಾ' ನಾಟಕ ವಾಡಿಸಿದ್ದರು. ಇದಕ್ಕೆ ಕೆ.ಟಿ. ಜಂಬಣ್ಣ, ಬೊಂದಾಡೆ ಹನುಮಂತಪ್ಪ ಸಹಾಯಕರಾಗಿದ್ದರು. ಈ ನಾಟಕವನ್ನು ನೋಡಿ ಆಸ್ವಾದಿಸಿದ್ದ ಬಾಬು ರಾಜೇಂದ್ರ ಪ್ರಸಾದ್‌ರವರು ಮೆಚ್ಚಿಗೆ ಸೂಚಿಸಿದ್ದರು. ವಿಶೇಷವೆಂದರೆ ಈ ನಾಟಕದಲ್ಲಿ ನನ್ನ ಮಾವನೂ ಪಾತ್ರಧಾರಿಯಾಗಿದ್ದ. ಮನೆ ನಡೆಸಲುದುಡಿಮೆ ಅನಿವಾರ್ಯವಾದ ಕಾರಣ ಆತ ತನ್ನನ್ನು ಸಂಪೂರ್ಣವಾಗಿ ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ಆಗಲಿಲ್ಲವಾದರೂ ತನ್ನ ಇಚ್ಛೆಯನ್ನೆಲ್ಲಾ ನನ್ನ ಕೆಲಸಗಳಿಂದ ಅನುಭವಿಸಿ ಖುಷಿಪಡುತ್ತಿದ್ದ.

೧೯೪೨ಕ್ಕೂ ಸ್ವಲ್ಪ ಮುಂಚೆ ಚಿತ್ರದುರ್ಗದಲ್ಲಿ ಒಮ್ಮೆ ಯಾವುದೋ ಕಾರಣಕ್ಕಾಗಿ ಸರಕಾರಿ ಹೈಸ್ಕೂಲಲ್ಲಿ ವಿದ್ಯಾರ್ಥಿಗಳು ಮುಷ್ಕರ ನಡೆಸಿದರು. ಮುಂಬರುವ ಕ್ವಿಟ್ ಇಂಡಿಯಾ ಚಳುವಳಿಗೆ ಇದು ಒಳ್ಳೆಯ ಹಿನ್ನೆಲೆ ನೀಡಿತ್ತು. ಚಳುವಳಿ ಪ್ರಾರಂಭವಾದಾಗಲೇ ನೂರಾರು ವಿದ್ಯಾರ್ಥಿಗಳು ಶಾಲೆ ತ್ಯಜಿಸಿ ಪಿಕೆಟಿಂಗ್ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಚಿತ್ರದುರ್ಗದಿಂದ ಸುಮಾರು ೧೫೦ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಊರಲ್ಲಿ ಈ ಚಳುವಳಿ ಬರೀ ವಿದ್ಯಾರ್ಥಿಗಳದ್ದೇ ಆಗಿತ್ತು. ಶಾಲೆ ತ್ಯಜಿಸಿ ಇತರೆ ಶಾಲೆ ಹಾಗೂ ಕಾಲೇಜು, ಸರಕಾರಿ ಕಛೇರಿಗಳಲ್ಲಿ ಪಿಕೆಟಿಂಗ್ ನಡೆಸಿದರು. ತಂಡತಂಡವಾಗಿ ಈ ಪಿಕೆಟಿಂಗ್ ನಡೆಯುತ್ತಲೇ ಇತ್ತು.

ಕೆ. ಕೆಂಚಪ್ಪನವರು ಆಗ ಜಿಲ್ಲಾ ಬೋರ್ಡ್ ಉಪಾಧ್ಯಕ್ಷರಾಗಿದ್ದರು. ಆ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಕೋರ್ಟನ್ನೇ ಬಹಿಷ್ಕರಿಸಿದರು. ಒಮ್ಮೆ ಕೋರ್ಟ್‌ನ ಎದುರು ಪಿಕೆಟಿಂಗ್ ನಡೆದಾಗ ತೀವ್ರ ಪರಿಸ್ಥಿತಿ ಉಂಟಾಯಿತು. ಗೋಲೀಬಾರಾಗಿ ಹಲವರು ಸಾಯುವ ಸ್ಥಿತಿ ಇತ್ತು. ಆದರೆ ಭೀಮಪ್ಪ ನಾಯಕರ ಕೌಶಲ್ಯದಿಂದ



ಅದು ತಪ್ಪಿತು. ಹಮಾಲರೂ, ರೈತರೂ ಚಳುವಳಿಯಲ್ಲಿ ಸೇರಿಕೊಂಡರು. ಹಿರಿಯೂರಲ್ಲಿ ಆಗ ಚಳುವಳಿ ಬಲವಾಗಿತ್ತು. ಎರಡು ತಿಂಗಳುಗಳಾದರೂ ಪಿಕೆಟಿಂಗ್ ಹಾಗೂ ಇತರ ಚಳುವಳಿಗಳು ಸಾಗಿತ್ತು. ಇದರಲ್ಲೂ ಕೆ.ಎಚ್. ರಂಗನಾಥರ ಸಮೇತ ಹಲವರು ಬಂಧಿತರಾದರು. ಇದಾದ ಬಳಿಕ ಕೆ.ಎಚ್. ರಂಗನಾಥ್ ಹಾಗೂ ಕೆಲವು ಸ್ನೇಹಿತರು ೧೯೪೩ರ ಜನವರಿಯಲ್ಲಿ ಬಿಡುಗಡೆಯಾದರು. ಬಿಡುಗಡೆಯ ಬಳಿಕ ಸೊಂಡೆಕೆರೆ ಚಾಪೆ ನೇಯುವ ಕೇಂದ್ರದಲ್ಲಿ ಭೂಗತ ಚಟುವಟಿಕೆಯನ್ನು ಆರಂಭಿಸಿದರು.

ಈ ಕ್ಷಣದಲ್ಲಿ ಹರ್ಡೇಕರ್ ಮಂಜಪ್ಪನವರನ್ನು ನೆನೆಯಲೇ ಬೇಕು. ಹರ್ಡೇಕರರು ಸತ್ಯಾಗ್ರಹದ ಸಮಾಜವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿ ಅಲ್ಲಿ ಆಶ್ರಮವನ್ನು ಪ್ರಾರಂಭಿಸಿದರು. ೧೯೨೪ರ ಬೆಳಗಾವಿ ಅಧಿವೇಶನಕ್ಕಾಗಿ ಬಸವೇಶ್ವರ ಸೇವಾದಳ ಕಟ್ಟಿದರು. 'ಸತ್ಯಾಗ್ರಹಿ ಬಸವೇಶ್ವರ' ಪುಸ್ತಕ ಪ್ರಕಟಿಸಿದರು. ಅವರ ಎಲ್ಲ ಸಾರ್ವಜನಿಕ ಕಾರ್ಯಗಳಿಗೂ ಸ್ವಯಂಪ್ರೇರಣೆಯೇ ಆಧಾರ. ಬಿಜಾಪುರ ಜಿಲ್ಲೆಯ ಆಲಮಟ್ಟಿಯಲ್ಲಿ ಅವರಿಂದ ವೀರಶೈವ ವಿದ್ಯಾಲಯ ೧೯೨೭ರಲ್ಲಿ ಪ್ರಾರಂಭವಾಯಿತು. 'ವಿದ್ಯಯಾ ಅಮೃತಮಶ್ನುತೇ' ಆ ವಿದ್ಯಾಲಯದ ಧ್ಯೇಯ ವಾಕ್ಯವಾಗಿತ್ತು. ಅದು ಪ್ರಾಚೀನ ಗುರುಕುಲದಂತೆ ರೂಪಿತವಾಯಿತು. ಇದರಲ್ಲಿ ತಾವೇ ಸೇವಾಕರ್ತರಾಗಿ ಅತಿಥಿಗಳ ಸೇವೆ ಮಾಡುತ್ತಿದ್ದರು. ಹುಡುಗರು ತಪ್ಪು ಮಾಡಿದರೆ ಅದಕ್ಕೆ ಶಿಕ್ಷೆ ಏನು ಗೊತ್ತೆ? ಮಂಜಪ್ಪನವರ ಉಪವಾಸವೇ ಶಿಕ್ಷೆ. ಪುಲಿಕೇಶಿ, ವಿವೇಕಾನಂದ, ಲಜಪತರಾಯರಂತಹವರ ಜೀವನಚರಿತ್ರೆ ಇವರು ಬರೆದರು. ಪ್ರಾಯಶಃ ಮಕ್ಕಳಿಗಾಗಿ ಕನ್ನಡ ಪುಸ್ತಕ ಬರೆದವರಲ್ಲಿ ಇವರೇ ಮೊದಲಿಗರಿರಬೇಕು. ಮಂಜಪ್ಪನವರ ಆಲೋಚನೆಗಳು ಸಮಾಜ, ಪಕ್ಷ, ಪಂಥ ಮತ್ತು ಸಂಸ್ಥೆಗಳ ಗುಣದೋಷಗಳ ವಿಮರ್ಶೆಮಾಡಿ ಪರಿಹಾರ ಸೂಚಿಸುವುದಾಗಿತ್ತು. ಅವರಿಗೆ ಬಸವಣ್ಣ, ಬುದ್ಧ, ಮಹಾವೀರ, ಪರಮಹಂಸ, ಶಂಕರಾಚಾರ್ಯ ಹೀಗೆ ಎಲ್ಲರೂ ಮಾರ್ಗದರ್ಶಕರೇ. ದಯಾನಂದರ ಸತ್ಯಾರ್ಥ ಪ್ರಕಾಶ ಅವರಿಗೆ ಸ್ಫೂರ್ತಿಕೊಟ್ಟಿತು. ಅವರು ಬರೆದ ಅಂತಿಮ ಕೃತಿ 'ಎಚ್ಚೆತ್ತ ಹಿಂದುಸ್ಥಾನ'. 'ಭಾರತೀಯರ ದೇಶಭಕ್ತಿ' ಅವರ ಇನ್ನೊಂದು ಕೃತಿ. ಖಾದಿಶಾಸ್ತ್ರ, ಬಸವಚರಿತ್ರೆ, ಋಗ್ವೇದಸಾರ (ಪ್ರಕಟಗೊಂಡಿಲ್ಲ) ಇವು ಅವರ ಮತ್ತಿತರ ಕೃತಿಗಳು.

೧೯೪೨ ಕ್ವಿಟ್ ಇಂಡಿಯಾ ಚಳುವಳಿ ಇಡೀ ಜಿಲ್ಲೆಯಲ್ಲಿ ಬೃಹತ್‌ರೂಪ ತಾಳಿತು. ಇಡೀ ಜಿಲ್ಲೆಯೇ ಇದರಲ್ಲಿ ಭಾಗವಹಿತು. ವಿದ್ಯಾರ್ಥಿಗಳ ಪಾತ್ರ

ಇದರಲ್ಲಿ ಅತ್ಯಂತ ಹಿರಿದಾಗಿತ್ತು. ನಾವೆಲ್ಲರೂ ಅಹಿಂಸಾ ಮಾರ್ಗದಲ್ಲಿ ಚಳುವಳಿಯನ್ನು ನಡೆಸಬೇಕೆಂದು ನಿರ್ಧರಿಸಿದ್ದರೂ, ಆಗಿನ ಸರಕಾರ ಜನರನ್ನು ಬೆದರಿಸಲು ಹಾಗೂ ಬಗ್ಗು ಬಡಿಯಲು ಮಿಲಿಟರಿಯನ್ನು ತರಿಸಿ ಹೆದ್ದಾರಿಗಳಲ್ಲೂ, ಊರಲ್ಲೂ ಓಡಾಡಿಸ ಹತ್ತಿದರು. ಇದರಿಂದ ರೊಚ್ಚಿಗೆದ್ದ ಜನ ಸರ್ಕಾರದ ಆಸ್ತಿಪಾಸ್ತಿ ಹಾನಿಮಾಡಲು ಮುಂದಾದರು. ರೈಲುಕಂಬಿಯನ್ನು ಕೀಳುವುದು ಅಥವಾ ತಪ್ಪಿಸುವುದು, ಟೆಲಿಗ್ರಾಫ್ ತಂತಿಗಳನ್ನು ಕಡಿಯುವುದು, ಅಂಚೆಪೆಟ್ಟಿಗೆಗಳನ್ನು – ಅಂಚೆ ಕಛೇರಿಗಳನ್ನು ಶಾಲಾ ಪೀಠೋಪಕರಣಗಳನ್ನು ಸುಡುವುದು, ಸರ್ಕಾರದಕಾರ್ಯ ನಡೆಯದಂತೆ ಅಥವಾ ಸ್ಥಗಿತಗೊಳ್ಳುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈ ಚಳಿವಳಿಯ ರೂಪವಾಗಿ ಹೋಯ್ತು. ಸಂಚಾರ ಸೌಲಭ್ಯಗಳನ್ನು ಕತ್ತರಿಸುವ ಅಂದರೆ ಸೇತುವೆಗಳನ್ನು ಕೆಡಹುವ ಪ್ರಯತ್ನ ನಡೆಯಿತು. ವಿದ್ಯಾರ್ಥಿಗಳಿಗೆ ಟಿಕೆಟ್ ಇಲ್ಲದೆ ರೈಲಿನಲ್ಲಿ ಪ್ರಯಾಣ ಮಾಡುವ ಕಾರ್ಯ ಬಹಳ ಸುಲಭವಾಗಿತ್ತು.ಆದರೂ ವಿದ್ಯಾರ್ಥಿಗಳ ಗುಂಪೊಂದು ನಗರ ಮತ್ತು ನಗರದ ಸುತ್ತ ೧೨ ಮೈಲು ಕಾಲ್ನಡಿಗೆಯಿಂದ ಆಹಾರ ನಿದ್ರೆ ತೊರೆದು ಕುರ್ಕಿ, ಕೊಡಗನೂರು, ಹೆಬ್ಬಾಳು ಮುಂತಾದ ಕಡೆ ಸುತ್ತಿ ಮೆರವಣಿಗೆ ಸಭೆ ನಡೆಸಿದರು. ಸರಕಾರಿ ಯಂತ್ರವನ್ನು ಸ್ಥಗಿತಗೊಳಿಸುವ ಕಾರ್ಯಕ್ರಮದಂತೆ ಚಿತ್ರದುರ್ಗ ಜಿಲ್ಲೆಯ ವಿದ್ಯಾ ಇಲಾಖೆಯ ಆಫೀಸಿಗೆ ಬೆಂಕಿ ಇಟ್ಟು ಅಲ್ಲಿನ ಪೀಠೋಪಕರಣಗಳು ಹಾಗೂ ದಾಖಲೆಗಳನ್ನು ಸುಟ್ಟು ಹಾಕಿದರು. ಪಂಡ್ರಳ್ಳಿ, ಗುಡ್ಡದ ರಂಗಪ್ಪನಹಳ್ಳಿ, ಕಡಬನ ಕಟ್ಟೆ ಶಾಲೆಗಳಿಗೆ ಬೆಂಕಿ ಇಟ್ಟಿದ್ದಲ್ಲದೆ ಜಗಳೂರು ತಾಲ್ಲೂಕಿನ ಕಲ್ಲೇಪುರ ಶಾಲೆಯನ್ನು ಸಂಪೂರ್ಣ ಸುಟ್ಟು ಹಾಕಲಾಯಿತು. ಈ ಸಂಬಂಧ ಪಿ. ಚನ್ನಾರೆಡ್ಡಿಯವರಿಗೆ ಬಂಧನಕ್ಕೆಂದು ಪೋಲೀಸರು ಮನೆಗೆ ಬಂದಾಗ ಅವರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿ ಆಗಿದ್ದರು. ಕಡೆಗೊಂದು ದಿನ ಇನ್ನಾವುದೋ ಚಳುವಳಿಯಲ್ಲಿ ದಸ್ತಗಿರಿಯಾದ ಅವರನ್ನು ೧೯೪೩ರ ಜುಲೈ ೧ರಿಂದ ಅಕ್ಟೋಬರ್ ೮ ರವರೆಗೂ ಡಿಟೆನ್ಷನ್‌ನಲ್ಲಿ ಇಡಲಾಯಿತು.

ಒಮ್ಮೆ ಹೀಗೇ ಮಾಯಕೊಂಡದ ರೈಲ್ವೇ ಸ್ಟೇಷನ್‌ಗೆ ಒಂದು ಮೈಲು ದೂರದ ಒಂದು ರೈಲ್ವೇ ಸೇತುವೆಯನ್ನು ಸ್ವಲ್ಪ ಸಡಿಲಿಸಲಾಯ್ತು. ಆದರೆ ಡೈನಮೈಟ್ ಇಟ್ಟು ಅದನ್ನು ಒಡೆಯಲಾಗಲಿಲ್ಲ. ಆದರೂ ಗಾಡಿ ಊರಿನೊಳಗೆ ಬಂದಾಗ ಆ ಗಾಡಿಯು ತುಂಬಾ ೩೦೦ ಗ್ಯಾಂಗ್‌ಮನ್‌ಗಳೂ, ಮಿಲಿಟರಿಯವರೂ ಇದ್ದರು. ಎಲ್ಲರ ಕೈನಲ್ಲೂ ತುಪಾಕಿ(ಗನ್)ಗಳಿದ್ದವು. ಇಳಿದು ಬಂದವರೇ ನಮ್ಮ ಊರನ್ನು ಸುತ್ತುಗಟ್ಟಿ, ಗ್ರಾಮದ ಮುಖ್ಯಸ್ಥರಾದ ಎಂ.ಕೆ.ಎಚ್. ನಾಗಲಿಂಗಾಚಾರ್, ಎ. ನಂದ್ಯಪ್ಪ, ಕೆ. ಹುಚ್ಚಪ್ಪ, ಡಿ. ಕೊಟ್ರಪ್ಪ, ಎಂ. ದಾಸಪ್ಪ ಮುಂತಾದವರನ್ನು ಪಕ್ಷಿಗಳನ್ನು ಬಲೆಹಿಡಿದು ಬುಟ್ಟಿಗಳಲ್ಲಿ ತುಂಬುವಂತೆ ವ್ಯಾನಿನಲ್ಲಿ ತುಂಬಿ ಒಯ್ದರು. ಯಾಕೆ? ಏನು? ಎಂದರೆ ತುಪಾಕಿ ತೋರಿಸುತ್ತಿದ್ದರು. ದಾವಣಗೆರೆಯಲ್ಲಿ ಇವರಿಗೆಲ್ಲ ಶಿಕ್ಷೆ ವಿಧಿಸಿ ಚಿತ್ರದುರ್ಗ ಹಾಗೂ ಮೈಸೂರು ಜೈಲಿಗೆ ಒಯ್ದರು. ಇದೊಂದು ಯಾವುದೋ ಮಾಯಾವಿಯ ಮಾಯಾಲೋಕದ ಘಟನೆ ಎಂಬಂತೆ ನಮಗೆಲ್ಲರಿಗೂ ಭಾಸವಾಗಿತ್ತು.

೧೯೪೨ರ ಡಿಸೆಂಬರ್ ೫ಕ್ಕೆ ತುರುವನೂರು ಪೋಲೀಸ್ ಸ್ಟೇಷನ್ ಮೇಲೆ ಧ್ವಜ ಹಾರಿಸಿ 'ಕಾಂಗ್ರೆಸ್ ಕಛೇರಿ' ಎಂದು ಬೋರ್ಡ್ ಹಾಕಲಾಯಿತು. ಚಿತ್ರದುರ್ಗ ಜಿಲ್ಲಾ ಕಛೇರಿಯನ್ನು ವಶಪಡಿಸಿಕೊಳ್ಳಲು ಮಿಲಿಟರಿ ಬರದಂತೆತಡೆಯಲು ನಗರದ ಸೇತುವೆಯನ್ನುಒಡೆಯುವ ಸಂಚು ರೂಪಿಸಲಾಯಿತು. ಬಳ್ಳಾರಿಯಿಂದ ತರಿಸಿದ ಸಿಡಿಮದ್ದು ಸಿಡಿಯದೆ ಸೇತುವೆ ಹಾರಿಸಲಾಗಲಿಲ್ಲ. ಇದೇರೀತಿ ಚಳ್ಳಕೆರೆ–ಹಿರಿಯೂರು ರಸ್ತೆಯಲ್ಲಿ ಎರಡು ಸಲ ಟೆಲಿಗ್ರಾಫ್‌ತಂತಿ ಕತ್ತರಿಸಿದರು. ಈ ಕೃತ್ಯಗಳಿಗೆ ಚಿತ್ರದುರ್ಗದ ಎಸ್. ಗೋವಿಂದರೆಡ್ಡಿಯವರ ಮೇಲೆ ವಾರಂಟ್ ಹೊರಟಿತು. ಇವರು ಭೂಗತರಾದರು. ಇದೇ ಕಾಲದಲ್ಲಿ ಇವರ ಹೆಂಡತಿ ಹಡೆದು, ಹೆತ್ತ ಕೂಸಿಗೆ ಅಸೌಖ್ಯವೆಂದು ತಿಳಿದು ರಾತ್ರಿ ಮನೆಗೆ ಬಂದಾಗ ಬಂಧನವಾಯಿತು.

ದಾವಣಗೆರೆಯಲ್ಲಿ ಚಳುವಳಿ ಬೃಹತ್ ರೂಪ ತಾಳಿ ಗೋಲಿಬಾರಾಯಿತು. ಸರ್ಕಾರ ಮಿಲಿಟರಿ ಸಹಾಯವನ್ನೂ ತೆಗೆದುಕೊಳ್ಳುವ ಪರಿಸ್ಥಿತಿ ಉಂಟಾಗಿ ಅದೊಂದು ಸಮರಕಣವಾಗಿ ರೂಪುಗೊಂಡಿತು. ಅನೇಕರು ದಸ್ತಗಿರಿಗೊಂಡರು, ವಕೀಲ ಕಲ್ಲಪ್ಪ ಗೋಲಿಬಾರಿನಿಂದ ಗಾಯಗೊಂಡರು. ಐದು ಜನ ಅಸುನೀಗಿದರು. ಉತ್ತಂಗಿ ಮನೆತನದ ತರುಣನೊಬ್ಬನ ತೋಳಿಗೆ ನೆಟ್ಟಗುಂಡನ್ನು ಡಾ॥ ಗೋಪಾಲರಾವ್ ಹೊರತೆಗೆದು ಚಿಕಿತ್ಸೆ ಮಾಡಿದರು. ಮಾಯಕೊಂಡದ ಹತ್ತಿರ ಪದೇ ಪದೇ ನಮ್ಮವರು ರೈಲ್ವೆ ಹಳಿ ಕೀಳುತ್ತಿದ್ದುದ್ದರಿಂದ ಮಿಲಿಟರಿ ಕಾವಲನ್ನು ಸರ್ಕಾರ ಇಡಬೇಕಾಯಿತು. ಈ ಊರಿನಲ್ಲಿ ಅನೇಕರಿಗೆ ಶಿಕ್ಷೆಯಾಯಿತು. ಹೊಸದುರ್ಗ ರೈಲ್ವೆ ನಿಲ್ದಾಣದಿಂದ ಹೊಸದುರ್ಗಕ್ಕೆ



ಸ್ವಾತಂತ್ರ್ಯ ಯೋಧ [illegible]
[illegible] ಸಮಾಧಿ



ದಾವಣಗೆರೆಯಲ್ಲಿ 1943ರ ಕ್ವಿಟ್
ಇಂಡಿಯಾ ಚಳವಳಿಯಲ್ಲಿ
ಗೋಲಿಬಾರ್‌ನಲ್ಲಿ ಮರಣ ಹೊಂದಿದ
ಸ್ವಾತಂತ್ರ್ಯ ಯೋಧರ ಸ್ಮಾರಕ

ತೆಗೆದುಕೊಂಡು ಹೋಗುತ್ತಿದ್ದ ಅಂಚೆ ಚೀಲಗಳನ್ನು ಅಂಚೆ ಜವಾನನಿಂದ ಅಪಹರಿಸುವ ಕಾರ್ಯವನ್ನು ರೇವಣ್ಣ ಸಿದ್ದಪ್ಪ, ಪಂಚಾಕ್ಷರಯ್ಯ, ಡಿ.ಸಿ.ಕೃಷ್ಣಪ್ಪ, ಕೆ. ವೆಂಕಟರಾಮಯ್ಯ ಮತ್ತು ಬಿ.ಎನ್. ನರಸಿಂಹ ರೆಡ್ಡಿ ಮಾಡಿ ಶಿಕ್ಷೆಗೆ ಒಳಗಾದರು. ಹಿರಿಯೂರುತಾಲ್ಲೂಕು ಮದ್ದೂರು ಹಳ್ಳದ ಸೇತುವೆಗೆ ಡೈನಮೈಟ್ ಇಡಲು



ಹೋದ ಗೋವಿಂದ ಸ್ವಾಮಿಯವರ ಜೊತೆಗೆ ಉಗ್ರಯ್ಯ ಮತ್ತು ರಂಗಯ್ಯನವರು ಸಿಕ್ಕಿಬಿದ್ದು ಅವರೂ ಶಿಕ್ಷೆಗೆ ಒಳಗಾಗಬೇಕಾಯಿತು.

ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿಗೆ, ಪಂಡರಹಳ್ಳಿ, ಗುಡ್ಡದ ರಂಗವ್ವನಹಳ್ಳಿ, ಕಡಬನಕಟ್ಟೆ, ಕಲ್ಲೇದೇವರಪುರ ಮುಂತಾದ ಊರ ಶಾಲೆಗಳಿಗೆ ಚಿತ್ರದುರ್ಗ ರೈಲ್ವೇ ಸ್ಟೇಷನ್ ಹಾಗೂ ಚಿಕ್ಕಜಾಜೂರು ರೈಲ್ವೇ ಸ್ಟೇಷನ್‌ಗಳ ನೀರಿನ ಟ್ಯಾಂಕ್‌ಗಳಿಗೆ ಬೆಂಕಿ (ಆಗ ನೀರಿನ ಟ್ಯಾಂಕ್ಗಳು ಮರದಿಂದ ಮಾಡಲ್ಪಡುತ್ತಿತ್ತು) ಇಡುವ ಕಾರ್ಯದಲ್ಲೂ ಕೆಲ ಯುವಕರು ತೊಡಗಿದರು. ಪಟೇಲ್ ಸೋಮಣ್ಣ ಮುಂತಾದವರು ದಸ್ತಗಿರಿಯಾದರು. ದಸ್ತಗಿರಿಯಾಗದೆ ಗುಪ್ತವಾಗಿದ್ದು ಕೆಲಸ ಮಾಡಿದ ಪ್ರಮುಖರಲ್ಲಿ ಪಿ.ಚನ್ನಾರೆಡ್ಡಿ ಮತ್ತು ವೀರಬಸಯ್ಯ ಪುರಾಣಿಕಮಠ ಇವರಿಬ್ಬರು ಇದ್ದರು.

ಇಷ್ಟೆಲ್ಲಾ ಹೋರಾಟ, ರಕ್ತಪಾತ, ದುರ್ಲಭ ಜೀವನ, ಸಾವು–ನೋವು, ಹತಾಶೆಗಳ ನಡುವೆ ಅಂತೂ ೧೯೪೭ರಲ್ಲಿ ದೇಶ ಸ್ವತಂತ್ರವಾಯಿತು. ಎಲ್ಲಾ ಪತ್ರಿಕೆ, ಆಕಾಶವಾಣಿ, ದೂರದರ್ಶನಗಳಲ್ಲಿ ಸ್ವತಂತ್ರ ದೇಶದ ಸಂಭ್ರಮ ಮನೆಮಾಡಿತ್ತಾದರೂ ಮಹಮ್ಮದ್ ಅಲಿ ಜಿನ್ನಾರ ದೇಶ ವಿಭಜನೆಯ ಹುನ್ನಾರ ಹಾಗೂ ಯಶಸ್ವಿಕಾರ್ಯ ಎಲ್ಲರ ಮನಗಳಲ್ಲಿ ದುಃಖದ ಅಲೆಗಳನ್ನು ಎಬ್ಬಿಸಿ ಶಿಕ್ಷೆಗೆ ಒಳಪಡಿಸಿತ್ತು. ದೇಶವೇನೋ ಸ್ವತಂತ್ರವಾಯ್ತು. ಆದರೆ ಮೈಸೂರು ಸಂಸ್ಥಾನ ಇನ್ನೂ ಸ್ವತಂತ್ರವಾಗಿರಲಿಲ್ಲ. ಪೋಲೀಸರ ದೌರ್ಜನ್ಯ ಹಾಗೂ ಜನರ ಹೋರಾಟ ಸಾಗುತ್ತಲೇ ಇತ್ತು. ೧೯೪೭ರ ಸೆಪ್ಟೆಂಬರ್ ತಿಂಗಳಲ್ಲಿ 'ಜವಾಬ್ದಾರಿ ಸರ್ಕಾರ' ಎಂಬ ಹೋರಾಟ ಪ್ರಾರಂಭವಾಯಿತು. ಹೆಂಡದಂಗಡಿಗಳ ಪಿಕೆಟಿಂಗ್, ಈಚಲಮರ ಕಡಿಯುವುದು, ಹೆಂಡದ ಚೀಲಗಳನ್ನು ಕತ್ತರಿಸುವುದು, ಕೋರ್ಟ್ ಮತ್ತು ಕಛೇರಿಗಳ ಪಿಕೆಟಿಂಗ್, ಸರ್ಕಾರದ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದು, ಶಾಲೆಗಳಿಗೆ ಬಹಿಷ್ಕಾರ ಹಾಕುವುದು ಮುಂತಾದವುಗಳು ಹರಿಹರ ಪ್ರಾಂತ್ಯದ ಎಲ್ಲ ಭಾಗಗಳಲ್ಲಿಯೂ ನಡೆದವು. ಸಾವಿರಾರುಜನರು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಈ ಕಾಲದಲ್ಲಿ ಗೋವೆಯ ತನಕ ಗುಪ್ತವಾಗಿ ಹೋಗಿ ಅಲ್ಲಿಂದ ಸ್ಫೋಟಕ ವಸ್ತುಗಳನ್ನು ತುರುವನೂರಿಗೆ ತಂದು ಪೂರೈಸುತ್ತಿದ್ದವರು ಜಿ. ನಾರಾಯಣರಾವ್ ಅವರು. ಈ ವೇಳೆಯಲ್ಲಿ ಎಲ್ಲಾ ಲಾಕಪ್ ಭರ್ತಿಯಾಗಿ ಜಾಗವಿಲ್ಲದೆ ಟೌನ್‌ಹಾಲ್ ಮುಂತಾದ ಕಟ್ಟಡಗಳೇ ಜೈಲುಗಳಾದವು. ಜಿಲ್ಲಾ ಕಛೇರಿಯ ಮುಂದೆ ಊರ ಪೈಲ್ವಾನರು ಕೂಡಿ

ನಡೆಸಿದ ಉಗ್ರ ಪ್ರದರ್ಶನದಲ್ಲಿ ಗೋಲಿಬಾರಾಯಿತು. ಪುಣ್ಯಕ್ಕೆಯಾರ ಸಾವೂ ಸಂಭವಿಸಲಿಲ್ಲ.

೧೯೪೭ರಲ್ಲಿ ಎಚ್.ಸಿ.ನಾರಾಯಣ ಅಯ್ಯಂಗಾರ್‌ರವರಿಗೆ ಜಿಲ್ಲಾಧಿಕಾರಿಯ ಕಛೇರಿಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದಾಗಿ ಯಾರಿಂದಲೋ ಹೇಳಿಕೆ ಬಂತು. ನಂಬಿ ಅಲ್ಲಿಗೆ ಹೋದಾಗ ಪೋಲೀಸರು ಇವರ ಮೇಲೆ ಗುಪ್ತವಾಗಿ ದಾಳಿ ಮಾಡಿ ಹಿಗ್ಗಾಮುಗ್ಗಾ ಥಳಿಸಿದರು. ಆ ಸಮಯದಲ್ಲಿ ಪೋಲೀಸರಿಗೆ ತಮ್ಮ ಗಟ್ಟಿಧ್ವನಿಯಲ್ಲಿ "ನೀವು ನ್ಯಾಯಾಧೀಶರೂ ಅಲ್ಲ; ಇದು ನ್ಯಾಯಾಲಯವೂ ಅಲ್ಲ" ಎಂದು ಪೋಲೀಸರ ಎದೆಯಲ್ಲಿ ನಡುಕ ಹುಟ್ಟುವಂತೆ ಬೊಬ್ಬೆ ಹಾಕಿದ್ದರು. ಅಲ್ಲೇ ಅವರನ್ನು ಬಂಧಿಸಿ ಶಾಂತಿಭಂಗ ಹಾಗೂ ದೊಂಬಿ ಎಬ್ಬಿಸಿದ ಆಪಾದನೆ ಹಾಕಿ ಎರಡು ತಿಂಗಳು ಕಠಿಣ ಶಿಕ್ಷೆ ವಿಧಿಸಿದರು.

ಸರ್ಕಾರಿ ಕಟ್ಟಡಗಳ ಮೇಲೆ ಧ್ವಜ ಹಾರಿಸುವ ಕಾರ್ಯಕ್ರಮವು ಲಾಠಿಛಾರ್ಜು ಮತ್ತು ಗುಂಡಿನೇಟುಗಳಿಗೆ ಎಡೆಮಾಡಿಕೊಟ್ಟಿತು. ದಾವಣಗೆರೆಯಲ್ಲಿ ಬೆಳ್ಳಣ್ಣೆ ಕರಿಬಸಪ್ಪ, ಚಿತ್ರದುರ್ಗದಲ್ಲಿ ಅರ್ಥಂ ಸುಬ್ರಾಯ ಶೆಟ್ಟರು, ಹೊಸದುರ್ಗದಲ್ಲಿ ೭ ಜನರು ಎಂದರೆ ಕೊಂಡಾಪುರದ ದೊಡ್ಡ ಹನುಮಯ್ಯ ಬಿನ್ ಕರಿಯಣ್ಣ, ಮೂರು ಗುಂಡಿನ ದಿಬ್ಬದ ಹಿರೇತಿಮ್ಮಯ್ಯ ಬಿನ್ ಕರೆತಿಮ್ಮಯ್ಯ, ಗುತ್ತಿಕಟ್ಟೆ ಗ್ರಾಮದ ಸಣ್ಣಮ್ಮ ಕೋಂ. ರಂಗಪ್ಪ, ರಾಮಜ್ಜನಹಳ್ಳಿ ಮಜರೆ ಒಂಟಿನಗೆರೆಗವಿಯ ಕಾದಪ್ಪ ಬಿನ್ ಮೂರೀರಪ್ಪ ಮುಂತಾದವರು ಗುಂಡಿನೇಟಿಗೆ ತುತ್ತಾದರು.

ಚಿತ್ರದುರ್ಗದ ಜಿಲ್ಲಾ ಕಚೇರಿಯ ಸುತ್ತ ಸರ್ಪಗಾವಲಾಗಿ ಪೊಲೀಸರಿದ್ದರೂ ಅವರಿಗೆ ಕಾಣದಂತೆ ಕಟ್ಟಡದ ಮೇಲೇರಿ ಧ್ವಜ ಹಾರಿಸಿದವರು ಪೈಲ್ವಾನ್ ನಂಜಪ್ಪನವರು. ಚಿತ್ರದುರ್ಗದಲ್ಲಿ ಗುಂಡಿನೇಟಿನ ಪ್ರಕರಣ ನಡೆಯುತ್ತಿರುವ ಸಂದರ್ಭದಲ್ಲಿ ಧೈರ್ಯವಾಗಿ ಮುಂದೆ ನಿಂತು ಸತ್ಯಾಗ್ರಹಿಗಳ ಮುಖಂಡತ್ವ ವಹಿಸಿದವರು ಹೋ. ಬೋರಯ್ಯನವರು.

ಈ ಅಂತಿಮ ಹೋರಾಟದಲ್ಲಿ ಭಾಗವಹಿಸಿದವರು ಸಾವಿರಾರು ಜನರು. ಈ ಚಳುವಳಿಯನ್ನು ಎದುರಿಸುವುದು ಸರ್ಕಾರಕ್ಕೆ ಸಾಧ್ಯವಾಗದಾಯಿತು. ಮಹಾರಾಜರು ಜವಾಬ್ದಾರಿ ಸರ್ಕಾರವನ್ನು ಕಡೆಗೂ ಘೋಷಿಸಿದರು. ಕಾಂಗ್ರೆಸ್ ಸಮಿತಿ ಅಧಿವೇಶನ ಚಿತ್ರದುರ್ಗದಲ್ಲಿ ನಡೆದು ಆಗಲೇ ವಿಜಯೋತ್ಸವವು ಆರಂಭವಾಯಿತು. ಸಾರ್ವಜನಿಕ ಕಟ್ಟಡಗಳು ಎಲ್ಲಾ ಮನೆಗಳು ಅತಿಥಿಗಳಿಂದ



ತುಂಬಿದ್ದವು. ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳಾದ ಕೆ. ಚಂಗಲರಾಯ ರೆಡ್ಡಿ ಮತ್ತು ಕೆಪಿಸಿಸಿ ಅಧ್ಯಕ್ಷ ಎಸ್. ನಿಜಲಿಂಗಪ್ಪನವರ ಮೆರವಣಿಗೆ ಅತ್ಯಂತ ವೈಭವದಿಂದ ನಡೆಯಿತು. ಅಧಿವೇಶನದಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಟಿ. ಸಿದ್ದಲಿಂಗಯ್ಯನವರು ಚುನಾಯಿತರಾಗಿ ಅಧಿಕಾರ ವಹಿಸಿಕೊಂಡರು. ಕಾಂಗ್ರೆಸ್ ಹೊಸ ಹುರುಪಿನಿಂದ ಕಾರ್ಯೋನ್ಮುಖವಾಯಿತು.

## ಬುಲೆಟಿನ್ ಹಾಗೂ ದಿನಪತ್ರಿಕೆಗಳು

ಈ ಸಂಘರ್ಷದಲ್ಲಿ ದಿನಪತ್ರಿಕೆಗಳ ಕಾರ್ಯವನ್ನು ಮರೆಯುವ ಹಾಗೆಯೇ ಇಲ್ಲ. ೧೮೭೦ರ ಹೊಸ್ತಿಲಲ್ಲಿ ಬ್ರಿಟೀಷರ ಆಳ್ವಿಕೆಯಲ್ಲಿ ಭಾರತದಲ್ಲಿ ೬೪೪ ದಿನಪತ್ರಿಕೆಗಳಿದ್ದವು. ಅದರಲ್ಲೂ ಪ್ರಾದೇಶಿಕವಾಗಿ ೪೦೦ ಪತ್ರಿಕೆಗಳಿದ್ದವು. ಅನಕ್ಷರತೆಯ ಕೂಪವಾಗಿದ್ದ ಭರತಭೂಮಿಯಲ್ಲಿ ಒಬ್ಬ ಓದುಗನಿಗೆ ೧೦೦ ಕಿವಿಗಳು ಮೊರೆಯಿಡುತ್ತಿದ್ದವು ಎನ್ನುತ್ತಾರೆ. ಟೀ ಅಂಗಡಿಗಳಲ್ಲಿ, ದಿನಸಿ ಅಂಗಡಿಗಳಲ್ಲಿ ಒಬ್ಬ ಓದುಗ ಮಿತ್ರ ದೊರೆತರೂ ವಾರ್ತೆಯ ಪ್ರಲೋಭನೆಗೆ ಅವನನ್ನು ಕೆಣಕಿ ಆ ಪತ್ರಿಕೆಯನ್ನು ಅವನ ಬಾಯಿಯಿಂದ ಓದಿಸಿ ನಡೆಯುತ್ತಿದ್ದ ಘಟನಾವಳಿಗಳನ್ನು ಸಮಾಚಾರಗಳನ್ನು ತಿಳಿದು ಚರ್ಚಿಸುತ್ತಿದ್ದರು ಎಂದು ಆಂಗ್ಲ ವೈಸ್‌ರಾಯ್ ಒಬ್ಬರು ತಮ್ಮ ಆತ್ಮಕಥನದಲ್ಲಿ ಬರೆದಿದ್ದಾರಂತೆ. ಇಂತಹ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿಯೂ ಅನೇಕ ಅಂತಹ ದಿನಪತ್ರಿಕೆಗಳನ್ನು ನಾನು ನೋಡಿದ್ದೇನೆ.

ಮಹಾರಾಷ್ಟ್ರದ ಕೇಸರಿ ಪತ್ರಿಕೆಯಿಂದ ಸ್ಫೂರ್ತಿ ಪಡೆದ ಹರ್ಡೇಕರ್ ಮಂಜಪ್ಪನವರು ೧೯೦೬ರಲ್ಲಿ ತಮ್ಮ 'ಧನುರ್ಧಾರಿ' ಪತ್ರಿಕೆಯನ್ನು ಪ್ರಾರಂಭಿಸಿದರು. ಪತ್ರಿಕೆ ದಾವಣಗೆರೆಯಿಂದ ಪ್ರಕಟವಾಗುತ್ತಿತ್ತು. ಇದು ಹಣ ಸಂಪಾದನೆಗೆ ಒಂದು ಉದ್ಯೋಗವಾಗದೆ, ದೇಶಭಕ್ತಿ ಹರಡುವ ಸಾಧನವಾಯಿತು. ಸಂಗನ ಬಸಯ್ಯ ಎಂಬ ಶಿರಸಿ ಶಿಕ್ಷಕರು ಇವರ ಆರಂಭಿಕ ಮಾರ್ಗದರ್ಶಕರಾಗಿದ್ದರು. ಮೊದಲ ಪತ್ರಿಕೆ ಹಣದ ಅಡಚಣೆಯಿಂದ ನಿಂತ ಮೇಲೆ ಛಲಬಿಡದ ಮಂಜಪ್ಪನವರು ಸಚ್ಚಿದಾನಂದ ಎಂಬ ಮುದ್ರಣಾಲಯ ತೆರೆದರು. ಪತ್ರಿಕೆ ವಿಷಯದಲ್ಲಿ ಪೋಲೀಸರೊಡನೆ ಸಂಘರ್ಷವೂ ಆಯಿತು. ಗಾಂಧೀ ದರ್ಶನಕ್ಕೆಂದು ಗುಜರಾತಿನ ಸಾಬರಮತಿಗೆ ಹೋಗಿ ಅಲ್ಲೇ ನೆಲೆಸಿದ್ದು ತಮ್ಮ ಪ್ರಶ್ನೆಗೆ ಉತ್ತರವನ್ನೆಲ್ಲಾ ಕಂಡುಕೊಂಡು ಹಿಂದಿರುಗಿದ್ದರು. ಇವರಿಗೆ 'ಕರ್ನಾಟಕದ

ಗಾಂಧಿ' ಎಂದೇ ಎಲ್ಲರೂ ಸಂಬೋಧಿಸುತ್ತಿದ್ದರು. ಕೆ.ಎಂ. ರಾಜಶೇಖರ ಹಿರೇಮಠ ಇವರು ೧೯೩೭ರಲ್ಲಿ 'ಸತ್ಯವಾಣಿ' ರಾಷ್ಟ್ರೀಯ ಪತ್ರಿಕೆಯನ್ನು ತೆರೆದು ಸತತ ಎರಡು ವರ್ಷ ನಡೆಸಿ ಮುಂದೆ ಆರ್ಥಿಕ ಸಂಕಷ್ಟದಿಂದ ಮುಚ್ಚಿದ್ದರಂತೆ.

೧೯೪೨ರಲ್ಲಿ ಅಡ್ವೋಕೇಟ್ ಎಂ.ಶಿವಯ್ಯ, ತಿರುವನೂರಿನ ಗೌಡರು ಹಾಗೂ ತಿಪ್ಪೇಸ್ವಾಮಿಗಳ ನೆರವಿನಿಂದ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಖಾನಾಮಡು ಹೈಸ್ಕೂಲಿನಿಂದ ಸೈಕ್ಲೋಸ್ಟೈಲನ್ನು ತಂದು ದರ್ಶಿ ನಾರಾಯಣ ರಾಯರು, ಸತ್ಯನಾರಾಯಣ ರಾಯರು ಹಾಗೂ ಪಿ.ಚನ್ನಾರೆಡ್ಡಿಯವರ ಸಮೇತ 'ಪ್ರಳಯ' ಎಂಬ ಭೂಗತ ಬುಲೆಟಿನ್ ಹೊರಡಿಸುತ್ತಿದ್ದರು. ಇದರ ಗುಪ್ತ ಮಾರಾಟದ ಕೆಲಸ ಜಿ. ನಾರಾಯಣರಾವ್ ಅವರ ಹೆಗಲಿಗಿತ್ತು. ಇದರ ೨೩ ಸಂಚಿಕೆಯ ತನಕ ವಿತರಣೆ ಸಮರ್ಪಕವಾಗಿ ನಡೆಯಿತು. ತದನಂತರ ಈ ಪ್ರಕಟಣಾ ಮೂಲದ ಮಾಹಿತಿ ಒದಗಿಸುವವರಿಗೆ ೨೦೦ರೂ. ಬಹುಮಾನವನ್ನು ಸರಕಾರ ಪ್ರಕಟಿಸಿತಂತೆ. ಡಿಸೆಂಬರ್ ೧೨ರ ರಾತ್ರಿ ಜಿ. ನಾರಾಯಣ ರಾವ್ ಅವರ ಅಂಗಡಿಯನ್ನು ಪೋಲೀಸರು ಜಪ್ತಿ ಮಾಡಿ ಆಗ ಸಿಕ್ಕ ಬುಲೆಟಿನ್ ಪ್ರತಿಗಳು ಹಾಗೂ ಅನ್ಯ ಸಾಹಿತ್ಯಕ್ಕಾಗಿ ಅವರನ್ನು ಬಂಧಿಸಿದರು. ಪೋಲೀಸರ ಚಿತ್ರವಿಚಿತ್ರ ಹಿಂಸೆ ಎಲ್ಲೆ ಮೀರಿದರೂ ನಾರಾಯಣರಾಯರ ಬಾಯಿಂದ ಚಳುವಳಿಯ ಗುಟ್ಟನ್ನು ಹೊರಗೆಡವಲು ವಿಫಲರಾದರು. ಕಡೆಗೆ ಅವರ ಮನೆಗೆ ಹೋಗಿ ಅವರ ತಾಯಿಗೆ ೧೦೦ರೂ.ಗಳ ಆಸೆ ತೋರಿಸಿ ಬುಲೆಟಿನ್ ಬಗ್ಗೆ ಹಾಗೂ ಚಳುವಳಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ನೋಡಿದರಂತೆ. ಅಲ್ಲಿಯೂ ವಿಫಲರಾಗಬೇಕಾಯಿತು.

ಮನೆಯಕಡೆ ಪರಿಸ್ಥಿತಿ ಅಷ್ಟು ಹದವಾಗಿಲ್ಲದ ಕಾರಣ ಎಚ್.ಎಸ್. ಪಾಂಡುರಂಗ ಜೋಯಿಸರಿಗೆ ತಮ್ಮನ್ನು ತಾವು ಚಳುವಳಿಯಲ್ಲಿ ತೊಡಗಿಸಿಕೊಳ್ಳಲು ಆಗುತ್ತಿಲ್ಲ ಎಂಬ ದುಃಖ ಬಹುವಾಗಿ ಮನೆಮಾಡಿತ್ತು. ಇದೇ ಸಂದರ್ಭದಲ್ಲಿ 'ವಿಶ್ವ ಕರ್ನಾಟಕ', 'ತಾಯಿನಾಡು' ಪತ್ರಿಕೆಗಳ ಸುದ್ದಿ ಸಂಪಾದಕನಾಗಿ ಚಿತ್ರದುರ್ಗದ ಪರಿಸರದಲ್ಲಿ ನಡೆಯುತ್ತಿದ್ದ ಚಳುವಳಿಯ ಚಟುವಟಿಕೆ, ವಿಧ್ವಂಸಕ ಕೃತ್ಯಗಳ ವರದಿ ಮಾಡುತ್ತಾತಮ್ಮ ಒಳಗಿನ ಕ್ರಾಂತಿಯನ್ನು ವ್ಯಕ್ತಪಡಿಸಿದ್ದರು ಅವರು. ಇವರಈ ವರದಿಗಳನ್ನು ಗಮನಿಸಿದ ಆಂಗ್ಲ ಸರ್ಕಾರದ ಪೋಲೀಸರು ಈ ಚಟುವಟಿಕೆಯ ಹಿಂದಿನ ಕೈಗಳನ್ನು ಬಹಿರಂಗ ಪಡಿಸುವಂತೆ ಬೆದರಿಕೆಹಾಕಿ, ಇಲ್ಲದಿದ್ದರೆ ಜೈಲಿಗೆ ಹಾಕುವುದಾಗಿ ಹೆದರಿಸಿದ್ದರು. ಜೀವನದಲ್ಲಿ



ಬಡತನವಿತ್ತಾದರೂ ದೇಶಭಕ್ತಿಗೆ ಅವರ ಹೃದಯದಲ್ಲಿ ಬಡತನವಿರಲಿಲ್ಲ. ಈ ಎಲ್ಲವನ್ನೂ ಸೈರಿಸಿಯೇ ಅವರ ಜೀವನ ಪತ್ರಿಕಾರಂಗದಲ್ಲಿ ಸಾಗುತ್ತಲಿತ್ತು. ಯಾರಿಗೂ ಹೆದರದೆ ದಿಟ್ಟತನದಿಂದ ಎಲ್ಲಾ ಮಾಹಿತಿಯನ್ನು ಬಹಿರಂಗವಾಗಿ ಎಚ್.ಎಸ್. ಪಾಂಡುರಂಗ ಜೋಯಿಸರು ಪತ್ರಿಕೆಯಲ್ಲಿ ವರದಿ ಮಾಡುತ್ತಿದ್ದರು. ೧೯೪೭ರಲ್ಲಿ ಕೊಟಗಿ ಸಿದ್ದಲಿಂಗಪ್ಪ ಪೋಲೀಸರ ಬಿಗಿಬಂದೋಬಸ್ತ್‌ನ ನಡುವೆಯೂ 'ಕಹಳೆ' ಕೈ ಬರಹದ ಹಸ್ತಪ್ರತಿಯನ್ನು ಮನೆಮನೆಗೆ ಹಂಚಿದ್ದು ಅತ್ಯಂತ ವಿಶೇಷವಾದದ್ದು.

ಚಿತ್ರದುರ್ಗ ಕೊಲ್ಲಾರಯ್ಯನವರು 'ತಾಯಿನಾಡು' ಪತ್ರಿಕೆ ಹಿಡಿದು ಗಾಂಧೀಜಿಯವರ ಉಪವಾಸ ಸತ್ಯಾಗ್ರಹ, ನೆಹರೂರವರ ಸೆರೆಮನೆವಾಸ, ಪೋಲಿಸರ ಗೋಲಿಬಾರು ಮುಂತಾದ ರೋಮಾಂಚನಕಾರಿ ಸುದ್ದಿಯನ್ನು ತರಗತಿಯಲ್ಲಿ ಮಕ್ಕಳಿಗೆ ಹೇಳುತ್ತಿದ್ದರಂತೆ. ಬ್ರಿಟೀಷರ ಆಳ್ವಿಕೆಗೂ ಹಳ್ಳಿಗರ ಬಡತನಕ್ಕೂ ಇರುವ ಸಂಬಂಧದ ಎಳೆಗಳನ್ನು ಬಿಡಿಸಿ ವಿಚಾರ ಪ್ರಚೋದಕ ಸಂಗತಿಗಳನ್ನು ಬೋಧಿಸುತ್ತಿದ್ದರು. ಈ ಎಲ್ಲಾ ವಿವರಗಳು ಶಾಲಾ ವಿದ್ಯಾರ್ಥಿಗಳಲ್ಲಿ ಚಳುವಳಿಯ ಬಗ್ಗೆ ಅರಿವು ಹಾಗೂ ದೇಶದ ಸ್ವಾತಂತ್ರ್ಯದ ಬಗೆಗಿನ ಕಿಚ್ಚನ್ನು ಪ್ರಚೋದಿಸಲು ಸಹಕಾರಿಯಾಗುತ್ತಿತ್ತು.

ಮೈಸೂರು ಸರ್ಕಾರವು ಸತ್ಯಾಗ್ರಹ ಚಳುವಳಿಯನ್ನು ದಮನ ಮಾಡಲು ಅನೇಕ ನಾಯಕರನ್ನು ದಸ್ತಗಿರಿ ಮಾಡಿ ಪ್ರತಿಬಂಧಕಾಜ್ಞೆಗಳನ್ನು ಜಾರಿಗೆತಂದು ವೃತ್ತಪತ್ರಿಕೆಗಳ ಮೇಲೂ ಪ್ರತಿಬಂಧಕಗಳನ್ನು ಹೇರಿದ್ದರು. ಇದನ್ನು ವಿರೋಧಿಸಿ ೧೯೪೭ ಸೆಪ್ಟೆಂಬರ್ ೨ ರಿಂದ ೨೯ರವರೆಗೂ ಪತ್ರಿಕೆಗಳುತಮ್ಮ ಪ್ರಕಟಣೆಯನ್ನು ನಿಲ್ಲಿಸಿದ್ದವು. ಸರ್ಕಾರವು ನಿಷೇಧಾಜ್ಞೆಯನ್ನು ಹಿಂದಕ್ಕೆ ಪಡೆದ ನಂತರವೇ ಅವು ತಮ್ಮ ಪತ್ರಿಕಾ ಪ್ರಕಟಣೆಯನ್ನೂ ಪುನಃ ಪ್ರಾರಂಭಿಸಿದವು. ಸತ್ಯಾಗ್ರಹ ಕಾಲದಲ್ಲಿ ವೃತ್ತಪತ್ರಿಕೆಗಳ ನಿರ್ಬಂಧಕಾಜ್ಞೆಗಳನ್ನು ಸರ್ಕಾರ ಹಾಕಿದುದರಿಂದ ಮೈಸೂರು ಸಂಸ್ಥಾನದ ಎಚ್.ಎಸ್.ದೊರೆಸ್ವಾಮಿ, ರುಮಾಲೆ ಚನ್ನಬಸವಯ್ಯ ಮುಂತಾದ ಕೆಲವು ನಾಯಕರುಗಳು ಪಕ್ಕದ ಗಡಿಪ್ರದೇಶ ಹಿಂದೂಪುರಕ್ಕೆ ಹೋಗಿ ಅಲ್ಲಿಯೇ ನೆಲೆಸಿದ್ದು, ಅಲ್ಲಿಯ ಕೆಲವರ ಸಹಕಾರದಿಂದ ಒಂದು ಸತ್ಯಾಗ್ರಹ ಶಿಬಿರವನ್ನು ತೆರೆದು, ಅಲ್ಲಿ ಸಂಸ್ಥಾನದ ಸತ್ಯಾಗ್ರಹ ಬೆಳವಣಿಗೆಗಳನ್ನು 'ಪೌರವಾಣಿ'ಯಲ್ಲಿ ಪ್ರಕಟಿಸಿ ಸಾರ್ವಜನಿಕರಿಗೆ ಚಳುವಳಿಯ ವಿಷಯ ತಿಳಿಸುತ್ತಿದ್ದರು. ಎಸ್.ಎನ್. ಗುಪ್ತಾ (ಕಟಕಾ ಅಡ್ವಟೈಸಿಂಗ್) ಮದ್ರಾಸಿನಲ್ಲಿ

ಒಂದು ಶಿಬಿರವನ್ನು ಏರ್ಪಡಿಸಿ ಗುಟ್ಟಾದ ವಿಷಯಗಳನ್ನು ನಾಯಕರಿಗೆ ತಿಳಿಸುವ ಕೆಲಸ ಮಾಡಿದರು. ತುಮಕೂರಿನ ಆರ್.ಎಸ್. ಆರಾಧ್ಯರು ಹುಬ್ಬಳ್ಳಿಯಲ್ಲಿ ಒಂದು ಶಿಬಿರವನ್ನು ಏರ್ಪಡಿಸಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ಸಿನ ಸಹಕಾರದಿಂದ ಸಂಸ್ಥಾನದ ಗಡಿಪ್ರದೇಶದ ದಾವಣಗೆರೆ, ಹರಿಹರದಲ್ಲಿ ನಡೆದ ಚಳುವಳಿಗಳನ್ನು ನಿರ್ದೇಶಿಸಿದ್ದರು.




ಈ ಎಲ್ಲಾ ಸಂಘರ್ಷಗಳ ನಡುವೆಯೂ ಇಂದಿಗೂ ನಮ್ಮ ನಡುವೆ ಜೀವಂತವಾಗಿದ್ದು ತಮ್ಮ ಸ್ವಾತಂತ್ರ್ಯ ಚಟುವಟಿಕೆಗಳ ಮಾಹಿತಿಯನ್ನು ಬಂದವರಿಗೆಲ್ಲಾ ತಾಳ್ಮೆಯಿಂದ ಮೆಲ್ಲನೆಯ ಅಸ್ಪಷ್ಟ ಸ್ವರದಲ್ಲಿ ಹೇಳುವ ಅಜ್ಜ ಹರಿಹರದ ಗೋವಿಂದಪ್ಪ ಭೀಮರಾಮಪ್ಪನವರು. ಹರಿಹರದ ಹವಳದ ಕೇರಿಯಲ್ಲಿ ಈಗಲೂ ಮಗ ಅಶೋಕನ ಜೊತೆ ನೆಲೆಸಿದ್ದಾರೆ. ತಮ್ಮ ೯೫ರ ಇಳಿ ವಯಸ್ಸಿನಲ್ಲಿಯೂ ಮನೆಗೆ ಬರುವವರನ್ನು ನಗುಮೊಗದಿಂದ ಸ್ವಾಗತಿಸುವ ಹಿರಿಯಜೀವಿ ಅವರು. ಮಾತನಾಡಲು ಹೆಚ್ಚು ತ್ರಾಣವಿಲ್ಲ. ಕಿವಿಗೆ ಮಾತುಗಳು ಸ್ಪಷ್ಟವಾಗಿ ಕೇಳಿಸುವುದಿಲ್ಲ. ಆದರೂ ಅವರ ಕಣ್ಣಿನಲ್ಲಿನ ದೇಶಾಭಿಮಾನದ ಹೊಳಪು ಝುಗಮಗಿಸುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ದೇಹ ಹಿಂಸೆಗೊಳಪಟ್ಟು ಜರ್ಜರಿತವಾಗಿದ್ದರೂ, ಆತ್ಮಬಲ ಕುಂದಿಲ್ಲದಿರುವುದನ್ನು ಅವರ ಓಜಸ್ಸು ಸಾರಿಸಾರಿ ಹೇಳುತ್ತದೆ.

ಈಗ ಇವರಂತೆ ನನಗೂ ವಯಸ್ಸಾಗಿದೆ. ಯೌವ್ವನದಲ್ಲಿ ಹೋರಾಟ–



ಚಳುವಳಿಯಲ್ಲಿ ಸಂಪೂರ್ಣ ಧುಮುಕಿದ್ದರಿಂದ ಅಪ್ಪ ಅಮ್ಮನನ್ನು ನೋಡಿಕೊಳ್ಳಲು ಸಾಧ್ಯವಾಗಲಿಲ್ಲ. ಅವರ ಸ್ಥಾನದಲ್ಲಿ ಜೊತೆಗಿರುವವರು ಅತ್ತೆಯೊಬ್ಬರೇ. ಈಗ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾಳೆ. ನನ್ನೆಲ್ಲಾ ಚಳುವಳಿಯ ರಂಗದಲ್ಲೂ ನನ್ನನ್ನು ಸೈರಿಸಿ ಸಂಪೂರ್ಣ ಬೆಂಬಲ ಕೊಟ್ಟ ಮಾವ ಕಳೆದ ಗಣಪತಿ ಹಬ್ಬದ ದಿನದಂದು ತೀರಿಹೋದ. ಮಾವ ಆಗ ಕಷ್ಟಪಟ್ಟು ದುಡಿದು ಉಳಿಸಿಕೊಂಡ ೪ ಎಕರೆ ಅಡಿಕೆ ತೋಟದೊಂದಿಗೆ ನನ್ನ ಜೀವನ ಸಾಗುತ್ತಿದೆ.

ನಾನು ಹೇಳುವ ಕಡೆಯ ಮಾತು ಇಷ್ಟೆ. ಈ ಎಲ್ಲಾ ಸಂಘರ್ಷ ಸಮರಗಳಿಂದ ನಾವು ಅರಿತುಕೊಳ್ಳಬೇಕಾಗಿರುವುದು ನಮ್ಮ ಚಳುವಳಿಗಾರರ ಉದಾತ್ತ ಮನೋಭೂಮಿಕೆ, ಸದಾ ದೇಶಹಿತಪ್ರಧಾನವಾದ ಚಿಂತನಾ ಲಹರಿ, ಸಾರ್ವಜನಿಕ ಮೂಲದ ಹಣವನ್ನು ಸ್ವಂತಕ್ಕಾಗಿ ಎಂದೂ ಬಳಸದ ಪ್ರಾಂಜಲತೆ. ಇವು ಒಂದೊಂದೂ ಅನುಕರಣ ಯೋಗ್ಯ ಆದರ್ಶಗಳೇ. ಅಂಥವರ ಮೇಲ್ಪಂಕ್ತಿ ಮಾತ್ರ ದೇಶದ ತರುಣ ಪೀಳಿಗೆಯನ್ನು ಧ್ಯೇಯವಾದಿಯಾಗಿ, ಆದರ್ಶ ನಿಷ್ಠನಾಗಿ, ಸಚ್ಚಾರಿತ್ರ್ಯವಂತನಾಗಿ ರೂಪಿಸಬಲ್ಲದು. ಸ್ವತಂತ್ರ ಭಾರತದ ಬಗ್ಗೆ ನಮ್ಮ ಚಳುವಳಿಗಾರರು ಕಂಡ ಕನಸುಗಳೆಲ್ಲ ಆಗ ಮಾತ್ರ ನನಸಾಗಬಲ್ಲವು.

## ಮಾಹಿತಿ ಆಕರಗಳು


- ಸ್ವಾತಂತ್ರ್ಯ ಚಳುವಳಿಗೆ ಹರಿಹರ ತಾಲ್ಲೂಕಿನ ಕೊಡುಗೆ–ಕೃಷ್ಣಮೂರ್ತಿ ಸಿ. ಎನ್.
- ಚಿತ್ರದುರ್ಗ ಜಿಲ್ಲಾ ದರ್ಶಿನಿ: ಟಿ. ಗಿರಿಜಾ
- ದಾವಣಗೆರೆ ಇದು ನಮ್ಮ ಜಿಲ್ಲೆ ಮೂಲ: ಟಿ. ಗಿರಿಜಾ, ಪರಿಷ್ಕರಣೆ ಹಾಗೂ ಸಂಪಾದನೆ ಟಿ.ಎಸ್. ಶೈಲಜಾ
- Gazetteer of mysore 2- Benjamin louis rice
- ಹರಿಹರ ತಾಲ್ಲೂಕು ಗ್ಯಾಸೆಟಿಯರ್ – ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಬೆಂಗಳೂರು
- ಮೈಸೂರು ಸಂಸ್ಥಾನ ಸ್ವಾತಂತ್ರ್ಯ ಚಳುವಳಿ – ಕೆ. ವೀರತಪ್ಪ
- ಸಿಡಿದೆದ್ದ ಭಾರತ (೧೭೫೭–೧೯೪೭) – ಕಾ. ಶ್ರೀ. ನಾಗರಾಜ
- ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಪ್ರಥಮ ಸಂಪುಟ– ಡಾ. ಸೂರ್ಯನಾಥ ಕಾಮತ್
- ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ದ್ವಿತೀಯ ಸಂಪುಟ– ಡಾ. ಸೂರ್ಯನಾಥ ಕಾಮತ್
- ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ತೃತೀಯ ಸಂಪುಟ– ಡಾ. ಸೂರ್ಯನಾಥ ಕಾಮತ್
- ಸ್ವಾತಂತ್ರ್ಯ ಸೂರ್ಯೋದಯ – ಡಾ. ಸೂರ್ಯನಾಥ ಕಾಮತ್





- ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು – ಎಸ್.ಆರ್. ರಾಮಸ್ವಾಮಿ
- ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ ಕೆ.ಕೆಂಚಪ್ಪ – ಚಂದ್ರಶೇಖರ ತಾಳ್ಯ
- ಪ್ರತಿಭಾವಂತ ಸಂಸದೀಯ ಪಟುಗಳು ಪುಸ್ತಕಮಾಲಿಕೆ ಕೆ.ಎಚ್. ರಂಗನಾಥ್– ಎಲ್.ಎನ್. ಮುಕುಂದರಾಜ್
- ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು: ಡಿ.ಎಸ್. ದಿನಕರ್, ಬಸವಾನಿ ರಾಮಶರ್ಮ, ಟಿ.ಡಿ. ಶಂಕರನಾರಾಯಣರಾವ್
- History of freedom movement in Karnataka Volume 2 - Professor G.S.Halappa
- ನಾನಾ ನಿಂದ ನೇತಾಜಿಯವರಿಗೆ ಸ್ವಾತಂತ್ರ್ಯ ಸಂಗ್ರಾಮ ೧೮೫೭– ೧೯೪೭ – ಚಂದ್ರಶೇಖರ ಭಂಡಾರಿ
- ಸ್ವಾತಂತ್ರ್ಯ ಅಗ್ನಿಗೆ ಹವಿಸ್ಸು ಶ್ರೀ ಮೆಣಸಿನಹಾಳ ತಿಮ್ಮನಗೌಡ– ಪಂಚಾಕ್ಷರಯ್ಯ ಜಿ.ಎಂ. ಹೊನ್ನಾಳಿ
- ಡಿವಿಜಿ–ಜ್ಞಾಪಕ ಚಿತ್ರಶಾಲೆ: ಸಂಪುಟ–೪
- ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ–ಮೂಲ ಗ. ಪ್ರ. ಪ್ರಧಾನ, ಅನುವಾದ: ಸರಸ್ವತಿ ರಿಸಬೂಡ
- ವಿಕ್ರಾಂತ ಭಾರತ–ತಿತಾ ಶರ್ಮ


❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖